ಶ್ರೀಕೃಷ್ಣನ ವ್ಯಕ್ತಿತ್ವ

ಪ್ರೊ. ಎಸ್. ಕೆ. ರಾಮಚಂದ್ರರಾವ್



ಶ್ರೀಕೃಷ್ಣನ ವ್ಯಕ್ತಿತ್ವ

ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾವ್

IBH
ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

ಬೆಲೆ : ರೂ. 12–00
© ಲೇಖಕರು 1985
ಮೊದಲ ಮುದ್ರಣ : 1985. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ, ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

ನನ್ನ ಅಳಿಯ

ಅನಿಲ್‌ಕುಮಾರ್ ಗೆ

ಅವನ ಮದುವೆಯ ಸಂದರ್ಭದಲ್ಲಿ

(30-6-1985)

ಅ ರಿ ಕೆ

ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯವರು ೧೯೮೪ರ ಸಾಲಿನ ಶ್ರೀಕೃಷ್ಣಜಯಂತಿಯ ಸಂದರ್ಭದಲ್ಲಿ ಆಗಸ್ಟ್ ೨೨ರಂದು ಸಂಜೆ ನನ್ನ ಉಪನ್ಯಾಸವನ್ನೇರ್ಪಡಿಸಿದ್ದರು. ಅದಕ್ಕಾಗಿ ನಾನು ಆರಿಸಿ ಕೊಂಡ ವಿಷಯ 'ಶ್ರೀಕೃಷ್ಣನ ವ್ಯಕ್ತಿತ್ವ.' 'ವ್ಯಕ್ತಿತ್ವ'ವೆನ್ನುವ ಮಾತಿಗೆ ನನ್ನ ಮನಸ್ಸಿನಲ್ಲಿದ್ದ ಅರ್ಥ—ಅವನೊಬ್ಬ ವ್ಯಕ್ತಿ (ಮನುಷ್ಯ) ; ಮತ್ತು ಅವನಿಗೊಂದು ವಿಶೇಷವಾದ ಶಕ್ತಿಯಿದ್ದಿತು (ಅವತಾರ). ವ್ಯಕ್ತಿತ್ವವನ್ನು ಹೀಗೆ ಇಂಗ್ಲೀಷಿನಲ್ಲಿರುವ 'Hristorical Person' ಮತ್ತು 'Personality' ಎಂಬ ಪದಗಳಿಗೆ ಸಮಾನವಾದ ಪರ್ಯಾಯವೆಂದು ಗ್ರಹಿಸಿದ್ದೇನೆ. ಈ ಉಪನ್ಯಾಸವನ್ನೇ ಈಗ ವಿಸ್ತರಿಸಿ ಬರಹಕ್ಕಿಳಿಸಿದ್ದೇನೆ.

ಶ್ರೀಕೃಷ್ಣನ ವಿಚಾರವಾಗಿ ನನಗೆ ಎಳವೆಯಿಂದ ಆಸಕ್ತಿ. ನಾನು ರಾಮಾಯಣದ ಭಕ್ತನಾಗಿ, ಶ್ರೀರಾಮನನ್ನು ಪರೀಕ್ಷೆಗೆ, ಸಂಶೋಧನೆಗೆ ಒಳಪಡಿಸುವ ಸಾಹಸ ಎಂದೂ ಮಾಡಲಿಲ್ಲ. ಪ್ರತಿ ವರ್ಷವೂ ನವರಾತ್ರಿಯ ಸಂದರ್ಭದಲ್ಲಿ ನಡೆಸುವ ವಾಲ್ಮೀಕಿ ರಾಮಾಯಣದ ಪಾರಾಯಣ ನನಗೆ ತುಂಬ ಉಪಕಾರ ಮಾಡಿದೆ. ಈ ಚೌಕಟ್ಟಿನಿಂದ ಶ್ರೀರಾಮನನ್ನು ಹೊರ ಗೆಳೆಯುವ ಮನಸ್ಸು ನನಗೆ ಬಂದಿಲ್ಲ. ಶ್ರೀಕೃಷ್ಣನ ವಿಚಾರವಾಗಿ ನನಗೆ ಇಂಥ ಒತ್ತಡವೇನಿಲ್ಲ. ಕೃಷ್ಣಾವತಾರದ ಹಿರಿಮೆಯನ್ನೇನೋ ಮನಗಂಡಿ ದ್ದೇನೆ; ಗೀತೆಯ ಮೇಲೆ ಇರುವ ಹತ್ತಾರು ಭಾಷ್ಯಗಳನ್ನೂ ಟೀಕೆಗಳೊಂದಿಗೆ ಗೀತೆಯನ್ನು ಸಾವಧಾನವಾಗಿ ಅಭ್ಯಾಸಮಾಡಿದ್ದೇನೆ ; ಗೀತೆ ನನಗೆ ತುಂಬ ಪ್ರಿಯವಾದ ಶಾಸ್ತ್ರಭಾಗವೇ. ಆದರೆ ಭಾರತವಾಗಲಿ, ಹರಿವಂಶವಾಗಲಿ, ಭಾಗವತವಾಗಲಿ, ಪುರಾಣಗಳಾಗಲಿ, ಅವನ್ನು ನಾನು ಅಧ್ಯಯನಮಾಡುವ ಮೊದಲೂ, ಅಧ್ಯಯನ ಮಾಡಿದ ಮೇಲೂ ಅವುಗಳ ವಿಚಾರವಾಗಿ ಆದರ ಒದಗಿ ಬರಲಿಲ್ಲ. ನನ್ನ ದೃಷ್ಟಿಯಲ್ಲಿ ಅವು ಬರಿಯ ಗ್ರಂಥಗಳಾಗಿ ಉಳಿ ದುವು. ರಾಮಾಯಣದಂತೆ, ಗೀತೆಯಂತೆ ನನ್ನ ಹೃದಯವನ್ನು ಸೂರೆ ಗೊಳ್ಳಲಿಲ್ಲ.

ಹೀಗಾಗಿ ಶ್ರೀಕೃಷ್ಣನನ್ನು ಕುರಿತು ವ್ಯಾಸಂಗ ಮಾಡುವಾಗ, ಶ್ರೀಕೃಷ್ಣನ ಕಲ್ಪನೆಯಲ್ಲಿರುವ ಗೊಂದಲವನ್ನು ಬಿಡಿಸಲು ಸಾಧ್ಯವೇ ಎನ್ನುವ ಕುತೂಹಲವಿದ್ದಿತು. ನನ್ನ ಅಧ್ಯಯನದಿಂದ ನನಗೆ ಸ್ಪಷ್ಟ ವಾದುದು ಅವನು ಐತಿಹಾಸಿಕ ವ್ಯಕ್ತಿಯೆನ್ನುವುದು, ಅಸಾಧಾರಣವಾದ ಪ್ರತಿಭೆ, ಪ್ರಭಾವಗಳನ್ನೊಳಗೊಂಡ ವ್ಯಕ್ತಿತ್ವ ಅವನದ್ದೆನ್ನುವುದು. ನನ್ನ ಅಧ್ಯಯನದ ಫಲವನ್ನು ಸಹೃದಯರೊಂದಿಗೆ ಪಾಲ್ಗೊಳ್ಳುವುದು ನನ್ನ ಈ ಬರಹದ ಉದ್ದೇಶ.

ನಮ್ಮ ನಾಡಿನ ಸಂಸ್ಕೃತಿಯ ಮೇಲ್ಮೆಗೆ ಕಾರಣರಾದವರಲ್ಲಿ ಅತಿ ಮುಖ್ಯರೆಂದರೆ ಶ್ರೀರಾಮ, ಶ್ರೀಕೃಷ್ಣ. ಇವರನ್ನು ನಾವು ಅವತಾರ ಪುರುಷರೆಂದು ಇಂದಿಗೂ ಸನ್ಮಾನಿಸುತ್ತಿರುವುದು ಸಹಜವೇ. ಅವರ ಹಿರಿಮೆಯನ್ನು ಕುರಿತ ಅರಿವು ನಮ್ಮ ಜನರಲ್ಲಿ ಇನ್ನೂ ಹೆಚ್ಚಬೇಕು. ಆದರೆ ಅರಿವು ಕುರುಡುನಂಬಿಕೆಯಿಂದಾಗಲೀ ಭಾವುಕತೆಯಿಂದಾಗಲೀ ಬಲ ಗೊಳ್ಳಲಾರದು ; ಐತಿಹಾಸಿಕ ಪ್ರಜ್ಞೆ, ಯುಕ್ತಾಯುಕ್ತ ವಿವೇಚನೆ, ವಿಮರ್ಶೆಗಳು ಅರಿವಿನ ಆಳವನ್ನೂ, ಗುಣವನ್ನೂ ಹೆಚ್ಚಿಸಬಲ್ಲುವು. ಇದನ್ನು ಗಮನಿಸಿ ನನ್ನ ಕೈಲಾದಮಟ್ಟಿಗೆ ಭೂಮಿಕೆಯೊಂದನ್ನು ಸಿದ್ಧ ಪಡಿಸಿದ್ದೇನೆ. ಕಡೆಯ ಮಾತು ನನ್ನದೆಂದು ಇತರರಿರಲಿ, ನಾನು ಕೂಡ ನಂಬಿಲ್ಲ ! ನನ್ನ ಅಭಿಪ್ರಾಯಗಳನ್ನು ವಿದ್ವಾಂಸರು ಪೂರ್ವಪಕ್ಷವೆಂದಾ ದರೂ ಗ್ರಹಿಸಲಿ. ಆದರೆ ಇನ್ನಷ್ಟು ಅಧ್ಯಯನ ನಡೆಯಲಿ ಎಂದು ನನ್ನ ಹಾರೈಕೆ.

ಬರೆದುದನ್ನು ನನ್ನ ಪ್ರಿಯ ಮಿತ್ರರಾದ ಜಿ. ಕೆ. ಅನಂತರಾಮ್ (ಐಬಿಎಚ್ ಸಂಸ್ಥೆಯ ನಿರ್ದೇಶಕರು) ಅವರಿಗೆ ಸಲ್ಲಿಸುವುದು ನನಗೆ ಬಹು ವರ್ಷಗಳ ವಾಡಿಕೆ; ಸ್ನೇಹದಿಂದ, ವಿಶ್ವಾಸದಿಂದ ಅವರು ನನ್ನ ಬರಹಗಳನ್ನು ಪ್ರಕಟಿಸುತ್ತಲೂ ಬಂದಿದ್ದಾರೆ. ಈ ಬರಹವನ್ನೂ ಅವರಿಗೆ ಒಪ್ಪಿಸಿದೆ ; ಅವರು ಮೆಚ್ಚಿಕೊಂಡಿದ್ದಾರೆ, ನನ್ನ ಪುಣ್ಯ. ಹೆಚ್ಚೇನು ಹೇಳಲಿ ? ತೀರ ಆತ್ಮೀಯರಾದವರಿಗೆ ಕೃತಜ್ಞತೆಯನ್ನು ಮಾತಿನಿಂದ ಹೇಳಬಾರದೇನೋ !

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ಪ ರಿ ವಿ ಡಿ

		ಪುಟ
1.	ಸಮಸ್ಯೆಯೇನು ?	1
2.	ಕೃಷ್ಣನ ಕಲ್ಪನೆ ಬೆಳೆದುಬಂದ ಬಗೆ	5
3.	ಕೃಷ್ಣನು ಮನುಷ್ಯನೋ ದೇವರೊ ?	13
4.	ಶ್ರೀಕೃಷ್ಣ ಚರಿತ್ರೆ	21
5.	ಪುರಾಣದಲ್ಲಿ ಪರಿವರ್ತನೆ	27
6.	ಅವತಾರದ ತಾತ್ಪರ್ಯ	37
7.	ಯೋಗೇಶ್ವರನಾದ ಕೃಷ್ಣ	48
8.	ಜಾನಪದ ಚೌಕಟ್ಟು	57

ಶ್ರೀಕೃಷ್ಣನ ವ್ಯಕ್ತಿತ್ವ

(1) ಸಮಸ್ಯೆಯೇನು ?

ಶ್ರೀಕೃಷ್ಣನ ವ್ಯಕ್ತಿತ್ವ ಎಂದೊಡನೆ, ಕೃಷ್ಣ ವ್ಯಕ್ತಿಯೇ, ಅವತಾರವಲ್ಲವೇ ಎಂಬ ಶಂಕೆ ತಮ್ಮ ಮನಸ್ಸಿನಲ್ಲಿ ಮೂಡಬಹುದು. ಕೃಷ್ಣ ವ್ಯಕ್ತಿಯೂ ಹೌದು, ಅವತಾರವೂ ಹೌದು ಎಂದು ನನ್ನ ತಿಳುವಳಿಕೆ. ಇದನ್ನು ವಿವರಿಸುವುದು ಈ ಉಪನ್ಯಾಸದ ಉದ್ದೇಶ. ವ್ಯಕ್ತಿಯೆಂದರೆ ಇತಿಹಾಸದ ಎಳೆಗಳಲ್ಲಿ ಸೇರಿಬಂದವನು ; ಅವತಾರವೆಂದರೆ ಲೋಕ ಹಿತೈಷಿಯಾದ ಪ್ರಯೋಜನವೊಂದರ ಸಾಧನೆಗಾಗಿ ಇಳಿದುಬಂದವನು.

ಸಾಮಾನ್ಯವಾದ ಕಲ್ಪನೆಯಲ್ಲಿ ವ್ಯಕ್ತಿಯಾದರೆ ಮನುಷ್ಯ ; ಅವತಾರವಾದರೆ ದೇವರು. ವ್ಯಕ್ತಿಯೆಂದರೆ ಮನುಷ್ಯಸಹಜವಾದ ಗುಣದೋಷಗಳು, ಪರಿಮಿತವಾದ ಜ್ಞಾನಶಕ್ತಿಗಳು, ಹುಟ್ಟುಸಾವುಗಳು, ಬದುಕಿನಲ್ಲಿ ಏರುಪೇರುಗಳು. ಅವತಾರವೆಂದರೆ ಅಲೌಕಿಕವಾದ ಸಾಮರ್ಥ್ಯ, ಅಪ್ರಾಕೃತವಾದ ಜ್ಞಾನ, ಎದುರಿಲ್ಲದ ತೇಜಸ್ಸು. ಈ ಸಾಮಾನ್ಯದೃಷ್ಟಿಯಲ್ಲಿ ರಾಮ, ಕೃಷ್ಣ ಅವತಾರಗಳು ಮನುಷ್ಯರೂಪದವು. ಆದರೂ ಅವುಗಳ ಅದ್ಭುತವೆಂಬ ಕಳೆಯಲ್ಲೇನು ಕೊರತೆಯಿಲ್ಲ ; ಹಾಗೆಂದೇ ಅವನ್ನು 'ಲೀಲಾಮಾನುಷವಿಗ್ರಹ' ಗಳೆನ್ನುತ್ತಾರೆ. ಮನುಷ್ಯರೆಂಬ ಸೋಗು ಅಷ್ಟೆ, ಸತ್ತ್ವದಲ್ಲಿ ದೇವರೇ. ರಾಮಾವತಾರದಲ್ಲಾಗಲೀ ಕೃಷ್ಣಾವತಾರದಲ್ಲಾಗಲೀ ಅನೇಕ ಬವಣೆಗಳನ್ನನುಭವಿಸಿದರಲ್ಲವೇ, ಎಂದರೆ ಮನುಷ್ಯರಾಗಿ ಕಾಣಿಸಿಕೊಂಡಮೇಲೆ ಮನುಷ್ಯರಂತೆಯೇ ಬಾಳಬೇಕೆಂಬುದು ಸಮಾಧಾನ. ಅವರು ಪಟ್ಟ ಕಷ್ಟ–ಕೋಟಲೆಗಳೆಲ್ಲ ಬರಿಯ ತೋರಿಕೆಗಳು ಎಂದು ವಿವರಣೆ.

ಇದು ನನ್ನ ದೃಷ್ಟಿಯಲ್ಲ. ಮನುಷ್ಯನೇ ಆದರೂ ಭಗವದಾವೇಶವನ್ನು ತಳೆದು ಲೋಕೋದ್ಧಾರದ ಪ್ರಯೋಜನವನ್ನು ಸಾಧಿಸಲು ತನ್ನ

ಬದುಕನ್ನು ಮುಡಿಪಿಟ್ಟರೆ ಅದನ್ನು ಅವತಾರವೆಂದು ಕರೆದರೆ ತಪ್ಪೇನು ? ಧರ್ಮವೇ ಮೈವೆತ್ತು ಬಂದ ರಾಮ ಹೀಗೆ ಅವತಾರ ; ಮೂಲದಲ್ಲಿ ಅವನು ಮನುಷ್ಯನೇ, ತನ್ನ ಉದಾತ್ತವಾದ ವ್ಯಕ್ತಿತ್ವದಿಂದ ಪೂಜಾರ್ಹನಾದವನು. ಇದೇ ವಾಲ್ಮೀಕಿಗಳ ದೃಷ್ಟಿಯೆಂದು ನನ್ನ ನಂಬಿಕೆ. ಮಹಾಭಾರತದಲ್ಲಿ ಕೃಷ್ಣನನ್ನೂ ವ್ಯಾಸರು ಹೀಗೆಯೇ ಕಾಣಿಸಿದರು. ಕೃಷ್ಣನೂ ಧರ್ಮದ ಮೇಲ್ಮೆಗಾಗಿ ಮೈಗೂಡಿಸಿಬಂದಂತೆ ವ್ಯಾಸರ ಒಕ್ಕಣೆ. ದೇವರು ಬೇರೆ ಯಾವ ರೀತಿಯಲ್ಲೂ ಇಳಿದುಬರುವ ಸಂಭವವಿರದು. ಲೋಕೋತ್ತರಚಾರಿತ್ರ್ಯದ ಮನುಷ್ಯನಲ್ಲೇ ಭಗವದವತಾರವನ್ನು ನಾವು ಗುರುತಿಸಬೇಕು.

ರಾಮನ ಬದುಕಿನಲ್ಲಿ ಪವಾಡಗಳ ಮೆರೆತ ಕಡಮೆ ; ಕೃಷ್ಣನ ಬದುಕಿನಲ್ಲಿ ಇದರ ಮೇಲಾಟವೇ ಎದ್ದುಕಾಣುತ್ತದೆ ಎಂದು ಯಾರಾದರೂ ಹೇಳಿಯಾರು. ಅದಕ್ಕೆ ಕಾರಣವಿಷ್ಟೆ. ರಾಮನ ಬದುಕನ್ನು ಬಣ್ಣಿಸುವ ಗ್ರಂಥ ರಾಮಾಯಣವೊಂದೇ, ಮೂಲ ಆಕರ. ಆದರೆ ಕೃಷ್ಣನ ಬದುಕನ್ನು ಹಲವು ಆಕರಗಳು ಕಾಣಿಸುತ್ತವೆ, ಬೇರೆ ಬೇರೆ ಧೋರಣೆಯ ಗ್ರಂಥಗಳು ಅವು. ಇತಿಹಾಸದಲ್ಲಿ ಸೇರುವುದು ಮಹಾಭಾರತವೊಂದೇ. ಅದರಲ್ಲಿ ಕೃಷ್ಣನ ಪಾತ್ರ ಪ್ರಮುಖವಾದುದೇ ಆದರೂ ಅಲ್ಲಿ ಅವನು ಬಹುಮಟ್ಟಿಗೆ ಮನುಷ್ಯಮಾತ್ರದವನೇ. ಆದರೆ ಜನಪ್ರೀತಿಯನ್ನೂ ಪ್ರಾಚುರ್ಯವನ್ನೂ ಪಡೆದುಕೊಂಡ ಭಾಗವತ, ಹರಿವಂಶ, ಹಲವು ಪುರಾಣಗಳು ಕೃಷ್ಣನನ್ನೇ ನಾಯಕನನ್ನಾಗಿ ಇರಿಸಿಕೊಂಡು ಸಿದ್ಧವಾಗಿವೆ. ಇವುಗಳಲ್ಲೆಲ್ಲ ಇವನ ಮನುಷ್ಯತ್ವದ ಮೇಲೆ ಒತ್ತು ಕಡಮೆ, ದೇವತ್ವದ ಮೇಲೆ ಒಲವು ಹೆಚ್ಚು. ಹೀಗಾಗಿ ಅದ್ಭುತಪ್ರಸಂಗಗಳ ಸುರಿಮಳೆ ಅಲ್ಲಿರುವುದು ಸಹಜವೇ.

ಬದುಕಿನ ಜಂಜಾಟದಲ್ಲಿ ಮುಳುಗೇಳುವವರಿಗೂ, ಬರಡುಬಾಳಿಂದ ಬೇಸರಗೊಂಡವರಿಗೂ ಇಂಥ ಅದ್ಭುತಪ್ರಸಂಗಗಳಲ್ಲಿ ಸೊಗಸು ಕಾಣುವುದೂ ಸಹಜವೇ. ವಿಚಾರದ ಅಗತ್ಯವಿಲ್ಲದೆ ಆಯಾಸವಿಲ್ಲದೆ ಭಾವಗಳ ಹೊನಲಲ್ಲಿ ಹರಿದುಹೋಗುವುದು ಸಾಮಾನ್ಯಜನರಿಗೆ ಪ್ರಿಯವಾದುದು ಮಾತ್ರವಲ್ಲ, ಅವರ ಅಧಿಕಾರಕ್ಕೆ ತಕ್ಕದ್ದೂ ಹೌದು. ಅದರಿಂದ ಪ್ರಯೋಜನವಿರದೆಂದು ನಾನು ಹೇಳಲಾರೆ. ಮನುಷ್ಯನಿಗೆ ಮಿದುಳೂ ಬೇಕು. ಅದಕ್ಕಿಂತ ಮಿಗಿಲಾಗಿ ಒಡಲೂ ಬೇಕು. ಬುದ್ಧಿಶಕ್ತಿ,

ಹೃದಯಸಂಸ್ಕಾರ ಎರಡೂ ಅಗತ್ಯವೇ. ಆದರೆ ದಿನನಿತ್ಯದ ಬದುಕಿನಲ್ಲಿ ಬುದ್ಧಿಶಕ್ತಿಯ ಅಗತ್ಯಕ್ಕಿಂತ ಹೃದಯಸಂಸ್ಕಾರದ ಅಗತ್ಯವೇ ಹೆಚ್ಚು. ಆದುದರಿಂದಲೇ ನಮ್ಮ ಹಿರಿಯರು ಹೃದಯಸಂಸ್ಕಾರಕ್ಕೆ ನೆರವಾಗುವ ಸಂಗೀತ, ಪುರಾಣ, ಪ್ರವಚನ, ಹರಿಕಥೆ ಮೊದಲಾದ ಸಾಧನೆಗಳನ್ನು ಬಹು ಜನರ ಪಾಲಿಗೂ, ಬುದ್ಧಿಶಕ್ತಿಯ ಬಳಕೆ ಬೇಕಾದಂಥ ಶಾಸ್ತ್ರಭಾಗವನ್ನು ಕೆಲವೇ ಜನರ ಪಾಲಿಗೂ ಸಲ್ಲಿಸಿದರು.

ಬಹುಜನರ ಅಗತ್ಯದ ಪ್ರಭಾವ ಕೆಲವೇ ಜನರ ಅಗತ್ಯದ ಮೇಲೂ ಪ್ರಭಾವವನ್ನು ಬೀರುವುದು ಸರಿಯಷ್ಟೆ. ಹೀಗಾಗಿ ಶಾಸ್ತ್ರದಲ್ಲಿ ಕೂಡ ಅದ್ಭುತಪ್ರಸಂಗಗಳ ನಿರೂಪಣೆ ಒದಗಿಬಂದು ಕವಿಕಲ್ಪನೆಯ ಭಾಗವೆಷ್ಟು ವಿಚಾರದ ಭಾಗವೆಷ್ಟು ಎಂಬ ಪರಿವೆ ಜಾರಿಹೋಯಿತು. 'ಕೃಷ್ಣದೇವಕೀ ಪುತ್ರ'ನಿಗೂ 'ಕೃಷ್ಣಪರಮಾತ್ಮ'ನಿಗೂ ಅಂತರ ಮೊಟಕಾಯಿತು. ಅದ್ಭುತಗಳಲ್ಲಿ ಅಸಂಭಾವ್ಯವಾದುದೇನಿರದೆಂಬ ಸಮಾಧಾನ ಮೂಡಿ ಕೊಂಡಿತು. ಇತಿಹಾಸದ ವ್ಯಕ್ತಿಯೆಂಬ ಅರಿವು ಹಿಂದಕ್ಕೆ ಸರಿದು ಅವ ತಾರದ ಹಿರಿಮೆಯೇ ಗರಿಕೆದರಿ ನಿಂತಿತು. ಕೃಷ್ಣಭಕ್ತಿಯ ಮಹಾಪೂರದಲ್ಲಿ ಕೃಷ್ಣನ ವ್ಯಕ್ತಿತ್ವ ಮುಳುಗಿಹೋಯಿತು.

ವಿಷ್ಣುಪುರಾಣದಲ್ಲಿ ಕೃಷ್ಣನು ಹದಿನಾರುಸಾವಿರ ಏಳುಮಂದಿ ಹೆಂಗಳೆಯರನ್ನು ಮದುವೆಯಾದನೆಂದು ಹೇಳುವಾಗ, ಭಾಗವತ–ಹರಿ ವಂಶಗಳಲ್ಲಿ ಅವನು ಜಾರ, ಚೋರ, ಹಿಂಸಕ, ಕಪಟಿ ಎಂದು ಮುಂತಾಗಿ ದುರ್ಗುಣಗಳನ್ನೇ ಎತ್ತಿ ತೋರಿಸುವಾಗ, ಬ್ರಹ್ಮವೈವರ್ತಪುರಾಣದಲ್ಲಿ ಅವನು ಗರತಿಯಾದ ರಾಧೆಯನ್ನು ಕೆಡಿಸಿದನೆಂದು ಬಣ್ಣಿಸುವಾಗ ಯಾವ ಸಂಪ್ರದಾಯಸ್ಥನೂ ಇವೆಲ್ಲ ಚರಿತ್ರೆಯಲ್ಲಿ ನಡೆದ ಸಂಗತಿಗಳೆಂದು ಭಾವಿಸುವುದಿಲ್ಲ. ಕೃಷ್ಣನ ಈ ಬಗೆಯ ಆದರ್ಶವನ್ನು ಇತರರು ಹಿಡಿಯ ಬೇಕೆಂದು ಯಾವ ಶ್ರದ್ಧಾಳುವೂ ಸೂಚಿಸುವುದಿಲ್ಲ. ಇವುಗಳಿಂದ ಕೃಷ್ಣನ ಪೂಜ್ಯತೆಯೆಂದು ಯಾವ ಕೃಷ್ಣಭಕ್ತನೂ ನಂಬುವುದಿಲ್ಲ. ಈ ಪ್ರಸಂಗ ಗಳನ್ನು ಓದುವಾಗ, ಕೇಳುವಾಗ ಅದರಲ್ಲಿನ ಕಾವ್ಯರಸವಷ್ಟೇ ಪ್ರಧಾನ ; ಭಕ್ತಿಗೆ ಪೂರಕವಾಗಿ ಕೆಲವೊಂದು ವಿವರಗಳು ಮನದಟ್ಟಾದರೆ ಸಾಕು. ಕೃಷ್ಣ ಜಾರನೋ, ಚೋರನೋ, ಕಪಟಿಯೋ, ಲಂಪಟನೋ ಅದರ ಗೊಡವೆ ಏಕೆ ? ಎಂದು ಕೆಲವರ ನಿಲುವು.

ಆದರೆ ವಿಚಾರವಂತರಿಗೆ ಇದು ಸಮಾಧಾನವನ್ನು ತರುವುದಿಲ್ಲ. ಜಗದು ರುವೆಂದು ಬಗವದಿ ೀತೆ ಎತಿ.ಹಿಡಿದಿರುವ ಆದರ್ಶವನು.. ಬಾಗವತ

–ಪುರಾಣ–ಹರಿವಂಶಗಳು ಸಮರ್ಥಿಸಲಾರವು. ಇಲ್ಲಿನ ಕೃಷ್ಣನಿಗೂ ಅಲ್ಲಿನ ಕೃಷ್ಣನಿಗೂ ಯಾವ ನೆಂಟಿದ್ದೀತು? ಅವನೇ ಇವನು ಎನ್ನಲಾದೀತೆ? ಜಾರ, ಚೋರ, ಕಪಟಿ, ಲಂಪಟನೆಂದಾದವನು ಗೀತೆಯ ಉದಾತ್ತತತ್ತ್ವಗಳನ್ನು ಬೋಧಿಸಬಲ್ಲನೆ ? ಈ ಸಮಸ್ಯೆ ಯಾವ ವಿಚಾರವಂತನನ್ನೂ ಕಾಡದೆ ಬಿಡದು. ಕೃಷ್ಣನ ದಿಟವಾದ ಸ್ವರೂಪವೇನು ಎಂಬುದನ್ನು ಅರಿತುಕೊಳ್ಳುವ ತವಕ ಯಾರಿಗಾದರೂ ಇದ್ದೀತು.

ಈ ವಿಚಾರವಾಗಿ ವಿಲಾಯತಿಯ ವಿದ್ವಾಂಸರೂ, ಅವರ ಜಾಡನ್ನೇ ಹಿಡಿದು ಅವರ ನಿರ್ಣಯಗಳನ್ನೇ ಚಪ್ಪರಿಸುತ್ತಿರುವ ನಮ್ಮ ವಿದ್ವಾಂಸರೂ, ಬಹುವಾಗಿ ಬರೆದಿದ್ದಾರೆ. ಕೃಷ್ಣನೆಂಬುವನೇ ಇರಲಿಲ್ಲ, ಇದ್ದವನಾದರೂ ಒಬ್ಬನಲ್ಲ, ಒಬ್ಬನಾದರೂ, ಆದರ್ಶಪುರುಷನಲ್ಲ ; ಹೀಗೆ ಹಲವಾರು ವಾದಗಳು ಹರಡಿಕೊಂಡಿವೆ. ಕೃಷ್ಣನನ್ನು ಕುರಿತು ನಮ್ಮ ಕವಿಗಳು ಏರ್ಪಡಿಸಿರುವ ಕಲ್ಪನೆಗಳ ಕಾಡಿಗಿಂತ ದಟ್ಟವಾಗಿದೆ ಈ ವಿದ್ವಾಂಸರ ವಿಮರ್ಶೆಗಳ ಕಾಡು ! ಇವನ್ನು ನಾವು ಮೇಲೇರಿಸಿಕೊಂಡು ಹೋಗುವ ಕಾರಣವಿಲ್ಲ. ಸಂಪ್ರದಾಯದಲ್ಲಿ ಬಂದಿರುವ ಕೃಷ್ಣಕಲ್ಪನೆಯಷ್ಟನ್ನೇ ನಾವು ಮನವರಿಕೆಮಾಡಿಕೊಂಡರೆ ಅದರಿಂದ ಪ್ರಯೋಜನವಿದೆ. ಮುಂದೆ ಎಂದೋ ಅದಕ್ಕೆ ಹೊಂದಿಕೊಂಡುಬಂದ ಅನೃತಗಳನ್ನು ದೂರವಿರಿಸಬೇಕು, ಅಷ್ಟೆ.

(2) ಕೃಷ್ಣನ ಕಲ್ಪನೆ ಬೆಳೆದುಬಂದ ಬಗೆ

ಈಗ ನಮಗೆ ಕೃಷ್ಣನ ವಿಚಾರವಾಗಿ ಬಳಕೆಯಲ್ಲಿ ಇರುವ ಆಕರಗಳು ಇಷ್ಟೇ–ಮಹಾಭಾರತ, ಭಾಗವತಪುರಾಣ (ಹತ್ತು ಮತ್ತು ಹನ್ನೊಂದನೆಯ ಸ್ಕಂಧಗಳು), ಅದಕ್ಕೆ ಸೇರಿದ ಹರಿವಂಶ, ಕೆಲವು ಪುರಾಣಗಳು (ಬ್ರಹ್ಮಪುರಾಣ, ಪೂರ್ವಭಾಗ ; ವಿಷ್ಣುಪುರಾಣ, ಪಂಚಮಾಂಶ ; ಬ್ರಹ್ಮವೈವರ್ತಪುರಾಣ, ಮೂರನೆಯ ಖಂಡ ; ಮುಖ್ಯವಾಗಿ ಇವು ಮೂರು ; ಉಳಿದಂತೆ ವಾಯು, ವಾಮನ ಕೂರ್ಮಪುರಾಣಗಳು). ಈ ಆಕರಗಳಲ್ಲೆಲ್ಲ ಕೃಷ್ಣನ ವಿಚಾರವಾಗಿ ಬರುವ ವಿವರಗಳಲ್ಲಿ ಹೊಂದಾಣಿಕೆ ಕಾಣುವುದಿಲ್ಲ ; ಒಂದೇ ಆಕರದಲ್ಲಿಯಾಗಲಿ ವಿವರಗಳು ಸುಸಂಗತವಾಗಿದೆಯೆಂದು ಹೇಳುವಹಾಗಿಲ್ಲ. ಪುರಾಣಕಾರರ ಕಲ್ಪನೆಗಳು ಯಾವೊಂದು ನಿರ್ದಿಷ್ಟ ಮೂಲ ಆಕರವನ್ನೂ ಅವಲಂಬಿಸಿದಂತೆ ತೋರುವುದಿಲ್ಲ. ಬಹುಮಟ್ಟಿಗೆ ಜಾನಪದ ಕಥೆಗಳನ್ನು ಆಯ್ದುಕೊಂಡು ಕೃಷ್ಣನ ಬದುಕಿನ ಹಂದರದ ಮೇಲೆ ಹರವಿದಂತೆ ತೋರುತ್ತದೆ. ಅವುಗಳನ್ನು ಹಿಡಿದು ನಾವು ಕೃಷ್ಣನ ಚಿತ್ರಣವನ್ನು ಮೂಡಿಸಿಕೊಳ್ಳುವುದು ಸರಿಯಲ್ಲ.

ಬಂಗಾಳದ ಸುಪ್ರಸಿದ್ಧ ಲೇಖಕರಾದ ಬಂಕಿಮ ಚಂದ್ರ ಚಟ್ಟೋಪಾಧ್ಯಾಯರು ಬಂಗಾಳಿಯಲ್ಲಿ ಶ್ರೀಕೃಷ್ಣಚರಿತ್ರವೆಂಬ ವಿಮರ್ಶಾತ್ಮಕ ಗ್ರಂಥವೊಂದನ್ನು ಬರೆದರು. ಅದನ್ನು ಆರ್. ವ್ಯಾಸರಾಯರು ಕನ್ನಡಕ್ಕೆ ಅನುವಾದಮಾಡಿದ್ದಾರೆ. ಇದರಲ್ಲಿ ಐತಿಹಾಸಿಕ ಕೃಷ್ಣನನ್ನು ಅರಸುವ ಪ್ರಯತ್ನ ನಡೆದಿದೆ. ಚಟ್ಟೋಪಾಧ್ಯಾಯರು ಭಾಗವತ, ಹರಿವಂಶ, ಪುರಾಣಗಳಲ್ಲಿ ತಡುಕಾಡಿ, ಅದ್ಭುತವೆಂಬಂಥ ವಿವರಗಳನ್ನು ಜಾಲಾಡಿ, ಇತಿಹಾಸದ ಒರೆಗಲ್ಲಿಗೆ ನಿಲ್ಲಬಲ್ಲ ಕೃಷ್ಣನನ್ನು ಹಿಡಿದಿಟ್ಟಿದ್ದಾರೆ. ಇದು ತುಂಬ ಸ್ತುತ್ಯವಾದ ಸಾಹಸವೇ. ಆದರೆ ಅವರ ಪ್ರಯತ್ನದಲ್ಲಿ ಭಗವದ್ಗೀತೆ, ಪಾಂಚರಾತ್ರ ಇವುಗಳ ಹಿನ್ನೆಲೆ ಸೇರಿಬಂದಿಲ್ಲ. ಈಗ ಕೃಷ್ಣನ ಪ್ರಶಸ್ತಿ ಭಗವದ್ಗೀತೆಯಿಂದಲೇ ನಿಂತಿದೆಯಷ್ಟೆ. ಮಹಾಭಾರತ

ದಲ್ಲಿ ಧೀರೋದಾತ್ತ ವ್ಯಕ್ತಿಯಾಗಿ ಕಾಣಿಸಿಕೊಳ್ಳುವ ಕೃಷ್ಣ ಗೀತಾಚಾರ್ಯ ನಾಗಿಯೇ ಜಗದ್ಗುರುವೆಂದಾಗಿರುವುದು. ಇದನ್ನು ಪಂಡಿತ ಸೀತಾನಾಥ ತತ್ತ್ವಭೂಷಣರ 'ಕೃಷ್ಣ ಮತ್ತು ಗೀತೆ' ಎಂಬ ಇಂಗ್ಲಿಷ್ ಪುಸ್ತಕ (1915) ಎತ್ತಿ ತೋರಿಸುತ್ತದೆ. ಆದರೆ ಇವರು'ಗೀತೆಯ ತತ್ತ್ವಪ್ರಮೇಯ ಗಳ ಕಡೆಯೇ ಹೆಚ್ಚು ಗಮನವಿತ್ತು, ಕೃಷ್ಣನ ಐತಿಹಾಸಿಕ ವ್ಯಕ್ತಿತ್ವವನ್ನು ಅಷ್ಟಾಗಿ ಗಮನಿಸಿಲ್ಲ. ಅವರು 'ಕೃಷ್ಣನೂ ಪುರಾಣಗಳೂ' (1926) ಎಂಬ ಇನ್ನೊಂದು ಇಂಗ್ಲಿಷ್ ಪುಸ್ತಕವನ್ನು ಬರೆದರು. ಬಂಗಾಳದ ವೈಷ್ಣವಪಂಥವನ್ನೇ ವಿಮರ್ಶೆಗೆ ಹೆಚ್ಚು ಎತ್ತಿಕೊಂಡಿದ್ದಾರೆ ಇಲ್ಲಿ. ಕೃಷ್ಣನ ಐತಿಹಾಸಿಕತೆಯನ್ನು ನಿರಾಕರಿಸಿದ್ದಾರೆ. ಮೂರೂ ಗ್ರಂಥಗಳಲ್ಲಿ ಆಳವಾದ ವಿವೇಚನೆಯೇನೋ ಇದೆ. ಚಟ್ಟೋಪಾಧ್ಯಾಯರು ಕೃಷ್ಣ ಭಕ್ತರು ; ತತ್ತ್ವಭೂಷಣರು ಗೀತಾಪ್ರೇಮಿಗಳು. ಇಬ್ಬರಿಂದಲೂ ಜಿಜ್ಞಾಸುಗಳಿಗೆ ಉಪಕಾರವಾಗಿದೆ.

ಇಲ್ಲಿ ನಾನು ಕಾಣಿಸುವ ದೃಷ್ಟಿ ಇವೆರಡಕ್ಕಿಂತ ಬೇರೆಯಾದುದು, ಆದರೆ ಎರಡನ್ನೂ ವಿರೋಧಿಸುವುದಲ್ಲ. ಕೃಷ್ಣನ ವ್ಯಕ್ತಿತ್ವವನ್ನು ಮನ ದಟ್ಟುಮಾಡಿಕೊಳ್ಳಲು ಭಾಗವತ, ಹರಿವಂಶ, ಪುರಾಣಗಳು, ಮಹಾ ಭಾರತ, ಭಗವದ್ಗೀತೆಗಳಷ್ಟೇ ಸಾಕಾಗುವುದಿಲ್ಲ. ಗೀತೆಗೆ ಹಿನ್ನೆಲೆಯಾದ ಪಾಂಚರಾತ್ರ ಸಂಪ್ರದಾಯದ ಪರಿಚಯವೂ ಅಗತ್ಯವಾಗುತ್ತದೆ. ಇದಕ್ಕೆ ಸೇರಿದ ಸಾತ್ತ್ವತಸಂಹಿತೆಯಲ್ಲೇ ಅವತಾರದ ಕಲ್ಪನೆ ಮೊಟ್ಟಮೊದಲಿಗೆ ಕಾಣಿಸಿಕೊಳ್ಳುವುದು. ಭಾಗವತ ಸಂಪ್ರದಾಯದ ವೀರವಾದದ ಪಡಿಯಚ್ಚಿ ನಲ್ಲೇ ಸಂಕರ್ಷಣ, ವಾಸುದೇವರ ಆರಾಧನೆ ಮೊದಲಾದುದು.

ವೈದಿಕಸಾಹಿತ್ಯದಲ್ಲೇ ಕೃಷ್ಣನೆಂಬ ಹೆಸರಿನ ಋಷಿ ಕಾಣಿಸಿಕೊಂಡಿ ದ್ದಾನೆ. ಋಗ್ವೇದದ ಎಂಟನೆಯ ಮಂಡಲದಲ್ಲಿ ಇಡೀ ಸೂಕ್ತವೊಂದಕ್ಕೆ (85) ಕೃಷ್ಣನು ಋಷಿ ; ಸೂತ್ರವು ಅಶ್ವಿನೀದೇವತೆಗಳನ್ನು ಕುರಿತದ್ದು. ಋಷಿಯು ತನ್ನನ್ನು 'ವಿಪ್ರ' ನೆಂದು (ಎಂದರೆ ಮೇಧಾವಿಯೆಂದು) ಕರೆದುಕೊಂಡಿರುವುದನ್ನು ಬಿಟ್ಟರೆ ಬೇರೇನೂ ಸ್ವಾರಸ್ಯ ಸೂಕ್ತದಲ್ಲಿಲ್ಲ. ಮುಂದಿನ ಸೂಕ್ತ ಈ ಋಷಿಯ ಮಗ ವಿಶ್ವಾಕನದು ; ವಿಶ್ವಾಕನ ಮಗ ವಿಷ್ಣಾಪುವೆಂಬ ಉಲ್ಲೇಖ ಅಲ್ಲಿ ಬರುತ್ತದೆ. ಅದಕ್ಕೆ ಮುಂದಿನ ಸೂಕ್ತ ವಸಿಷ್ಠನ ಪುತ್ರನಾದ ದ್ಯುಮ್ನೀಕನೆಂಬ ಋಷಿಯದು ; ಈ ಋಷಿಗೆ ಆಂಗಿರಸ–ಪ್ರಿಯಮೇಧ ಎಂಬ ಹೆಸರಿರುವಂತೆ ಸೂಚನೆಯಿದೆ. ಸಾಯಣರು ಈ ಸೂಕ್ತಕ್ಕೆ ಇವನೋ ಇಲ್ಲವೇ ಆಂಗಿರಸಕೃಷ್ಣನೋ ಋಷಿಯೆಂದು

ಹೇಳಿದ್ದಾರೆ. ಆಂಗಿರಸ–ಕೃಷ್ಣ ಛಾಂದೋಗ್ಯ ಉಪನಿಷತ್ತಿನಲ್ಲಿ ಕಾಣಿಸಿಕೊಳ್ಳುತ್ತಾನೆ (3,17,2 ಮತ್ತು 3). ಇಲ್ಲಿ ಅವನನ್ನು ಸ್ಪಷ್ಟವಾಗಿ ದೇವಕೀಪುತ್ರನೆಂದೇ ಹೇಳಿದೆ ; ಘೋರ–ಆಂಗಿರಸನ ಶಿಷ್ಯನೆಂಬ ಮಾತಿದೆ. ಆಂಗಿರಸನ ಶಿಷ್ಯನಾದುದರಿಂದ ಇವನು ಕೃಷ್ಣ–ಆಂಗಿರಸನೇ. ಶ್ರೀಕೃಷ್ಣ ಚರಿತ್ರೆಯಲ್ಲಿ ಕೃಷ್ಣನ ಗುರುವಾದ ಗರ್ಗನೂ ಋಗ್ವೇದದ ಋಷಿಯೇ ; ಆಂಗಿರಸಗೋತ್ರಕ್ಕೆ ಸೇರಿದವನೇ. ವಿಷ್ಣುಪುರಾಣದಲ್ಲಿಯೂ (4,2,2) ಕೃಷ್ಣನು ಆಂಗಿರಸನೆಂಬ ಧ್ವನಿಯಿದೆ ('ಕ್ಷತ್ರಪ್ರಸೂತಾ ವೈ ಪುನಶ್ಚಾಂಗಿರಸ ಸ್ಮೃತಾಃ'). ಮಧುರೆಯ ಯಾದವರು ಇಕ್ಷ್ವಾಕುವಂಶದ ಕ್ಷತ್ರಿಯರೆಂದು ಹರಿವಂಶದಲ್ಲಿ (ವಿಷ್ಣುಪರ್ವ, 95,539) ಬರುವ ಒಕ್ಕಣೆ. ಋಗ್ವೇದ ಸಂಹಿತೆಯ ಅನುಕ್ರಮಣಿ ಶೌನಕ–ಕೃಷ್ಣನೆಂಬುವನನ್ನು ಆಂಗಿರಸಋಷಿ ಯೆಂದೇ ಗುರುತಿಸಿದೆ. ವಾಸುದೇವ—ಕೃಷ್ಣನಿಗೇ ಶೌನಕಕೃಷ್ಣನೆಂಬ ಹೆಸರಿದ್ದಿತೋ ಹೇಳುವುದು ಕಷ್ಟ. ಆದರೆ ಶೌನಕನೆಂಬ ಋಷಿ ಋಗ್ವೇದ ದಲ್ಲಿ ಭೃಗುವಂಶಕ್ಕೆ ಸೇರಿದವನು ; ಆಂಗಿರಸನಲ್ಲ. ಮೇಲಾಗಿ ಶೌನಕನು ಅಥರ್ವವೇದದ ದ್ರಷ್ಟಾರರಲ್ಲಿ ಒಬ್ಬನೂ ಹೌದು.

ಈ ಉಲ್ಲೇಖಗಳಿಂದ ಕೃಷ್ಣನು ವೈದಿಕಋಷಿಯೋ ಋಷಿಪರಂಪರೆಗೆ ಸೇರಿದ ಆಚಾರ್ಯನೋ ಎಂಬುದು ಖಚಿತವಾಗುತ್ತದೆ. ಋಗ್ವೇದದಲ್ಲೇ, ಅದೇ ಎಂಟನೆಯ ಮಂಡಲದ ಇನ್ನೊಂದು ಸೂಕ್ತದಲ್ಲಿ (96), ಇಂದ್ರನು ಕೃಷ್ಣನೆಂಬುವನೊಂದಿಗೆ ಸೆಣಸಿದ ವೃತ್ತಾಂತ ಬಂದಿದೆ. ಅಂಶುಮತಿಯೆಂಬ ನದಿಯ ತೀರದಲ್ಲಿ ವೇಗವನ್ನುಳ್ಳವನೂ ('ದ್ರಪ್ಸಃ'), ಅಬ್ಬರಿಸುವವನೂ ('ದ್ಯವಮಂತಂ'), ಹತ್ತು ಸಾವಿರ ಸೇನೆಯುಳ್ಳವನೂ ('ದಶಭಿಃ ಸಹಸ್ರೈಃ ಇಯಾನಃ'), ಗುಹೆಗಳಲ್ಲಿ ಅಡ್ಡಾಡುವವನೂ ('ವಿಷುಣೇ ಚರಂತಂ'), ನೀರಿನ ನಡುವೆ ಇರುವವನೂ ('ಉಪಹ್ವರೇ ನದ್ಯಾಃ ಅವತಸ್ಥಿವಾಂಸಂ'), ಆಕಾಶದಲ್ಲಿ ಸೂರ್ಯ ಬೆಳಗುವಂತೆ ಬೆಳಗುತ್ತಿರುವವನೂ ('ನಭೋ ನ' ; 'ತಿತ್ವಿಷಾಣಃ') ಆದ ಕೃಷ್ಣನನ್ನು ಬೃಹಸ್ಪತಿಯೊಡಗೂಡಿ ಇಂದ್ರನು ಸೆಣೆಸಿದ ಉಲ್ಲೇಖವಿದೆ. ಸಾಯಣಾಚಾರ್ಯರು ಈ ಕೃಷ್ಣನನ್ನು ಅಸುರನೆಂದು ವಿವರಿಸಿದ್ದಾರೆ. ಆದರೆ ಅಸುರನೆಂಬ ನಿರ್ದೇಶನ ಸೂಕ್ತದ ಯಾವ ಋಕ್ಕಿನಲ್ಲೂ ಬರುವುದಿಲ್ಲ. ಇಂದ್ರನಿಗೂ ಅವನಿಗೂ ಹೋರಾಟ ವಾದುದರ ಧ್ವನಿಯೇನೋ ಇದೆ. ಕೃಷ್ಣನ ಪ್ರಸ್ತಾಪ ಮುಗಿದೊಡನೆ ಬರುವ ಮಂತ್ರ (16), ದ್ಯಾವಾಪೃಥಿವಿಗಳು ಕತ್ತಲೆಯಲ್ಲಿ ಅಡಗಿದ್ದುವೆಂದೂ ಇಂದ್ರನ ಸಾಹಸದಿಂದ ಅವು ಬೆಳಕಿಗೆ ಬಂದು ಬೆಳಗತೊಡಗಿದು

ವೆಂದೂ ('ಗೂಳ್ಹೇ ದ್ಯಾವಾಪೃಥಿವೀ ಅನ್ವವಿಂದಃ') ಹೇಳುತ್ತದೆ. ಎಂದರೆ ಭೂಮಿಯೂ ಆಕಾಶವೂ ಕತ್ತಲೆಯಲ್ಲಿ ಅಡಗಲು ಕೃಷ್ಣನೇ ಕಾರಣನೆಂದೂ, ಕೃಷ್ಣನನ್ನು ಇಂದ್ರನು ಸೋಲಿಸಿ ಭೂಮಿ ಆಕಾಶ ಗಳನ್ನು ಕತ್ತಲೆಯಿಂದ ಪಾರುಮಾಡಿದನೆಂದೂ ಅರ್ಥವಾಗುತ್ತದೆ.

ಕೃಷ್ಣ–ಇಂದ್ರರ ನಡುವೆ ಇದ್ದ ವಿರಸ ಮುಂದೆ (ಪಾರಿಜಾತಾಪಹರಣ, ಗೋವರ್ಧನೋದ್ಧರಣ ಇತ್ಯಾದಿ) ಹಲವು ಕಥೆಗಳಲ್ಲೂ ಬರುತ್ತದೆ. ಈಗ ಮತ್ತೊಂದು ಪ್ರಾಚೀನ ಉಲ್ಲೇಖ ನೋಡಿ. ಪಾಣಿನಿಯ ಸೂತ್ರವೊಂದು 'ವಾಸುದೇವಾರ್ಜುನಾಭ್ಯಾಂವುನ್' (4,3,98) ಎಂದಿದೆ. 'ವಾಸು ದೇವಕ', 'ಅರ್ಜುನಕ' ಎಂಬ ಪದಗಳನ್ನು ಪಡೆದುಕೊಳ್ಳುವ ಬಗೆ ಯನ್ನು ತಿಳಿಸುವ ಸಂದರ್ಭ. 'ವಾಸುದೇವಕ' ಎಂದರೆ ವಾಸುದೇವನ ಭಕ್ತ, ಅರ್ಜುನಕ ಎಂದರೆ ಅರ್ಜುನನ ಭಕ್ತ. ವಾಸುದೇವನೆಂದರೆ ಬರಿಯ ಗೋತ್ರಕ್ಷತ್ರಿಯನ ಹೆಸರಿರಲಾರದೆಂದೂ (ಹಾಗಿದ್ದರೆ 'ವುನ್' ಪ್ರತ್ಯಯದ ಅಗತ್ಯವಿರದೆಂದೂ),ಗೌರವಾನ್ವಿತ ವ್ಯಕ್ತಿಯೊಬ್ಬನ ನಿರ್ದೇಶನವಿದ್ದೀತೆಂದೂ ಪತಂಜಲಿಯ ಮಹಾಭಾಷ್ಯದಲ್ಲಿ ಬರುವ ವಿವರಣೆ ('ಅಥವಾ ನೈಷ ಕ್ಷತ್ರಿಯಾಖ್ಯಾ ಸಂಜ್ಞಾ ಏಷಾ ತತ್ರಭವತಃ'). ಪಾಣಿನಿಯ ಕಾಲ ಕ್ರಿಸ್ತಪೂರ್ವ ಎಂಟನೂರು ವರ್ಷಗಳಷ್ಟು ಹಿಂದೆ ; ಪತಂಜಲಿಯದು ಕ್ರಿಸ್ತಪೂರ್ವ ಇನ್ನೂರು ವರ್ಷಗಳಷ್ಟು ಹಿಂದೆ. ಆ ಕಾಲದಲ್ಲೇ ವಾಸು ದೇವ, ಅರ್ಜುನರ ಪ್ರಸಿದ್ಧಿಯಿದ್ದಿತು.

ಆದರೆ ಇಲ್ಲಿ 'ವಾಸುದೇವ'ನೆಂದರೆ ಮಹಾಭಾರತದ ಕೃಷ್ಣನೇ ? 'ಅರ್ಜುನ'ನೆಂದರೆ ಪಾಂಡವಸೋದರರಲ್ಲಿ ಒಬ್ಬನೇ ? ಇದು ಅಷ್ಟು ಸ್ಪಷ್ಟವಾಗುವುದಿಲ್ಲ. 'ವಾಸುದೇವ' ನೆಂದರೆ ಪಾಂಚರಾತ್ರ–ಭಾಗವತ ಸಂಪ್ರದಾಯದ ಪ್ರಧಾನವ್ಯೂಹವೆಂದೂ 'ಅರ್ಜುನ'ನೆಂದರೆ ಇಂದ್ರನ ರಹಸ್ಯನಾಮವೆಂದೂ ವಿವರಣೆಗಳಿವೆ. ಶತಪಥ ಬ್ರಾಹ್ಮಣ (5,4,3,7) ವೇನೋ "ಅರ್ಜುನೋ ಹ ವೈ ನಾಮೇಂದ್ರೋ ಯದಸ್ಯ ಗುಹ್ಯಂ ನಾಮ" ಎಂದು ಹೇಳುತ್ತದೆ. ಋಗ್ವೇದದಲ್ಲಿ 'ಆರ್ಜುನೇಯ' ವೆಂಬ ಪ್ರಯೋಗ ಹಲವಡೆ ಬಂದಿದೆ (4,26,1;7,19,2 ಇತ್ಯಾದಿ). ಇಲ್ಲೆಲ್ಲ ಇಂದ್ರಸಂಬಂಧಿಯಾದ ಅರ್ಥವೆಂದು ಹೇಳುತ್ತಾರೆ. ಆದರೆ ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಮಹಾಭಾರತವಲ್ಲದಿದ್ದರೂ ಭಾರತದ ಉಲ್ಲೇಖ ಗಳಂತೂ ಇವೆ. ಮಹಾಭಾರತದಲ್ಲಿ ಕೃಷ್ಣನಿಗೆ 'ವಾಸುದೇವ'ನೆಂದು

ಹೆಸರೂ ಇದೆ, ಅರ್ಜುನನಿಗೂ ಇಂದ್ರನಿಗೂ ನಂಟಿರುವುದೂ ಇದೆ. ಪಾಣಿನಿಯ ಅಭಿಪ್ರಾಯ ಏನಿದ್ದಿತೋ ಹೇಳುವುದು ಕಷ್ಟ.

ಆದರೆ 'ವಾಸುದೇವ'ನೆಂದು ಅಲ್ಲಿ ಬರುವ ಉಲ್ಲೇಖದಲ್ಲಿ ವಸುದೇವನ ಮಗನೆಂಬ ಸೂಚನೆಯಿಲ್ಲ. ಪಾಣಿನಿಯು ಅನುಸರಿಸಿದ ಪದ್ಧತಿಯಲ್ಲಿ 'ವಸುದೇವನ ಮಗ ವಾಸುದೇವ' ಎನ್ನುವ ಅರ್ಥ ಹೊರಡುವುದಿಲ್ಲ. ಮೇಲಾಗಿ, ಆ ಕಾಲದ ಬಳಕೆ ತಾಯಿಯ ಹೆಸರಿನಿಂದ ಮಗನನ್ನು ಗುರುತಿಸುವುದು. ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ 'ಕೃಷ್ಣ–ದೇವಕೀಪುತ್ರ' ಎನ್ನುವ ಪ್ರಸ್ತಾಪವನ್ನು ಮೇಲೆ ಗಮನಿಸಿದ್ದೇವಷ್ಟೆ ? ಆದ್ದರಿಂದ ಪಾಣಿನಿಯ ವಾಸುದೇವ ವ್ಯೂಹವಾಸುದೇವನೇ, 'ವಸ್' (ಎಂದರೆ ನೆಲೆಸು) ಎಂಬ ಧಾತುವಿನಿಂದಲೇ ಆದ ಮಾತು ಅದು ಎನ್ನುವ ವಿವರಣೆಯಲ್ಲಿ ಔಚಿತ್ಯವಿದೆ. ಮುಂದೆ ಕೃಷ್ಣನ ಕಥೆಯಲ್ಲಿ ವಾಸುದೇವನ ತಂದೆಯಾದುದರಿಂದ ವಸುದೇವನೆಂಬ ಹೆಸರು ಅವನಿಗೆ ಸಿದ್ಧವಾಯಿತೋ ಏನೋ ! ಮಹಾಭಾರತದಲ್ಲಿ (ಉದ್ಯೋಗಪರ್ವ, 70,2) ಸಂಜಯನು ಧೃತರಾಷ್ಟ್ರನಿಗೆ ಕೃಷ್ಣನ ಹೆಸರುಗಳ ಅರ್ಥವನ್ನು ವಿವರಿಸುತ್ತ ವಾಸುದೇವನೆಂದರೆ ಎಲ್ಲ ಪ್ರಾಣಿಗಳಲ್ಲೂ ವಾಸಿಸುವವನು ('ವಸನಾತ್ ಸರ್ವಭೂತಾನಾಂ') ಎಂದೂ ದೇವಯೋನಿಯಿಂದ ಹೊರಬಂದ ನಿಧಿ ('ವಸುತ್ವಾತ್ ದೇವಯೋನಿತಃ') ಎಂದೂ ಹೇಳಿರುವುದಿದೆ. ಹಾಗೆಯೇ ವಿಷ್ಣುಪುರಾಣದಲ್ಲಿ (1,2,12) 'ವಾಸುದೇವ' ಎನ್ನುವ ಮಾತಿಗೆ

"ಸರ್ವತ್ರಾಸೌ ಸಮಸ್ತಂಚ ವಸತ್ಯತ್ರೇತಿ ವೈ ತತಃ
ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ"

ಎಂದು ಹೇಳಿರುವುದನ್ನು ಗಮನಿಸಬೇಕು.

ಇದು ಹೇಗಾದರೂ ಇರಲಿ. ಇಲ್ಲಿ ನಮಗೆ ಪ್ರಸಕ್ತವಾದ ವಿಚಾರ, ಕೃಷ್ಣನು ಐತಿಹಾಸಿಕ ವ್ಯಕ್ತಿಯೋ ಅಲ್ಲವೋ ಎನ್ನುವುದು. ಪಾಣಿನಿಯ ಪ್ರಸ್ತಾಪದಿಂದ ಸಮಸ್ಯೆಯ ಮೇಲೆ ಹೆಚ್ಚು ಬೆಳಕೇನೂ ಬೀಳಲಾರದು. ಆದರೆ ಪತಂಜಲಿಯ ಪ್ರಸ್ತಾಪದಿಂದ ವಾಸುದೇವನು ಕ್ಷತ್ರಿಯ, ಪೂಜಾರ್ಹನಾಗಿದ್ದವನು ಎಂಬ ಸಂಗತಿ ಹೊರಬೀಳುತ್ತದೆ. ಪಾಣಿನಿಯ ಸೂತ್ರದಲ್ಲಿ ದ್ವಂದ್ವಸಮಾಸವಿದ್ದು ನಾಲ್ಕು ಅಕ್ಷರಗಳ ವಾಸುದೇವನಾದ ಮೇಲೆ ಮೂರು ಅಕ್ಷರಗಳ ಅರ್ಜುನ ಬಂದಿರುವುದು 'ಅಲ್ಪಾಚ್‌ತರಂ' ಎಂಬ ನಿಯಮದಿಂದ ಸಾಧುವಲ್ಲ ; ಆದರೆ ಕಾತ್ಯಾಯನನ 'ಅಭ್ಯರ್ಹಿತಂ ಚ ಪೂರ್ವಂ ನಿಪತತಿ' ಎಂಬ ವಾರ್ತಿಕದಿಂದ ಅರ್ಜುನನಿಗಿಂತ ವಾಸುದೇವ

ಹೆಚ್ಚು ಪೂಜಾರ್ಹನಾಗಿದ್ದವನು, ಆದುದರಿಂದಲೇ ಪಾಣಿನಿಯ ಸೂತ್ರ ವಾಸುದೇವನನ್ನೇ ಮೊದಲು ಹೇಳಿದೆಯೆಂದು ಸ್ಪಷ್ಟವಾಗುತ್ತದೆ ಮತ್ತು ಪತಂಜಲಿಯ ಮಹಾಭಾಷ್ಯದಲ್ಲಿ (2,2,34) ಕೇಶವನಿಗೆ (ಎಂದರೆ ವಾಸುದೇವ–ಕೃಷ್ಣನಿಗೆ), ಬಲರಾಮನಿಗೆ (ಸಂಕರ್ಷಣ–ಬಲ ದೇವನಿಗೆ) ಮತ್ತು ಧನಪತಿಗೆ (ಕುಬೇರ–ವೈಶ್ರವಣನಿಗೆ) ಗುಡಿಗಳಿದ್ದ ಉಲ್ಲೇಖವೂ ಇದೆ. 'ಸಂಕರ್ಷಣ–ದ್ವಿತೀಯ' ನಾದ ಕೃಷ್ಣ ವಾಸು ದೇವನ ಪರಿಚಯ ಪತಂಜಲಿಗಿದ್ದಿತು (2,2,24 'ಸಂಕರ್ಷಣ ದ್ವಿತೀಯಸ್ಯ ಬಲಂ ಕೃಷ್ಣಸ್ಯ ವರ್ಧತಾಂ'). ಕೃಷ್ಣನು ತನ್ನ ಸೋದರ ಬಲರಾಮನ ನೆರವಿನಿಂದ ತನ್ನ ಸೋದರಮಾವ ಕಂಸನನ್ನು ಕೊಂದದ್ದು ಆಗಲೇ ಕಾವ್ಯಕ್ಕೆ ಸಾಮಗ್ರಿಯಾಗಿ ಸರ್ವಸಮ್ಮತವಲ್ಲದ ಪ್ರಸಂಗವಾಗಿದ್ದಿತು ('ಕಂಸವಧ'ವೆಂಬ ಸಾಹಿತ್ಯಭಾಗವನ್ನು ಪತಂಜಲಿ ಉಲ್ಲೇಖಿಸಿದ್ದಾನೆ ; 'ಅಸಾಧುರ್ಮಾತುಲೇ ಕೃಷ್ಣಃ' ಎಂದೂ ಹೇಳಿದ್ದಾನೆ 2,3,3,). ಬಲರಾಮನಿಗೆ 'ರೌಹಿಣೇಯ' (ಎಂದರೆ ರೋಹಿಣಿಯ ಮಗ), 'ಲಾಂಗಲಿ' (ಎಂದರೆ ನೇಗಿಲನ್ನು ಹೊತ್ತವನು), 'ರಾಮ'ನೆಂಬ ಹೆಸರುಗಳಿದ್ದುದೂ ಪತಂಜಲಿಗೆ ತಿಳಿದಿದ್ದಿತು.

ಬಳಕೆಯಲ್ಲಿರುವ ಕಥೆಯಂತೆ, ಕೃಷ್ಣನು ದೇವಕಿಯ ಮಗ, ಬಲರಾಮನು ರೋಹಿಣಿಯ ಮಗ. ದೇವಕಿಯೂ ರೋಹಿಣಿಯೂ ವಸುದೇವನ ಹೆಂಡತಿಯರು. ಬಲರಾಮನು ಮೊದಲು ಹುಟ್ಟಿದವನು. ಆದ್ದರಿಂದಲೇ 'ರಾಮ–ಕೃಷ್ಣ', 'ಸಂಕರ್ಷಣ–ವಾಸುದೇವ' ಎನ್ನುವ ವ್ಯವಹಾರ. ಇಬ್ಬರನ್ನೂ ವೀರರೆಂದೋ, ದೇವಾಂಶಸಂಭೂತರೆಂದೋ ಒಟ್ಟಿಗೆ ಪೂಜಿಸುವ ವಾಡಿಕೆ ಕ್ರಿಸ್ತಪೂರ್ವ ಮೊದಲ ಶತಮಾನದಲ್ಲೇ ಇದ್ದಿತು. ರಾಜಾಸ್ಥಾನದ ಘೋಸುಂಡಿಯಲ್ಲಿ ದೊರೆತ ಶಾಸನವೊಂದು (ಬ್ರಾಹ್ಮೀಲಿಪಿಯಲ್ಲಿರುವುದು, ಪಾರಾಶರೀಪುತ್ರನಾದ ಗಾಜಾಯನನೆಂಬ ರಾಜ ತನ್ನನ್ನು ಭಾಗವತನೆಂದು ಕರೆದುಕೊಂಡು ಹೊರಡಿಸಿರುವುದು).

'ಅನಿಹತಾಭ್ಯಾಂ ಸರ್ವೇಶ್ವರಾಭ್ಯಾಂ ಸಂಕರ್ಷಣವಾಸುದೇವಾಭ್ಯಾಂ'

ಇವರಿಗೆ 'ನಾರಾಯಣವಾಟಿಕೆ'ಯನ್ನು (ಎಂದರೆ ಗುಡಿಯನ್ನು) ಕಟ್ಟಿಸಿದುದನ್ನು ಹೇಳುತ್ತದೆ. ಮಹಾಭಾರತ (1,189,3) ಇವರಿಬ್ಬರೂ ನಾರಾಯಣ–ವಿಷ್ಣುವಿನ ಅವತಾರಗಳೆಂದು ಸೂಚಿಸುತ್ತದೆ. ಬೌದ್ಧರ 'ಘಟಜಾತಕ'ದಲ್ಲಿ (ಫಾವುಸ್‌ಬೋಲ್ ಇವರಿಂದ ಸಂಪಾದಿತ, ಜಾತಕಸಂಖ್ಯೆ 454), ಬಲದೇವನೂ ವಾಸುದೇವನೂ ಅಂಜನಾದೇವಿಯ ಮಕ್ಕಳು ;

ಬಲದೇವ ಹಿರಿಯವನು. ಅಂಜನಾದೇವಿ ಒಬ್ಬಳು ಯಕ್ಷಿಣಿ ; ಕರಿಬಣ್ಣದವಳು. ಇವಳ ಪ್ರಸ್ತಾಪ ಮತ್ತೆ ಬರಲಿದೆ.

ಆದರೆ ಬರುಬರುತ್ತ ಸಂಕರ್ಷಣನಿಗಿಂತ ವಾಸುದೇವನೇ ಜನರ ಆದರದಲ್ಲಿ ಮೊದಲು ಬಂದದ್ದು ತಿಳಿಯುತ್ತದೆ. ವಿದಿಶಾ (ಬೇಸನಗರ, ಮಧ್ಯಪ್ರದೇಶದ ಗ್ವಾಲಿಯರ್ ಪ್ರದೇಶದಲ್ಲಿರುವ ಬಿಲ್ಸಾನಗರದ ಬಳಿ) ಶಾಸನವೊಂದು, ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲೇ ಸಿದ್ಧವಾದುದು, 'ದೇವದೇವನಾದ ವಾಸುದೇವ'ನ ಹೆಗ್ಗಳಿಕೆಯ ಕುರುಹಾಗಿ ನಿಲ್ಲಿಸಿದ ಗರುಡಧ್ವಜವೊಂದನ್ನು ಉಲ್ಲೇಖಿಸುತ್ತದೆ. ಬ್ರಾಹ್ಮೀಲಿಪಿಯಲ್ಲಿರುವ ಈ ಶಾಸನ ಹೊರಟಿದ್ದು ತನ್ನನ್ನು ಭಾಗವತನೆಂದು ಕರೆದುಕೊಂಡಿರುವ ಹಿಲಿಯೋದೋರಸ್ ಎಂಬ ಯವನ (ಇಂಡೋಗ್ರೀಕ್)ನಿಂದ. ದಿಯೋನನ ಮಗನಾದ ಇವನು ತಕ್ಷಶಿಲೆಯಲ್ಲಿ ವಾಸಿಸುತ್ತಿದ್ದನೆಂದೂ, ಯವನ ರಾಜ ಅಂಕಲಕಿತ (ಅಂತಿಯಲ್‌ಕಿದಸ್) ನೆಂಬುವನಿಂದ ವಿದಿಶಾ ನಗರಿಯ ರಾಜನಾಗಿದ್ದ ಕಾಶೀಪುತ್ರ–ಭಾಗಭದ್ರನೆಂಬುವನ ಆಸ್ಥಾನಕ್ಕೆ ಕಳುಹಿಸಲ್ಪಟ್ಟ ರಾಯಭಾರಿಯೆಂದೂ ಪ್ರಸ್ತಾಪವಿದೆ.

ಈ ಶಾಸನದಲ್ಲಿ ಇನ್ನೂ ಒಂದು ಸ್ವಾರಸ್ಯವಾದ ವಿವರವಿದೆ. ಶಾಸನದ ಕಡೆಯಲ್ಲಿ ಸ್ವರ್ಗಕ್ಕೆ ದಾರಿಯಾಗುವ ಮೂರು ಉಪದೇಶಗಳ ಒಕ್ಕಣೆಯಿದೆ : 'ಮೂರು ಅಮೃತಪದಗಳು, ಚೆನ್ನಾಗಿ ಆಚರಿಸಲ್ಪಟ್ಟರೆ, ಸ್ವರ್ಗಕ್ಕೆ ಒಯ್ಯುತ್ತವೆ—(ಅವು ಯಾವುವೆಂದರೆ) ದಮ, ತ್ಯಾಗ, ಅಪ್ರಮಾದ.'

'ತಿನಿ ಅಮುತ ಪದಾನಿ( )ಸು ಅನುಠಿತಾನಿ ನೇಯಮ್ತಿ ಸ್ವಗಂ ದಮ–ಚಾಗ–ಅಪ್ಪಮಾದ'

ಇದು 'ದೇವದೇವ ವಾಸುದೇವ'ನ ಆರಾಧಕರಿಗೆ ಮಾನ್ಯವಾಗಿದ್ದ ಧರ್ಮವೆಂದು ತೋರುತ್ತದೆ ; ಹಾಗಿಲ್ಲವಾದರೆ ಈ ಶಾಸನದ ಸಂದರ್ಭದಲ್ಲಿ ಇದು ತೋರಿಕೊಳ್ಳುವ ಕಾರಣವಿಲ್ಲ. ಮಹಾಭಾರತದಲ್ಲಿ (ಶಾಂತಿಪರ್ವ) ಇದೇ ಮಾತುಗಳನ್ನೊಳಗೊಂಡ ವಾಕ್ಯವೊಂದಿದೆ—

'ದಮಸ್ತ್ಯಾಗೋಽಪ್ರಮಾದಶ್ಚ ಏತೇಷ್ವಮೃತಮಾಹಿತಃ'

ಇಡೀ ಭಗವದ್ಗೀತೆಯ ತಾತ್ಪರ್ಯವೂ ಇದೇ ತಾನೆ ? ಛಾಂದೋಗ್ಯ ಉಪನಿಷತ್ತಿನಲ್ಲಿ ಕೃಷ್ಣ–ದೇವಕೀಪುತ್ರನ ಉಲ್ಲೇಖ ಬಂದಾಗಲೂ ಅವನು ಪರಂಪರೆಯಿಂದ ಉಳಿಸಿದ ಉಪದೇಶವೊಂದನ್ನು ನಿರೂಪಿಸುವ ಸಂದರ್ಭವೇ. "ಕಡೆಗಾಲದಲ್ಲಿ ಮೂರನ್ನು ಪಡೆದುಕೊಳ್ಳಬೇಕು—

ನಾಶವಿಲ್ಲದವನು ನೀನು, ವಿಕಾರವಿಲ್ಲದವನು ನೀನು, ಸೂಕ್ಷ್ಮವಾದ ಪ್ರಾಣವೇ ನೀನು" (ಅಂತವೇಲಾಯಾಂ ತ್ರಯಂ ಪ್ರತಿಪದ್ಯೇತ–ಅಕ್ಷಿತಮಸಿ, ಅಚ್ಯುತಮಸಿ, ಪ್ರಾಣಸಂಶಿತಮಸಿ'). ಇದೂ ಭಗವದ್ಗೀತೆಯ ಸಾರಾಂಶವೇ.

ಈ ಉಪದೇಶದ ವಿವರಣೆ ಇಲ್ಲಿ ಅಗತ್ಯವಿಲ್ಲ. ಕೃಷ್ಣ–ವಾಸುದೇವನು, ತನ್ನ ಅಣ್ಣ ಸಂಕರ್ಷಣ–ಬಲರಾಮನಂತಲ್ಲದೆ, ಧರ್ಮಪ್ರಚಾರಕನಾಗಿದ್ದ ನೆಂಬುದು ಮುಖ್ಯವಾದ ವಿವರ. ಹೀಗಿದ್ದುದರಿಂದ ಅವನ ಅನು ಯಾಯಿಗಳು ಹೆಚ್ಚಾದುದು ಸಹಜವೇ. ಕಾಲಕ್ರಮದಲ್ಲಿ ಮೊದಲಿನ 'ಸಂಕರ್ಷಣ–ವಾಸುದೇವ' ಎನ್ನುವ ಒಕ್ಕಣೆ 'ವಾಸುದೇವ–ಸಂಕರ್ಷಣ' ಎಂದು ಬದಲಿಸಿತು. ಅಮರಕೋಶದಲ್ಲಿಯೂ (1,1,18–30) ಇದನ್ನು ಗಮನಿಸಬಹುದು. ಮುಂದೆ ಸಂಕರ್ಷಣನ ಹೆಸರೇ ಹಿಂದಾಗಿ, ವಾಸು ದೇವನ ಪ್ರತೀತಿಯೊಂದೇ ಉಳಿದುಕೊಂಡಿತು. ಶಕವಂಶದ ಕ್ಷತ್ರಪರು ಉತ್ತರ ದಿಗ್ಭಾಗದಲ್ಲಿ ಆಳುತ್ತಿರುವಾಗ ಮಥುರೆಯಲ್ಲಿ ರಾಜುವಲನ ಮಗ ಮಹಾಕ್ಷತ್ರಪ ಶೋಡಾಸನೆಂಬುವನು ಭಗವಾನ್ ವಾಸುದೇವನಿಗೆ ಮಹಾಸ್ಥಾನವೊಂದನ್ನು (ಎಂದರೆ ಗುಡಿಯನ್ನು) ಕಟ್ಟಿಸಿದುದನ್ನು ತಿಳಿಸುವ ಶಾಸನದ ತುಣುಕೊಂದನ್ನು ಆರ್.ಪಿ. ಚಾಂದಾ ಪತ್ತೆಮಾಡಿ ಪ್ರಕಟಿಸಿ ದ್ದಾರೆ ; ಕ್ರಿಸ್ತಾಬ್ದಕ್ಕೆ ಹಿಂದಿನ ಶತಮಾನದ ಶಾಸನ ಇದು. ಮುಂದೆ ಗುಪ್ತರ ಕಾಲದಲ್ಲೂ ವಾಸುದೇವನ ಪಂಥ ಪ್ರಬಲವಾಗಿದ್ದಿತು. ಮಂದ ಸ್ಸೋರಿನ ಶಾಸನವೊಂದು (ಮಹಾರಾಜ ನರವರ್ಮನದು)

'ವಾಸುದೇವಂ ಜಗದ್ವಾಸಂ ಅಪ್ರಮೇಯಂ ಅಜಂ ವಿಭುಂ'

ಎಂಬ ಮಾತುಗಳನ್ನೊಳಗೊಂಡಿದೆ. ಧರ್ಮಪ್ರಚಾರಕನಾದ ವಾಸುದೇವ ದೇವತ್ವವನ್ನು ಪಡೆದುಕೊಂಡದ್ದು ಇಲ್ಲಿ ಕಾಣುತ್ತದೆ. ಆ ಶಾಸನ ಆರಂಭ ವಾಗುವುದೇ ಈ ಕಲ್ಪನೆಯಿಂದ–

'ಸಹಸ್ರಶಿರಸೇ ತಸ್ಮೈ ಪುರುಷಾಯಾಮಿತಾತ್ಮನೇ ।
ಚತುಃಸಮುದ್ರಪರ್ಯಂತತೋಯನಿದ್ರಾಲವೇ ನಮಃ ॥'

ಋಗ್ವೇದದ ಕೃಷ್ಣನಿಗೂ ನೀರಿನಲ್ಲಿ ಮಲಗುವ ಅಭ್ಯಾಸವಿದ್ದುದನ್ನು ಕಂಡಿದ್ದೇವೆ ! ('ಉಪಹ್ವರೇ ನದ್ಯಾಃ ಅವತಸ್ಥಿವಾಂಸಂ', ಎಂಟನೆಯ ಮಂಡಲ, 96ನೆಯ ಸೂಕ್ತ). ಅಲ್ಲಿ ಅಂಶುಮತೀನದಿಯ ನೀರಾಗಿದ್ದುದು ಇಲ್ಲಿ ನಾಲ್ಕು ಸಮುದ್ರಗಳ ನೀರಾಗಿದೆ ಅಷ್ಟೆ !

(3) ಕೃಷ್ಣನು ಮನುಷ್ಯನೋ ದೇವರೋ ?

ಇದೇ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೂ ಒಂದು ಅಂಶವಿದೆ. ಕ್ಷತ್ರಪರೆನಿಸಿಕೊಂಡ ಆಳರಸರ ಕಾಲದಲ್ಲೇ, ಎಂದರೆ ಕ್ರಿಸ್ತಾಬ್ದದ ಹಿಂದಿನ ಮುಂದಿನ ಕೆಲವು ಶತಮಾನಗಳ ಅವಧಿಯಲ್ಲಿ, ವೃಷ್ಣಿವಂಶದ ಐವರು 'ವೀರ'ರ ಆರಾಧನೆ ಮೈದಳೆದಿದ್ದುದು ಕೆಲವು ಶಾಸನಗಳಿಂದ ತೋರಿಕೊಳ್ಳುತ್ತದೆ. ನಿದರ್ಶನಕ್ಕೆ ಮಥುರೆಯ ಬಳಿ ಮೋರಾ ಎಂಬ ಹಳ್ಳಿಯಲ್ಲಿ ದೊರೆತ ಒಂದು ಶಾಸನ (EI,24, ಸಂಖ್ಯೆ 27,1 194 ಮುಂದೆ ; JISOA, 10, ಪು. 65–68) 'ಪೂಜಾರ್ಹರಾದ ವೃಷ್ಣಿವಂಶದ ಐವರು ವೀರರ ಪ್ರತಿಮೆಗಳನ್ನು' ಪೂಜೆಗಾಗಿ ಇರಿಸಿಕೊಂಡ ಕಲ್ಲಿನ ಗುಡಿಯೊಂದನ್ನು ಉಲ್ಲೇಖಿಸುತ್ತದೆ–

'ಭಗವತಾಂ ವೃಷ್ಣೀನಾಂ ಪಂಚವೀರಾಣಾಂ ಪ್ರತಿಮಾಃ ಶೈಲ ಗೃಹ...'

ತೋಷಾ ಎಂಬ ಹೆಸರಿನ ವಿದೇಶೀ ಹೆಂಗಳೆಯೊಬ್ಬಳು, ಮಹಾಕ್ಷತ್ರಪ ರಾಜುವಲನ ಮಗ ಶೋಡಾಸನ ಕಾಲದಲ್ಲಿ, ಕಟ್ಟಿಸಿದ ಗುಡಿ ಇದು. ಈ ಐವರು ವೀರರು ಯಾರು ? ಈ ಶಾಸನವನ್ನು ಪತ್ತೆಮಾಡಿದ ಲ್ಯೂಡರ್ಸ್ ಮತ್ತು ಆಲ್ಸ್‌ಟಾರ್ಫ್ ಎಂಬಿಬ್ಬರು ವಿದ್ವಾಂಸರ ಪ್ರಕಾರ, ಬಲದೇವ, ಅಕ್ರೂರ, ಅನಾದೃಷ್ಟಿ, ಸಾರಣ, ವಿದೂರಥ ಇವರೇ ಐವರು. ಬಲದೇವನನ್ನು ಬಿಟ್ಟರೆ ಇತರರೇನೋ ಪ್ರಸಿದ್ಧರಲ್ಲ. ಆದರೆ ಪಾಂಚರಾತ್ರ–ಭಾಗವತಪಂಥದಲ್ಲಿ ಮುಖ್ಯವಿವರವಾದ ವ್ಯೂಹಕಲ್ಪನೆ ಆಗಲೆ ಬೇರುಬಿಟ್ಟಿದ್ದಿತು ಎಂಬುದಂತೂ ಸ್ಪಷ್ಟವಾಗುತ್ತದೆ.

ವೃಷ್ಣಿವಂಶದಲ್ಲೇ ಹುಟ್ಟಿದವರಲ್ಲಿ ಸಂಕರ್ಷಣ–ಬಲರಾಮ, ಕೃಷ್ಣ–ವಾಸುದೇವ ಇವರು ಮುಖ್ಯರು. ಮೊದಲಿಗೆ ವಂಶವೀರರಲ್ಲಿ ಜ್ಯೇಷ್ಠನೆಂದು ಪೂಜೆಗೊಳ್ಳತೊಡಗಿದವನು ಬಲರಾಮನೇ (ಸಂಕರ್ಷಣ). ಅವನನ್ನು ನಾಗ, ಶೇಷ, ರುದ್ರ, ವರಾಹಾವತಾರ, ಅನಂತಸ್ವಾಮಿ ಎಂದು ಮುಂತಾಗಿ ವೃಷ್ಣಿವಂಶದವರೂ ಸಾತ್ತ್ವತಪಂಥದವರೂ ಪೂಜೆಮಾಡು

ತ್ತಿದ್ದರು. ಇಂದಿಗೂ ಕೃಷ್ಣನ ಸೋದರ ಬಲರಾಮನನ್ನು ದಕ್ಷಿಣದಲ್ಲಿ ಶೇಷಾವತಾರವೆಂದೂ, ಸುಬ್ರಹ್ಮಣ್ಯನೆಂದೂ ಪೂಜಿಸುವ ಪದ್ಧತಿ ಉಳಿದುಬಂದಿದೆ. ಬಲರಾಮನ ಊರು ಮಥುರೆ ; ಅವನ ಪ್ರಭಾವ ಅಲ್ಲೇ ಹಬ್ಬಿಕೊಂಡದ್ದು, ಅವನು ಯಮುನಾನದಿಯನ್ನು ನೇಗಿಲಿನಿಂದ ಎಳೆದು ತಂದದ್ದು, ಧೇನುಕ, ಪ್ರಲಂಬ, ದ್ವಿವಿದರೆಂಬ ಅಸುರರನ್ನು ಕೊಂದದ್ದು ಇಲ್ಲಿಯೇ. ವಾಸುದೇವ-ಕೃಷ್ಣ ಒಮ್ಮೆ ವ್ರಜವನ್ನು ಬಿಟ್ಟು ಹೋದವನು ಹಿಂದಕ್ಕೆ ಬರಲಿಲ್ಲ ; ಬಲರಾಮನಾದರೋ ಮತ್ತೆ ಮತ್ತೆ ಅಲ್ಲಿಗೆ ಹಿಂದಿರುಗುತ್ತಾನೆ. ಅಲ್ಲಿನ ಕದಂಬ ಮರದಿಂದ ಹೊರಸೂಸುವ ಹೆಂಡವನ್ನು ಕುಡಿಯುವುದು, ಅಲ್ಲಿನ ಹೆಂಗಳೆಯರೊಂದಿಗೆ ಚೆಲ್ಲಾಟ ವಾಡುವುದು ಅವನಿಗೆ ಪ್ರಿಯವಾದ ಹವ್ಯಾಸಗಳು. ಸರ್ಪಾರಾಧನೆ ಹರಡಿ ಕೊಂಡಿದ್ದ ಸ್ಥಳ ಅದು. ಅಲ್ಲಿ ದೊರೆತಿರುವ ಸಂಕರ್ಷಣನ ಶಿಲಾಪ್ರತಿಮೆ ಯೊಂದು ಅವನ ತಲೆಯ ಮೇಲೆ ಹಾವಿನ ಛತ್ರಿಯಿರುವಂತೆ, ಅವನು ಕೈಯಲ್ಲಿ ನೇಗಿಲನ್ನು ಹಿಡಿದಿರುವಂತೆ ಚಿತ್ರಿಸುತ್ತದೆ. ಈಗ ಲಕ್ನೋ ಮ್ಯೂಸಿಯಂನಲ್ಲಿರುವ ಪ್ರತಿಮೆ ನಮ್ಮ ದೇವ-ದೇವತೆಗಳ ಮೂರ್ತಿಶಿಲ್ಪ ಗಳಲ್ಲಿ ಅತ್ಯಂತ ಪ್ರಾಚೀನವಾದುದು. ಅದರ ಸಮಯ ಕ್ರಿಸ್ತಪೂರ್ವ ಎರಡನೆಯ ಶತಮಾನವೆಂದು ನಿಶ್ಚಿತವಾಗಿದೆ (JISOA, 1937, ಪು 126, ಚಿತ್ರ ಸಂಖ್ಯೆ 14). ಆಗಿನಿಂದಲೇ ನಮ್ಮಲ್ಲಿ ಮೂರ್ತಿಪೂಜೆ ವಿಶೇಷವಾಗಿ ಹರಡಿಕೊಂಡಿತೆಂದು ತೋರುತ್ತದೆ.

ಈ ಶೇಷಸಂಕರ್ಷಣನನ್ನು ಯೋಗಿಯೆಂದು ಬಣ್ಣಿಸಿರುವುದೂ ಇದೆ. ಭಾಗವತ (ಸಾತ್ತ್ವತ) ಧರ್ಮವನ್ನು ಬೋಧಿಸಿದವನು ಅವನೇ ಎಂದು ಮಹಾಭಾರತ (7,62,42), ಭಾಗವತ (6,16,33-46) ವಿಷ್ಣು ಧರ್ಮೋತ್ತರ ಪುರಾಣ (3,142,5)ಗಳಲ್ಲಿ ಹೇಳಿದೆ. ಆದರೆ ಮುಖ್ಯ ವಾಗಿ ಅವನು ಬೇಸಾಯಗಾರರ ದೇವತೆ. ಹಾಗೆಂದೇ ಅವನು 'ಲಾಂಗಲಿ'. ಲಾಂಗಲವೆಂದರೆ ನೇಗಿಲು. ಅದಿರಲಿ, ವೃಷ್ಣಿವಂಶದ ವೀರರಲ್ಲಿ ಅವನು ಮೊದಲಿಗ. ಉಳಿದವರನ್ನು ವಾಯುಪುರಾಣವು ವಾಸುದೇವ, ಶಾಂಬ, ಪ್ರದ್ಯುಮ್ನ, ಅನಿರುದ್ಧ ಎಂದು ನಿರ್ದೇಶಿಸುವಾಗ (ಪಂಚೈತೇ ವಂಶವೀರಾಃ) ವ್ಯೂಹದ ಕಲ್ಪನೆಯ ಚೌಕಟ್ಟು ಆಗಲೇ ಸಿದ್ಧವಾಗಿದ್ದಿತು. ಚತುರ್ವ್ಯೂಹಗಳು ಎಂಬುದು ನಿರ್ದಿಷ್ಟವಾದಾಗ ಶಾಂಬನನ್ನು ಬಿಟ್ಟು ಉಳಿದವರು ಪರವಾಸುದೇವನ ನಾಲ್ಕು ರೂಪಗಳೆಂದು ನಿಂತರು. ವ್ಯೂಹದ ಚೌಕಟ್ಟು ಮೂಡಿಕೊಂಡಾಗ ಸಂಕರ್ಷಣ ಹಿಂದೆಸರಿದು ತನ್ನ

ಅಗ್ರಸ್ಥಾನವನ್ನು ವಾಸುದೇವನಿಗೆ ಬಿಟ್ಟುಕೊಡಬೇಕಾಯಿತು. 'ಸಂಕರ್ಷಣ–ವಾಸುದೇವ' ಎಂದಿದ್ದುದು 'ವಾಸುದೇವ–ಸಂಕರ್ಷಣ' ಎಂದಾಯಿತು. ಮಹಾಭಾರತದಲ್ಲೇನೋ 'ರಾಮ–ಕೃಷ್ಣ' ಎನ್ನುವ ಬಳಕೆಯೇ ಹೆಚ್ಚು. ಆದರೆ ಕೃಷ್ಣನೇ ರಾಮನಿಗಿಂತ ಮುಂದಿದ್ದಾನೆ.

ಕೃಷ್ಣ–ವಾಸುದೇವನೇ ವ್ಯೂಹ–ವಾಸುದೇವನೆಂದು ನಿರ್ದಿಷ್ಟನಾದವನು. ಬಲರಾಮನ ತಮ್ಮ ಕೃಷ್ಣನು ಈ 'ವಾಸುದೇವ' ಪಟ್ಟವನ್ನು ಪಡೆದದ್ದು ಹೇಗೆಂದು ಖಚಿತವಾಗಿ ತಿಳಿಯುವುದಿಲ್ಲ. ಆದರೆ ವಾಸುದೇವನೆಂಬ ಕಲ್ಪನೆ ಕೃಷ್ಣನಿಂದ ಬೇರೆಯಾಗಿದ್ದುದು ತಿಳಿದುಬರುತ್ತದೆ. ಕರೂಷದ ದೊರೆ ಪೌಂಡ್ರಕ–ವಾಸುದೇವನೆಂಬುವನು ತಾನೇ ದಿಟವಾದ ವಾಸುದೇವನೆಂದು ಹೇಳಿಕೊಂಡು ವಿಷ್ಣುವಿನ ನಾಲ್ಕು ಚಿಹ್ನೆಗಳನ್ನು ಧರಿಸತೊಡಗಿದನೆಂದೂ, ನಾರದನು ಇದನ್ನೊಪ್ಪದೆ ಕೃಷ್ಣನೇ ದಿಟವಾದ ವಾಸುದೇವನೆಂದು ಹೇಳಿದಾಗ ಸಿಟ್ಟುಗೊಂಡ ಪೌಂಡ್ರಕನು ಕೃಷ್ಣನಿಗೆ 'ಮಿಥ್ಯಾಭಿಧಾನ'ವನ್ನು ಬಿಟ್ಟು ವಾಸುದೇವನ ಚಿಹ್ನೆಗಳನ್ನು ತನಗೆ ಸಲ್ಲಿಸಬೇಕೆಂದು ಹೇಳಿಕಳುಹಿಸಿ ಅವನೊಪ್ಪದೆ ಇರಲು ಮಥುರೆಯ ಮೇಲೆ ದಾಳಿಮಾಡಿದನೆಂದೂ, ಕೃಷ್ಣನು ಅವನನ್ನು ಕೊಂದನೆಂದೂ ಕಥೆಯಿದೆಯಷ್ಟೆ (ಭಾಗವತ, 10,66). ಜೈನರ ತ್ರಿಷಷ್ಟಿಶಲಾಕಾಪುರುಷರಲ್ಲಿ ಒಂಬತ್ತುಮಂದಿ ವಾಸುದೇವರಿದ್ದಾರೆ. ಯುಧಿಷ್ಠಿರನ ರಾಜಸೂಯಯಾಗದ ಸಂದರ್ಭದಲ್ಲಿ ಶಿಶುಪಾಲನು ಕೃಷ್ಣನ 'ಅರ್ಘ್ಯಾಭಿಹರಣ' ಯೋಗ್ಯತೆಯನ್ನು ಅಲ್ಲಗಳೆದದ್ದು, ಕೃಷ್ಣನು ಅವನನ್ನು ಕೊಂದದ್ದು ಮಹಾಭಾರತದಲ್ಲಿ ಬರುವ ವಿವರವೇ. ಹೀಗೆ ಕೃಷ್ಣನ ಹೆಗ್ಗಳಿಕೆಯನ್ನು ವಿರೋಧಿಸುವವರು ಇದ್ದರು. ಪತಂಜಲಿಯ ಮಹಾಭಾಷ್ಯದಲ್ಲಿ ಕೃಷ್ಣಭಕ್ತರಿದ್ದಂತೆಯೇ ಕಂಸಭಕ್ತರೂ ಇದ್ದರೆಂದು ಹೇಳಿದೆ ಮತ್ತು ಪಾಣಿನಿಯು ಹೇಳುವ 'ಋಷ್ಯಂಧಕವೃಷ್ಣಿಕುರು'ಗಳೆಂಬ ಜನರ ವಿಚಾರವಾಗಿ ಬರೆಯುತ್ತ ಪತಂಜಲಿಯು ಅಂಧಕ ಜನರಲ್ಲಿ ಶ್ವಫಲ್ಕ, ಚೈತ್ರಕ, ಉಗ್ರಸೇನ ಇವರನ್ನೂ, ವೃಷ್ಣಿಜನರಲ್ಲಿ ವಾಸುದೇವ, ಬಲದೇವ, ವಿಷ್ವಕ್ಸೇನರನ್ನೂ ಹೆಸರಿಸುತ್ತಾನೆ (4,1,14). ಕೃಷ್ಣನು ತನ್ನ ಸೋದರಮಾವ ಕಂಸನನ್ನು (ಅಂಧಕವಂಶದ ಉಗ್ರಸೇನನ ಮಗ) ಕೊಂದುದು ತಪ್ಪೆಂಬ ಭಾವನೆ ಜನರಲ್ಲಿ ಇದ್ದುದನ್ನು ಪತಂಜಲಿಯು 'ಅಸಾಧುರ್ಮಾತುಲೇ ಕೃಷ್ಣಃ' ಎಂಬ ಮಾತಿನಲ್ಲಿ ಸೂಚಿಸಿದ್ದಾನೆ.

ಎಂದರೆ ಕೃಷ್ಣನು ವಾಸ್ತವವಾಗಿ ಒಬ್ಬ ವ್ಯಕ್ತಿಯೇ. ಆದರೆ ಭಗವಂತನ ಅಂಶವೆಂಬ ಭಾವನೆ ಜನರಲ್ಲಿ ಇದ್ದಿತು ; ಅವನೇ ಭಗವಂತನೆಂದಲ್ಲ ('ನ ಭಗವಾನ್ ಸ್ವಯಂ'). ಪತಂಜಲಿಯು ವಾಸುದೇವನನ್ನು 'ತತ್ರ ಭವತಃ' ಎಂದು ಕರೆದಿರುವುದನ್ನು ನೆನಸಿಕೊಳ್ಳಬಹುದು (ಪಾಣಿನಿ 4,3, 98) ; ಈ ಮಾತಿಗೆ 'ಸನ್ಮಾನ್ಯನಾದ ಮನುಷ್ಯ' ಎಂದಷ್ಟೇ ಅರ್ಥ. ವಾಯುಪುರಾಣವು ವಾಸುದೇವನನ್ನು ವೃಷ್ಣಿವಂಶದ 'ಅತಿರಥ'ರಲ್ಲಿ ಒಬ್ಬನೆಂದು ಪರಿಗಣಿಸಿದೆ. ಇತರ 'ಅತಿರಥ'ರು ಸಂಕರ್ಷಣ, ಶಾಂಬ (ವಾಸುದೇವನ ಮಗ), ಚಾರುದೇಷ್ಣ, ಚಕ್ರದೇವ, ಸಾತ್ಯಕಿ ; 'ಮಹಾರಥ'ರು ಕೃತವರ್ಮ, ಅನಾಧೃಷ್ಟಿ, ಸಮೀಕ, ಸಮಿತಿಂಜಯ, ಕಂಕ, ಶಂಕು ಇವರು. ಚತುರ್ವ್ಯೂಹಗಳಲ್ಲಿ ಸೇರಿದ ಪ್ರದ್ಯುಮ್ನನು ವಾಸುದೇವನ ಮಗನೇ ; ಅನಿರುದ್ಧನು ಪ್ರದ್ಯುಮ್ನನ ಮಗ. ಹೀಗೆ ಕೃಷ್ಣನು ಮನುಷ್ಯರಲ್ಲಿ ಮನುಷ್ಯ.

ಮಹಾಭಾರತದಲ್ಲಿ ಬರುವ ಪ್ರಸ್ತಾಪಗಳಲ್ಲೂ ಎದ್ದುಕಾಣುವ ವಿವರ ಇದೇ. ಅವನನ್ನು ಭಗವದಂಶವೆಂದೂ, ಅವತಾರವಿಶೇಷವೆಂದೂ, ಭಗವಂತನೇ ಎಂದೂ ಬಗೆದಿರುವ ಭಾಗಗಳಿಲ್ಲದೆ ಇಲ್ಲ. ಆದರೆ ಮಹಾಭಾರತದ ರಚನೆ ಬೇರೆ ಬೇರೆ ಹಂತಗಳಲ್ಲಿ ಬೆಳೆದುದನ್ನು ಮರೆಯಬಾರದು. ಇಪ್ಪತ್ತುನಾಲ್ಕು ಸಾವಿರಶ್ಲೋಕಗಳಿದ್ದ 'ಜಯಾಖ್ಯ' ಸಂಹಿತೆಯ ದೃಷ್ಟಿಯೇನೋ, ಅದು ಮುಪ್ಪರಿಗೊಂಡು ಎಂಬತ್ತುನಾಲ್ಕುಸಾವಿರ ಎಂಟುನೂರುಮೂವತ್ತಾರು ಶ್ಲೋಕಗಳ 'ಭಾರತ'ವಾದ ಮೇಲೆ ಯಾವ ದೃಷ್ಟಿ ಒದಗಿಬಂದಿತೋ, ಮುಂದೆ ಅದೇ ಒಂದು ಲಕ್ಷಶ್ಲೋಕಪರಿಮಿತಿಯ 'ಮಹಾಭಾರತ'ವಾಗಿ ನಿಂತಾಗ ಈ ದೃಷ್ಟಿ ಹೇಗೆ ಮಾರ್ಪಟ್ಟಿತೋ ಈಗ ನಿರ್ಧರಿಸುವುದು ಕಷ್ಟ. ಈಗಿರುವ ಒಂದು ಲಕ್ಷ ಏಳುಸಾವಿರಮುನ್ನೂರುತೊಂಬತ್ತು ಶ್ಲೋಕಗಳ ಮಹಾಭಾರತದಲ್ಲಿ ಕೃಷ್ಣನನ್ನು ಬರಿಯ ಮನುಷ್ಯನೆಂದು (ಆದರೆ ಸರ್ವೋತ್ತಮನಾದ ಮನುಷ್ಯನೆಂದು) ನಿರೂಪಿಸುವ ಪ್ರಕರಣಗಳಿವೆ ; ದೇವರೆಂದು ಬಣ್ಣಿಸುವ ಭಾಗಗಳೂ ಇವೆ. ಆದರೆ ಕಥೆಯ ಓಟಕ್ಕೆ ಸೇರಿದ ಪ್ರಸಂಗಗಳಲ್ಲಿ ಬಹುಮಟ್ಟಿಗೆ ಕೃಷ್ಣನ ಚಿತ್ರ ಮನುಷ್ಯನದೇ. ಆದರೆ ಇದು ಬರಿಯ ಇತಿಹಾಸವಲ್ಲ, ಇತಿಹಾಸ-ಪುರಾಣವಾಯಿತು. ಉಪಕಥೆಗಳು, ಉಪಪ್ರಕರಣಗಳು, ಸ್ತವನ, ಸ್ತೋತ್ರ, ಬೋಧೆ ಮುಂತಾದವುಗಳು ಸೇರಿಕೊಂಡು

ಬಂದು ಅವುಗಳಲ್ಲಿ ಕೃಷ್ಣನು ವಿಷ್ಣುವಿನ ಅವತಾರವಾಗಿ ತೋರಿಕೊಳ್ಳುತ್ತಾನೆ.

ಭಾಗವತ, ಹರಿವಂಶ ಮತ್ತು ಪುರಾಣಗಳಲ್ಲೇನೋ ಕೃಷ್ಣ ಸಂಪೂರ್ಣವಾಗಿ ದೇವರೇ. ಅಲ್ಲಿ ಅವನ ಲೀಲೆಗಳೆಲ್ಲ ಅದ್ಭುತ, ಅಲೌಕಿಕ. ಆದರೆ ಈ ಗ್ರಂಥಗಳೆಲ್ಲವೂ ವಾಸುದೇವಕೃಷ್ಣನು ಭಗವದವತಾರವೆಂದು ಸಿದ್ಧವಾದಮೇಲೇ ಮೈದಳೆದುವೆನ್ನುವುದನ್ನು ಮರೆಯಬಾರದು. ಮಹಾಭಾರತದ ಮೂಲಕಥೆ ಕ್ರಿಸ್ತಪೂರ್ವ ನೂರಾರು ವರ್ಷಗಳಿಗೆ ಮೊದಲೇ ಜನಪ್ರಿಯವಾಗಿದ್ದಿತು ; ಪಾಣಿನಿಯ ಸೂತ್ರಗಳಲ್ಲಿ ಕೂಡ ಇದು ಸ್ಪಷ್ಟವಾಗುತ್ತದೆ. ಆದರೆ ಭಾಗವತ, ಹರಿವಂಶ, ಪುರಾಣಗಳೆಲ್ಲ ಕ್ರಿಸ್ತಾಬ್ದದ ತರುವಾಯ ಕೆಲವು ನೂರು ವರ್ಷಗಳನಂತರವೇ ರೂಪುಗೊಂಡುವು. ಇದಕ್ಕೆ ಭಾಷೆ, ಶೈಲಿ, ಪ್ರಸ್ತಾಪಕ್ಕೆ ಬಂದ ಪ್ರಸಂಗಗಳು, ಉಲ್ಲೇಖಗೊಂಡ ರಾಜರು ಮೊದಲಾದ ಆಂತರಿಕ ವಿವರಗಳಿಂದ ಸಮರ್ಥನೆ ಸಿಗುತ್ತದೆ. ಮೇಲೆ ಕಾಣಿಸಿದ ಬಂಕಿಮಚಂದ್ರ ಚಟ್ಟೋಪಾಧ್ಯಾರ 'ಕೃಷ್ಣ ಚರಿತ್ರೆ'ಯಲ್ಲಿ ಮೊದಲು ಮಹಾಭಾರತ, ಅನಂತರ ವಿಷ್ಣುಪುರಾಣ (ಪಂಚಮಾಂಶ), ಅದಾದ ಮೇಲೆ ಹರಿವಂಶ, ಅನಂತರ ಭಾಗವತ ಎಂದು ಕಾಲಕ್ರಮ ಸೂಚಿಸಿರುವುದು ಸರಿಯಾಗಿದೆ. ಅನುಕ್ರಮವಾಗಿ ಕೃಷ್ಣನ ಕಥೆ ಮಾನುಷೀನೆಲೆಯಿಂದ ದೈವದ ನೆಲೆಯನ್ನು ಏರಿದುದನ್ನು ಇಲ್ಲಿ ನಾವು ಗುರುತಿಸಬಹುದು.

ಮೊದಲಿನ ಮಾನುಷೀನೆಲೆಯ ನೆನಪು ಮುಂದೆ ಬಂದ ಗ್ರಂಥಗಳಲ್ಲೂ ಉಳಿದುಕೊಂಡಿರುವುದನ್ನೂ ನಾವು ಕಾಣಬಹುದು. ನಿದರ್ಶನಕ್ಕೆ ಭಾಗವತದಲ್ಲಿ (10,58) ಕೃಷ್ಣನಿಗೂ ಪಾಂಡವರಿಗೂ ಇದ್ದ ಸಂಬಂಧವನ್ನು ಸೂಚಿಸುವ ಶ್ಲೋಕವೊಂದಿದೆ. ಪಾಂಡವರಿದ್ದಲ್ಲಿಗೆ ಕೃಷ್ಣನು ಬಂದಾಗ ಅವನು ಯುಧಿಷ್ಠಿರನಿಗೂ ಭೀಮನಿಗೂ ಕಾಲುಮುಟ್ಟಿ ನಮಸ್ಕಾರಮಾಡಿದನಂತೆ (ಅವರು ಹಿರಿಯರಾದುದರಿಂದ) ; ಅರ್ಜುನನನ್ನು ಪ್ರೀತಿಯಿಂದ ತಬ್ಬಿಕೊಂಡನಂತೆ (ಅರ್ಜುನನು ಕೃಷ್ಣನಿಗಿಂತ ಎಂಟು ದಿನಗಳ ಮುಂಚೆ ಹುಟ್ಟಿ, ಹಿರಿಯನಾದರೂ ಒಂದೇ ಓರಗೆಯವರು, ಸ್ನೇಹಿತರು) ; ಅವಳಿಸೋದರರಾದ ನಕುಲ–ಸಹದೇವರು ಕೃಷ್ಣನಿಗೆ ನಮಸ್ಕರಿಸಿದರಂತೆ.

'ಯುಧಿಷ್ಠಿರಸ್ಯ ಭೀಮಸ್ಯ ಕೃತ್ವಾ ಪಾದಾಭಿವಂದನಂ ।
ಫಾಲ್ಗುನಂ ಪರಿರಭ್ಯಾಥ ಯಮಾಭ್ಯಾಂ ಚಾಭಿವಂದಿತಃ ॥'

ಹೀಗೆ ಮನುಷ್ಯ ಸಹಜವಾದ ವ್ಯವಹಾರವನ್ನೇ ಕೃಷ್ಣನಲ್ಲಿ ಸೂಚಿಸುವ ಭಾಗಗಳು ಎಷ್ಟೋ ಇವೆ. ಆದರೆ ಇವುಗಳಲ್ಲಿ ಇತಿಹಾಸ ಪ್ರಜ್ಞೆಗಿಂತ ಭಕ್ತಿಯ ಆವೇಶ, ಕವಿಸಮಯದ ಸ್ವಾರಸ್ಯ ಇವೇ ಪ್ರಧಾನವಾಗಿವೆ.

ಚಾರಿತ್ರಿಕ ವಿವರಗಳನ್ನೂ ಕಾವ್ಯಸಂದರ್ಭಗಳನ್ನೂ ಕಲೆಸಿ ಕಲ್ಪನೆಯ ಹಂದರವನ್ನು ಹಬ್ಬಿಸುವುದು ಲೋಕರಂಜನವೆನಿಸುವ ಸಾಹಿತ್ಯಪ್ರಕಾರಕ್ಕೆ ಸಹಜವಾದುದೇ. ಪುರಾಣಗಳಲ್ಲಿ ದೇವರೇ ಕೃಷ್ಣನಾಗಿ ಅವತರಿಸಿದನೆನ್ನುವುದು ಒಂದು ದಾರಿಯಾದರೆ ಬೌದ್ಧ ಗ್ರಂಥಗಳಲ್ಲಿ ಇನ್ನೊಂದು ದಾರಿಯನ್ನು ಕಾಣಬಹುದು. ಬೌದ್ಧರ ಪಾಳಿ ತ್ರಿಪಿಟಕವಾಙ್ಮಯಕ್ಕೆ ಸೇರಿದ 'ದೀರ್ಘನಿಕಾಯ'ವೆಂಬ ಭಾಗದಲ್ಲಿ ಅಂಬಷ್ಟಸೂತ್ರವೆಂಬುದೊಂದಿದೆ. ಇಲ್ಲಿ ಕೃಷ್ಣಾಯನಗೋತ್ರಕ್ಕೆ ಸೇರಿದ ಅಂಬಷ್ಟನ ವಂಶ ಪೂರ್ವಜನ ವೃತ್ತಾಂತವನ್ನು ಬುದ್ಧ ಹೇಳುತ್ತಾನೆ. ಬುದ್ಧನ ಕಾಲದವನು ಅಂಬಷ್ಟ ; ಅವನಿಗಿಂತ ಎಷ್ಟೋ ತಲೆಮಾರುಗಳ ಹಿಂದಿದ್ದವನು ವಂಶ ಪ್ರವರ್ತಕನಾದ ಕೃಷ್ಣ. ಇಲ್ಲಿ ಬರುವ ಕಥೆ ಹೀಗಿದೆ. ಶಾಕ್ಯವಂಶದ ಮೂಲಪುರುಷ ಇಕ್ಷ್ವಾಕುವೆಂಬ ರಾಜ. ಇವನ ದಾಸಿಯೊಬ್ಬಳು ದಿಶಾ ಎಂಬುವಳು. ಇವಳ ಮಗ ಕೃಷ್ಣ. ಮಗು ಹುಟ್ಟುವಾಗಲೇ ಮಾತನಾಡಿತು ; 'ಸ್ನಾನಮಾಡಿಸಿ ! ನನ್ನ ಹುಟ್ಟುಹೊಲೆಯನ್ನು ತೊಲಗಿಸಿ !' ಎಂದು ಕೂಗಿತು. ಹುಟ್ಟಿದಾಗಲೇ ಮಾತನಾಡಿದ ಮಗುವನ್ನು ನೋಡಿ ನೆರೆದವರೆಲ್ಲ 'ಇದೊಂದು ಭೂತವಿದ್ದೀತು' ಎಂದು ಬಗೆದರು ; ಪಿಶಾಚದ ಹೆಸರಾದ ಕೃಷ್ಣ ಎಂಬ ಹೆಸರಿನಿಂದಲೇ ಮಗುವನ್ನು ಕರೆದರು. ಆದರೆ ಕೃಷ್ಣ ದೊಡ್ಡವನಾಗಿ ಬೆಳೆದಮೇಲೆ ದಕ್ಷಿಣದೇಶಕ್ಕೆ ತೆರಳಿ ಅಲ್ಲಿ ತಪಸ್ಸು ಮಾಡಿ, ಬ್ರಹ್ಮಸಾಕ್ಷಾತ್ಕಾರವನ್ನು ಪಡೆದುಕೊಂಡು ಋಷಿಯಾದ. ಹಿಂದಿರುಗಿ ಬಂದು ಇಕ್ಷ್ವಾಕುರಾಜನ ಮಗಳಾದ ಮದ್ರರೂಪಿ ಎಂಬುವಳನ್ನು ಮದುವೆಯಾದ. ಅವನ ಮಕ್ಕಳು ಮೊಮ್ಮಕ್ಕಳು ಹೀಗೆ ಕೃಷ್ಣಾಯನ ಗೋತ್ರದವರೆನಿಸಿಕೊಂಡರು.

ಭಾಗವತ, ಹರಿವಂಶ, ಪುರಾಣಗಳಿಗಿಂತ ಎಷ್ಟೋ ಪ್ರಾಚೀನವಾದ ಈ ಬೌದ್ಧ ಸಾಹಿತ್ಯದಲ್ಲಿ ಕೃಷ್ಣನೊಬ್ಬ ಮಹಾಪುರುಷ, ಋಷಿ ; ಋಗ್ವೇದದಲ್ಲಿರುವಂತೆ, ಛಾಂದೋಗ್ಯ ಉಪನಿಷತ್ತಿನಲ್ಲಿರುವಂತೆ. ಈ ಪ್ರಸ್ತಾಪ

ವಲ್ಲದೆ, 'ಘಟಜಾತಕ'ವೆಂಬ ಭಾಗದಲ್ಲಿಯೂ (ಫಾವುಸ್‌ಬೋಲ್, ಸಂಖ್ಯೆ 454, ಕೊವೆಲ್ ಸಂಪಾದಿತ, 4, ಪು 50 ಮುಂದೆ) ಕೃಷ್ಣನ ವಿಚಾರ ಬರುತ್ತದೆ. ಇಲ್ಲಿ ಅವನು ಮಥುರೆಯಲ್ಲಿನ ರಾಜವಂಶಕ್ಕೆ ಸೇರಿದವನು ; ತಾಯಿಯ ಹೆಸರು ದೇವಗರ್ಭಾ ; ತಂದೆ ಉಪಸಾಗರ. ಹುಟ್ಟಿದೊಡನೆ ಉಪದ್ರವದಿಂದ ಪಾರುಮಾಡಲು ಮಗುವನ್ನು ತಾಯಿಯ ದಾಸಿಯಾಗಿದ್ದ ನಂದಗೋಪಾ ಎಂಬುವಳ ಆರೈಕೆಯಲ್ಲಿ ಬಿಡುತ್ತಾರೆ. ನಂದಗೋಪೆಯ ಗಂಡ ಅಂಧಕವೃಷ್ಣಿ. ಕೃಷ್ಣನ ಐತಿಹಾಸಿಕತೆಯನ್ನು ಸಮರ್ಥಿಸುವ ಇನ್ನೊಂದು ಆಕರ ಇದು.

ಜೈನವಾಙ್ಮಯದಲ್ಲೂ ಕೃಷ್ಣ ಕಾಣಿಸಿಕೊಳ್ಳುತ್ತಾನೆ. ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನಿಗೆ (ಅರಿಷ್ಟನೇಮಿಗೆ) ಹತ್ತಿರದ ನೆಂಟ. 'ಉತ್ತರಾಧ್ಯಯನ ಸೂತ್ರ'ದಲ್ಲಿ (22ನೆಯ ಅಧ್ಯಾಯ) ಬರುವ ಒಕ್ಕಣೆಯಂತೆ, ಶೌರಿಪುರದ ಅರಸುಗುವರರು ವೃಷ್ಣಿವಂಶದ ವಾಸುದೇವ, ನೇಮಿನಾಥರು. ಹಿರಿಯ ಸೋದರ ವಸುದೇವ. ಅವನಿಗೆ ರೋಹಿಣಿಯೆಂಬ ಹೆಂಡತಿಯಲ್ಲಿ ರಾಮ (ಎಂದರ ಬಲದೇವ), ದೇವಕಿಯೆಂಬ ಹೆಂಡತಿಯಲ್ಲಿ ಕೇಶವ (ವಾಸುದೇವ) ಎಂಬಿಬ್ಬರು ಮಕ್ಕಳಾದರು. ಕಿರಿಯ ಸೋದರ ಸಮುದ್ರವಿಜಯ ; ಅವನ ಹೆಂಡತಿ ಶಿವೆಯಲ್ಲಿ ಅವನಿಗೆ ಅರಿಷ್ಟನೇಮಿಯು (ನೇಮಿನಾಥನು) ಮಗನಾಗಿ ಹುಟ್ಟಿದ. ಕೇಶವನೇ ನೆರೆಯ ಅರಸುಗುವರಿ ರಾಜಮತಿಯೆಂಬ ಹುಡುಗಿಯೊಂದಿಗೆ ಅರಿಷ್ಟನೇಮಿಯ ಮದುವೆಯನ್ನು ಗೊತ್ತುಮಾಡಿದ. ಆದರೆ ಮದುಮಕ್ಕಳ ದಿಬ್ಬಣ ಸಾಗುತ್ತಿರುವಾಗ, ಅಂದಿನ ಔತಣಕ್ಕೆಂದು ಹಲವು ಪ್ರಾಣಿಗಳನ್ನು ಕೊಲ್ಲಲು ಅಟ್ಟಿಕೊಂಡು ಹೋಗುತ್ತಿದ್ದುದನ್ನು ಕಂಡ ಅರಿಷ್ಟನೇಮಿಗೆ ವಿರಕ್ತಿ ಒದಗಿ ಆಗಿಂದಾಗಲೆ ಗಿರಿನಾರಕ್ಕೆ ಹೋಗಿ ತಪಸ್ಸಿಗೆ ನಿಲ್ಲುವನು ; ಮುಂದೆ ತೀರ್ಥಂಕರನಾಗುತ್ತಾನೆ.

ಜೈನಸಾಹಿತ್ಯದಲ್ಲಿ ಇನ್ನೊಂದು ಒಕ್ಕಣೆಯೂ ಇದೆ. ಶೌರಿಪುರದ ಅರಸ ಅಂಧಕವೃಷ್ಣಿಯೆಂಬುವನು ; ಯಾದವವಂಶದವನು. ಅವನಿಗೆ ಹತ್ತುಮಂದಿ ಮಕ್ಕಳು. ಹಿರಿಯುವನು ಸಮುದ್ರವಿಜಯ ; ಇವನ ಮಗ ಅರಿಷ್ಟನೇಮಿ. ಕಿರಿಯುವನು ವಸುದೇವ. ಇವನಿಗೆ ಇಬ್ಬರು ಹೆಂಡತಿಯರಾದ ರೋಹಿಣಿಯಲ್ಲಿ ರಾಮ, ದೇವಕಿಯಲ್ಲಿ ಕೃಷ್ಣ ಹುಟ್ಟಿದರು. ಜರಾಸಂಧನ ಹಾವಳಿಗೆ ಹೆದರಿ ಯಾದವರು ಶೌರಿಪುರವನ್ನು ಬಿಟ್ಟು ದ್ವಾರಕೆಯಲ್ಲಿ ನೆಲೆಸಿದರು. ಮುಂದೆ, ಮೇಲೆ ಹೇಳಿದಂತೆ ಅರಿಷ್ಟನೇಮಿ ತಪಸ್ಸಿಗೆ

ತೆರಳಿ, ಜಿನನಾಗಿ, ಹಿಂದಿರುಗಿ ವೃಷ್ಣಿ ವಂಶದ ಹನ್ನೆರಡು ಮಂದಿ ರಾಜ ಕುಮಾರರಿಗೆ ಧರ್ಮಬೋಧೆ ಮಾಡುತ್ತಾನೆ. ಈ ವಿಚಾರ ಜೈನಾಗಮದ ಹನ್ನೆರಡನೆಯ ಉಪಾಂಗವಾದ 'ವಹ್ನಿದಸಾಓ' ಎಂಬ ಗ್ರಂಥದಲ್ಲಿ ಬರುತ್ತದೆ. ಇಲ್ಲಿ ಕೃಷ್ಣನ ಕಥೆಯೂ ಸೇರಿಕೊಂಡಿದೆ. ಜರಾಸಂಧನ ಉಪದ್ರವವನ್ನು ತಪ್ಪಿಸಿದನೆಂಬ ಕೀರ್ತಿ ಕೃಷ್ಣನದ್ದು ಜೈನಸಾಹಿತ್ಯದಲ್ಲಿ. ಮಹಾಭಾರತಯುದ್ಧ ವಾಸ್ತವವಾಗಿ ಕೃಷ್ಣ–ಜರಾಸಂಧರ ಕಾಳಗವೆಂದು ಈ ಸಾಹಿತ್ಯದ ಎಣಿಕೆ. ಶ್ವೇತಾಂಬರರ ತ್ರಿಷಷ್ಟಿಶಲಾಕಾಪುರುಷರಲ್ಲಿ ಕೃಷ್ಣನೂ ಸೇರುತ್ತಾನೆ. ಇಪ್ಪತ್ತುನಾಲ್ಕು ಮಂದಿ ತೀರ್ಥಂಕರರು, ಹನ್ನೆರಡು ಮಂದಿ ಚಕ್ರವರ್ತಿಗಳು, ಒಂಬತ್ತು ಜನ ವಾಸುದೇವರು ಒಂಬತ್ತು ಜನ ಪ್ರತಿವಾಸುದೇವರು (ಎಂದರೆ ವಿಷ್ಣುದ್ವೇಷಿಗಳು), ಒಂಬತ್ತು ಜನ ಬಲದೇವರು ಸೇರಿ ತ್ರಿಷಷ್ಟಿಶಲಾಕಾಪುರುಷರು. ವಾಸುದೇವರಲ್ಲಿ, ಕೃಷ್ಣ ಒಬ್ಬ ; ಕೃಷ್ಣನಲ್ಲದೆ ಇತರ ವಾಸುದೇವರೂ ಇದ್ದಾರೆ. ಇವರನ್ನೆಲ್ಲ ಎದುರಿಸುವವರೂ ಇದ್ದಾರೆ.

ಅಂತೂ, ವೃಷ್ಣಿವಂಶದ ಯಾದವರಾಜಪುತ್ರರಾದ ಕೃಷ್ಣ–ವಾಸುದೇವನೂ ಬಲರಾಮನೂ ಮಥುರೆ, ದ್ವಾರಕೆಯ ಕಡೆ ಇದ್ದುದೂ, ಕಂಸನಿಂದಲೂ ಜರಾಸಂಧನಿಂದಲೂ ಯಾದವರಿಗೆ ಉಪದ್ರವವಾಗುತ್ತಿದ್ದಾಗ ಈ ಇಬ್ಬರನ್ನು ನಿಗ್ರಹಿಸಿ ವಂಶವೀರರೆನಿಸಿಕೊಂಡುದೂ, ಮಹಾಪುರುಷರೆಂದು ಪ್ರಸಿದ್ಧರಾದುದೂ ಪ್ರಾಚೀನವಾದ ವಿವರಗಳು. ಹಲವಾರು ಆಕರಗಳಿಂದ ಇವಕ್ಕೆ ಸಮರ್ಥನೆ ದೊರೆಯುತ್ತದೆ. ಪತಂಜಲಿಯೇ ಪ್ರಸ್ತಾಪಮಾಡುವ ಕಂಸವಧೆ ರಾಮ–ಕೃಷ್ಣರ ಹೆಗ್ಗಳಿಕೆಗೂ ಭಾರತ ಯುದ್ಧಕ್ಕೂ ಪರಂಪರೆಯಿಂದ ಕಾರಣವಾಯಿತು ; ನೇರವಾಗಿ ಅಲ್ಲ.

(4) ಶ್ರೀಕೃಷ್ಣ ಚರಿತ್ರೆ

ಇಲ್ಲಿ ಸ್ಥೂಲವಾಗಿ ಕೃಷ್ಣನ ಬದುಕನ್ನೂ ಸಾಧನೆಯನ್ನೂ ವಿವರಿಸಿದರೆ ಅನುಚಿತವಾಗದು. ಮಥುರೆಯಲ್ಲಿ ರಾಜನಾಗಿದ್ದ ಯಾದವ ಭೋಜವಂಶದ ಉಗ್ರಸೇನನ ಮಗ ಕಂಸ ; ಸ್ವಭಾವದಲ್ಲಿ ದುಷ್ಟ. ಮಗನೆಂದರೆ ತನ್ನ ರಾಣಿಯ ಮಗನಲ್ಲ ; ದಾನವರಾಜ ಸೌಭನ ಮಗಳು ದ್ರುಮಿಳೆಯೆಂಬುವಳನ್ನು ಕಾಮಿಸಿ ಉಗ್ರಸೇನನು ಪಡೆದುಕೊಂಡವನು. ತನ್ನ ತಂದೆಯನ್ನೇ ಸೆರೆಮನೆಯಲ್ಲಿಟ್ಟು ತಾನು ಮಥುರೆಯ ರಾಜನಾಗಿದ್ದ. ಇವನ ಹೆಂಡತಿ ಜೀವದ್ಯಶೆಯೆಂಬುವಳು ಮಗಧರಾಜನಾಗಿದ್ದ ಜರಾಸಂಧನ ಮಗಳು. ಉಗ್ರಸೇನನ ಸೋದರ ದೇವಕನ ಮಗಳು ದೇವಕಿ. ಇವಳ ಕೈಹಿಡಿದವನು ವೃಷ್ಣಿವಂಶದ ವಸುದೇವ (ಉಪಸಾಗರನೆಂದೂ ಹೆಸರಿದೆ). ಇವರ ಮಗ ಕೃಷ್ಣ. ವಸುದೇವನ ಇನ್ನೊಬ್ಬಳು ಹೆಂಡತಿ ರೋಹಿಣಿ ; ಅವಳ ಮಗ ಬಲರಾಮ ; ಕೃಷ್ಣನಿಗಿಂತ ದೊಡ್ಡವನು. ದೇವಕಿಯ ಮಗನಿಂದ ತನಗೆ ಉಪದ್ರವವೆಂದು ಕಂಸ ತಿಳಿದು, ದೇವಕಿಯನ್ನೂ ವಸುದೇವನನ್ನೂ ನಿರ್ಬಂಧಿಸಿದ. ಇವನ ತೊಂದರೆಗೆ ಮಕ್ಕಳು ಪಕ್ಕಾಗಬಾರದೆಂದು ರಾಮ–ಕೃಷ್ಣರು ಯಮುನಾನದಿಯ ಆಚೆ ದಡದಲ್ಲಿದ್ದ ವ್ರಜದ ನಂದಗೋಪನ ಮನೆಯಲ್ಲಿ ಗುಟ್ಟಾಗಿ ಬೆಳೆಯುವ ಏರ್ಪಾಡಾಯಿತು. ಕಡೆಗೆ ರಾಮ–ಕೃಷ್ಣರು ಮಥುರೆಗೆ ಬಂದು ಕಂಸನನ್ನು ಕೊಂದರು. ಜನರಿಗೆ ಆತಂಕಕಾರಿಯಾಗಿದ್ದ ಕಂಸನನ್ನು ಕೊಂದು ರಾಮಕೃಷ್ಣರು ಜನಪ್ರೀತಿಯನ್ನು ಗಳಿಸಿ ವೀರರೆನಿಸಿಕೊಂಡರು. ಮತ್ತೆ ಉಗ್ರಸೇನನಿಗೇ ಮಥುರೆಯ ಪಟ್ಟವನ್ನು ಕಟ್ಟಿ, ತಾವು ಅಲ್ಲಿಂದ ಹೊರಟು ಕಾಶಿಯಲ್ಲಿ ಸಾಂದೀಪಿನಿಯೆಂಬ ಋಷಿಯ ಬಳಿ ವಿದ್ಯಾಭ್ಯಾಸ ಮಾಡುತ್ತ ನಿಂತರು. ಅದಕ್ಕೆ ಮೊದಲು ಅವರಿಗೆ ಆಂಗಿರಸಗೋತ್ರದ ಗರ್ಗನೆಂಬ ಋಷಿಯಿಂದ ದೀಕ್ಷೆ ದೊರಕಿತ್ತು.

ಕಂಸವಧೆಯಿಂದ ಸಿಟ್ಟಿಗೆದ್ದವನು ಅವನ ಮಾವ ಜರಾಸಂಧ. ಮಗಧದ ರಾಜ, ಇಪ್ಪತ್ತು ಅಕ್ಷೋಹಿಣಿ ಸೈನ್ಯದ ಒಡೆಯ ; ಸ್ವಭಾವದಲ್ಲಿ

ದುಷ್ಟ, ಜನರನ್ನು ಹಿಂಸಿಸುತ್ತಿದ್ದವನು. ರಾಮ-ಕೃಷ್ಣರನ್ನು ದಂಡಿಸಲು ಮಥುರೆಯನ್ನು ದಾಳಿಮಾಡಿದನು. ಹದಿನೆಂಟು ಬಾರಿ ಮುತ್ತಿ ಯಾದವರ ಬಲವನ್ನೆಲ್ಲ ಉಡುಗಿಸಿದನು. ರಾಮ-ಕೃಷ್ಣರು ಅವನನ್ನು ಹಿಮ್ಮೆಟ್ಟಿಸಿದ ರಾದರೂ ಕಡೆಗೆ ಯಾದವರು ವಿಧಿಯಿಲ್ಲದೆ ಮಥುರೆಯನ್ನು ಬಿಟ್ಟು ದೂರ ದಲ್ಲಿ ಸಮುದ್ರದ ನಡುವೆ ದ್ವೀಪವಾಗಿದ್ದ ದ್ವಾರಕೆಗೆ ಹೋಗಬೇಕಾಯಿತು.

ವಿದರ್ಭರಾಜನಾದ ಭೀಷ್ಮಕನ ಮಗಳು ರುಕ್ಮಿಣಿ ಕೃಷ್ಣನಲ್ಲಿ ಅನುರಕ್ತಳಾದಳು. ಆದರೆ ಜರಾಸಂಧನ ಒತ್ತಾಯದಿಂದ ಭೀಷ್ಮಕನು ಮಗಳನ್ನು ಕೃಷ್ಣನಿಗೆ ಕೊಡಲೊಪ್ಪದೆ, ಕೃಷ್ಣನಿಗೆ ನೆಂಟನಾಗಿದ್ದರೂ ಹಗೆಯಾಗಿದ್ದ ಚೇದಿರಾಜ ಶಿಶುಪಾಲನಿಗೆ ಕೊಡುವುದೆಂದು ನಿಶ್ಚಯಿಸಿ ಮದುವೆಯನ್ನು ಬೆಳೆಸಲು ಏರ್ಪಾಡುಮಾಡಿದ. ಆದರೆ ರುಕ್ಮಿಣಿಯ ಅಪೇಕ್ಷೆಯಂತೆ ಕೃಷ್ಣನು ಅವಳನ್ನು 'ಹರಣ' ಮಾಡಿ ಕೊಂಡೊಯ್ದು ಮದುವೆಯಾದನು. ಇದು ಜರಾಸಂಧನಿಗೆ ಎರಡನೆಯ ಸೋಲು.

ಕೃಷ್ಣ ಮಹಾಭಾರತದ ಕಥೆಯಲ್ಲಿ ಮೊದಲು ಕಾಣಿಸಿಕೊಳ್ಳುವುದು ಪಾಂಚಾಲನಗರಿಯಲ್ಲಿ, ದ್ರೌಪದೀ-ಸ್ವಯಂವರದ ಸಂದರ್ಭದಲ್ಲಿ. ಅಲ್ಲಿ ವೇಷವನ್ನು ಮರೆಮಾಚಿಕೊಂಡು ಪಾಂಡವರಿದ್ದರು. ಪಾಂಡವರು ಕುಂತಿಯ ಮಕ್ಕಳು ; ಕುಂತಿ ಕೃಷ್ಣನಿಗೆ ಸೋದರತ್ತೆ (ವಸುದೇವನ ತಂಗಿ). ಆದರೆ ಆವರೆಗೆ ಕೃಷ್ಣನು ಪಾಂಡವರನ್ನು ಕಂಡುದೇ ಇಲ್ಲ. ಇತರ ರಾಜರಂತೆ ಕೃಷ್ಣ-ಬಲರಾಮರು ದ್ರುಪದರಾಜನಿಂದ ಸಮಾರಂಭಕ್ಕೆ ಆಹೂತರಾಗಿ ಬಂದಿದ್ದವರು. ಸ್ವಯಂವರಕ್ಕೆಂದು ಬಂದವರಲ್ಲ. ಪಾಂಡವ ರಾದರೋ ಆಹೂತರಾಗದೆ ಸ್ವಯಂವರಕ್ಕೆಂದೇ ಬಂದಿದ್ದವರು. ಆದರೆ ಅವರು ಅರಗಿನ ಮನೆಯಲ್ಲಿ ಸತ್ತರೆಂದು ಎಲ್ಲರೂ ತಿಳಿದಿದ್ದರು ; ಇಲ್ಲಿಗೆ ಗುಟ್ಟಾಗಿ ಬಂದುದು ಯಾರಿಗೂ ತಿಳಿದಿರಲಿಲ್ಲ. ದ್ರೌಪದಿಯು ಬ್ರಾಹ್ಮಣ ವೇಷದಲ್ಲಿದ್ದ ಅರ್ಜುನನನ್ನು ವರಿಸಿದಮೇಲೆ, ನೆರೆದಿದ್ದ ರಾಜರೆಲ್ಲರೂ ತಮಗೆ ಅವಮಾನವಾಯಿತೆಂದು ಸಿಟ್ಟಿಗೆದ್ದು ದ್ರುಪದರಾಜನ ಮೇಲೆ ಯುದ್ಧಕ್ಕೆ ಸಿದ್ಧರಾದರು. ಹೀಗೆ ಯುದ್ಧಮಾಡುವುದು ನ್ಯಾಯವಲ್ಲ ವೆಂದೂ ದ್ರೌಪದಿಯು ಸ್ವಯಂ ವರಿಸಿರುವುದು ಧರ್ಮವೇ ಆಗಿದೆಯೆಂದೂ ಹೇಳಿ ಯುದ್ಧವಾಗದಂತೆ ತಡೆದವನು ಕೃಷ್ಣ —

'ನಿವಾರಯಾಮಾಸ ಮಹೀಪತೀಂಸ್ತಾನ್ ।
ಧರ್ಮೇಣ ಲಬ್ಧೇತ್ಯನುನೀಯ ಸರ್ವಾನ್'
(ಆದಿಪರ್ವ, ಸ್ವಯಂವರ ಪರ್ವ, 189,38)

ಈ ಸಂದರ್ಭ ಕೃಷ್ಣನ ವ್ಯಕ್ತಿತ್ವವನ್ನು ಎತ್ತಿತೋರಿಸುತ್ತದೆ. ಧರ್ಮಕ್ಕೆ ಕಟ್ಟುಬಿದ್ದು ನಡೆದುಕೊಳ್ಳಬೇಕು ; ಸ್ವಾರ್ಥ, ಮಾನಾಪಮಾನ, ರಾಗ ಕ್ರೋಧ ದ್ವೇಷಾದಿಗಳಿಂದ ಪ್ರೇರಿತರಾಗಿ ಯುದ್ಧಕ್ಕೆ ತೊಡಗ ಬಾರದು. ತಾನೂ ಕ್ಷತ್ರಿಯನೇ ಆದರೂ, ಬ್ರಾಹ್ಮಣನೊಬ್ಬನು (ಅರ್ಜುನನು ಕ್ಷತ್ರಿಯನೇ ಆದರೂ ಬ್ರಾಹ್ಮಣವೇಷದಲ್ಲಿದ್ದನಷ್ಟೆ) ಮತ್ಸ್ಯ ಯಂತ್ರವನ್ನು ಭೇದಿಸಿ ರಾಜಪುತ್ರಿಯನ್ನು ಪಡೆದುಕೊಂಡುದು ಕ್ಷತ್ರಿಯರಿ ಗೆಲ್ಲ ನಾಚಿಕೆಗೇಡಿನ ಪ್ರಸಂಗವಾದರೂ, ಇತರ ರಾಜರಂತೆ ಅವನು ಕೋಪ ಗೊಂಡು ಕದನಕ್ಕೆ ಸೊಂಟಕಟ್ಟಲಿಲ್ಲ. ಧರ್ಮದ ಕಡೆ ಅವನ ದೃಷ್ಟಿ. ಸಿಟ್ಟಿಗೆದ್ದ ರಾಜರನ್ನೆಲ್ಲ ಸಮಾಧಾನಮಾಡಿದ. ಮಹಾಭಾರತದಲ್ಲಿ ಹೀಗೆ ಕೃಷ್ಣ ಮೊಟ್ಟಮೊದಲು ಕಾಣಿಸಿಕೊಳ್ಳುವುದೇ ಧರ್ಮಸಂಸ್ಥಾಪನೆಯ ಸಂದರ್ಭದಲ್ಲಿ. 'ಧರ್ಮಕ್ಕೆ ಯಾವಾಗ ಧಕ್ಕೆಯುಂಟಾಗುವುದೋ ಆಗ ನಾನು ತೋರಿಕೊಳ್ಳುತ್ತೇನೆ' ಎನ್ನುವ ಗೀತಾವಾಕ್ಯವನ್ನು ನೆನೆಸಿಕೊಳ್ಳಿ.

ಮುಂದೆ ಅವರು ಪಾಂಡವರೆಂಬುದನ್ನು ಪತ್ತೆಮಾಡಿ, ಅವರು ಇಂದ್ರಪ್ರಸ್ಥದಲ್ಲಿ ಒಡೆತನಮಾಡುವ ವ್ಯವಸ್ಥೆಗೆ ಕಾರಣನಾದವನೂ ಕೃಷ್ಣನೇ. ಹೀಗೆ ಮಾಡಿ ದ್ವಾರಕೆಗೆ ಹಿಂದಿರುಗಿದ. ಮುಂದೆ ದಿಟವಾಗಿ ಹೊರಗೆ ಕೃಷ್ಣ ಕಾಣಿಸಿಕೊಳ್ಳುವುದು ಸಭಾಪರ್ವದಲ್ಲಿ ; ಯುಧಿಷ್ಠಿರನು ರಾಜಸೂಯ ಯಾಗ ಮಾಡುವ ಸಂದರ್ಭದಲ್ಲಿ. ರಾಜರು ತಮ್ಮ ಹಿರಿಮೆ ಯನ್ನು ಲೋಕಕ್ಕೆ ಗೊತ್ತುಪಡಿಸಲು ಮಾಡುವ ಯಾಗ ರಾಜಸೂಯ. ಯುಧಿಷ್ಠಿರನು ಇದನ್ನು ಮಾಡಬೇಕೆಂದು ಹಲವರು ಹೇಳಿದ್ದರೂ, ಯುಧಿಷ್ಠಿರನಿಗೆ ತನ್ನ ಯೋಗ್ಯತೆಯ, ಸಾಮರ್ಥ್ಯದ ವಿಚಾರದಲ್ಲಿ ಅಳು ಕಿದ್ದಿತು. ಆದ್ದರಿಂದ ಕೃಷ್ಣನನ್ನು ಕೇಳಿ ಅನಂತರ ನಿರ್ಧಾರವನ್ನು ಕೈಗೊಳ್ಳುವುದೆಂದುಕೊಂಡನು. ಅವನು ಕೃಷ್ಣನ ವಿಚಾರವಾಗಿ ಹೊಂದಿದ್ದ ಅಭಿಪ್ರಾಯ ಹೀಗೆ—"ಲೋಕದಲ್ಲಿ ಸಾಮಾನ್ಯವಾಗಿ ಎಲ್ಲರೂ ತಮ್ಮ ಪ್ರಯೋಜನವನ್ನೇ ಮುಂದೆಮಾಡಿಕೊಂಡು, ಕೇಳಿದವರಿಗೆ ಪ್ರಿಯವಾದು ದನ್ನೇ ಹೇಳುತ್ತಾರೆ ('ಸ್ವಾರ್ಥಹೇತೋಃ... ಪ್ರಿಯಮೇವ ವದಂತಿ...') ಆದರೆ ನೀನು ಇಂಥ ಕಾರಣಗಳನ್ನು ಕಡೆಗಣಿಸಿ, ಬಯಕೆಯನ್ನೂ ಮುನಿಸನ್ನೂ ಬದಿಗಿಟ್ಟು, ಲೋಕದಲ್ಲಿ ಯಾವುದು ಸರಿಯೋ ಅದನ್ನು ಮಾತ್ರ ಇದ್ದುದು ಇದ್ದಂತೆ ಹೇಳುವೆ"

'ತ್ವಂ ತು ಹೇತೂನತೀತ್ಯೈತಾನ್ ಕಾಮಕ್ರೋಧೌ ವ್ಯುದಸ್ಯ ಚ।
ಪರಮಂ ಯತ್ಕ್ಷಮಂ ಲೋಕೇ ಯಥಾವದ್ ವಕ್ತುಮರ್ಹಸಿ॥'
ಆಗಿದ್ದ ಕೃಷ್ಣನ ಪ್ರಖ್ಯಾತಿ ಇದು.

ಇದಕ್ಕೆ ಸರಿಯಾಗಿ ಕೃಷ್ಣ ಹೇಳಿದ್ದೂ ಅಲ್ಲಿದೆ. 'ರಾಜಸೂಯ ಯಾಗವನ್ನು ಮಾಡುವವನು ಎಲ್ಲ ರಾಜರನ್ನೂ ಗೆದ್ದಿರಬೇಕು. ನೀನು ಹಲವು ರಾಜರ ವಿಶ್ವಾಸವನ್ನು ಗಳಿಸಿಕೊಂಡಿದ್ದೀಯೆ. ಆದ್ದರಿಂದ ಅವರು ಯಾರೂ ನಿನಗೆ ಅಡ್ಡಿಯಾಗಲಾರರು. ಆದರೆ ಮಗಧದ ರಾಜ ಜರಾಸಂಧನನ್ನು ಗೆದ್ದಲ್ಲದೆ ರಾಜಸೂಯಯಾಗಕ್ಕೆ ನಿನಗೆ ಅಧಿಕಾರವಿರದು. ಆ ರಾಜನೋ ದುಷ್ಟ, ಕ್ರೂರಿ. ಅವನ ಭಯದಿಂದಲೇ ನಾವೆಲ್ಲ ಯಾದವರು ಮಥುರೆಯನ್ನು ಬಿಟ್ಟು ದ್ವಾರಕೆಗೆ ಓಡಿದ್ದು. ಅವನ ಸೆರೆಮನೆಯಲ್ಲಿ ಎಂಬತ್ತಾರುಮಂದಿ ರಾಜರು ಕೊಳೆಯುತ್ತಿದ್ದಾರೆ ; ಅವರೆಲ್ಲರನ್ನೂ ಅವನು ಇಷ್ಟರಲ್ಲೇ ರುದ್ರನಿಗೆ ಬಲಿಯೆಂದು ಕೊಲ್ಲಲಿದ್ದಾನೆ. ಅವರನ್ನೆಲ್ಲ ಬಿಡಿಸುವುದು ನಿನ್ನ ಧರ್ಮ. ಅವರೆಲ್ಲ ಇಲ್ಲದೆ ನೀನು ರಾಜಸೂಯಯಾಗವನ್ನು ಹೇಗೆ ನಡೆಸುವೆ ? ಲೋಕವನ್ನು ದುಷ್ಟನಾದ ಜರಾಸಂಧನ ಭಯದಿಂದ ಪಾರುಮಾಡುವುದು ನಿನ್ನ ಕರ್ತವ್ಯ !"

ಭೀಮಾರ್ಜುನರು ಕೃಷ್ಣನೊಂದಿಗೆ ಮಗಧರಾಜ್ಯಕ್ಕೆ ಹೋಗಿ ಜರಾಸಂಧನನ್ನು ಕಂಡು ಅವನನ್ನು ಕಾಳಗಕ್ಕೆ ಕರೆದರು. ಜರಾಸಂಧನೊಂದಿಗೆ ಮಾತನಾಡಿದವನು ಕೃಷ್ಣನೇ. ಮಾತನಾಡುವಾಗ ಅವನು ತನ್ನ ಪೂರ್ವವೈರವನ್ನು ನೆನಪಿಗೆ ತಂದುಕೊಳ್ಳಲಿಲ್ಲ. "ಇಷ್ಟೊಂದು ಮಂದಿ ಕ್ಷತ್ರಿಯರಾಜರನ್ನು ಸೆರೆಹಿಡಿದು ಹಿಂಸಿಸುತ್ತಿರುವೆ. ನಿನಗೆ ಜೀವದ ಮೇಲೆ ಆಸೆಯಿದ್ದರೆ ಆ ರಾಜರನ್ನೆಲ್ಲ ಬಿಟ್ಟುಬಿಡು."

'ಮುಂಚ ವಾ ನೃಪತೀನ್ ಸರ್ವಾನ್ ಗಚ್ಛ ವಾ ತ್ವಂ ಯಮಕ್ಷಯಂ' ಇದೊಂದೇ ಕೃಷ್ಣನು ಹಾಕಿದ ಶರತ್ತು. ಮೊದಲಲ್ಲೇ ಕೃಷ್ಣನು ತನ್ನ ನಿಲುವನ್ನು ವ್ಯಕ್ತಪಡಿಸುವ ಮಾತೊಂದನ್ನಾಡಿದ್ದಾನೆ–"ನಾವು ಧರ್ಮದಂತೆ ನಡೆದುಕೊಳ್ಳುವವರು; ಧರ್ಮವನ್ನು ಕಾಪಾಡಲು ಸಮರ್ಥರು" ('ವಯಂ ಹಿ ಶಕ್ತಾ ಧರ್ಮಸ್ಯ ರಕ್ಷಣೇ ಧರ್ಮಚಾರಿಣಃ') (ಸಭಾಪರ್ವ, ಜರಾಸಂಧ ಪರ್ವ, 22, 10)

ಭೀಮನಿಂದ ಜರಾಸಂಧನ ವಧೆಯಾದ ಮೇಲೆ, ರಾಜಸೂಯ ಯಾಗದಲ್ಲಿ ಅರ್ಘ್ಯಾಭಿಹರಣ ಯಾರಿಗೆ ಸಲ್ಲಬೇಕೆಂಬ ಪ್ರಶ್ನೆ ಬಂದಾಗ ಭೀಷ್ಮರು ಕೃಷ್ಣನ ಹೆಸರನ್ನು ಸೂಚಿಸಿದರು. ಚೇದಿರಾಜನಾದ ಶಿಶು

ಪಾಲನೆದ್ದು ಕೃಷ್ಣನನ್ನು ಬಹುವಾಗಿ ಹಳಿದು ಅವನು ಅಗ್ರಪೂಜೆಗೆ ಅರ್ಹನಲ್ಲವೆಂದು ವಾದಿಸಿದನು. ಭೀಷ್ಮರು ತಮ್ಮ ನೀಲುವನ್ನು ಸಮರ್ಥಿಸಿಕೊಳ್ಳುತ್ತ "ನಾನು ಕೃಷ್ಣನ ಹೆಸರನ್ನು ಸೂಚಿಸಿದ್ದು ಅವನಲ್ಲಿ ಎರಡು ಗುಣಗಳನ್ನು ಕಂಡು—ಅವನ ವೇದವೇದಾಂಗ ವಿಜ್ಞಾನ, ಮತ್ತು ಅಭ್ಯಧಿಕವಾದ ಬಲ."

'ಪೂಜ್ಯತಾಯಾಂ ಚ ಗೋವಿಂದೇ ಹೇತೂ ದ್ವಾವಪಿ ಸಂಸ್ಥಿತೌ ।
ವೇದವೇದಾಂಗವಿಜ್ಞಾನಂ ಬಲಂ ಚಾಪ್ಯಧಿಕಂ ತಥಾ ॥'
(ಅರ್ಘಾಭ್ಯಿಹರಣಪರ್ವ, 38, 18).

ಮುಂದೆ ನಡೆದದ್ದು ಎಲ್ಲರಿಗೂ ತಿಳಿದೇ ಇದೆ. ಶಿಶುಪಾಲನು ಇತರ ಕೆಲವು ರಾಜರೊಡಗೂಡಿ ಯಾಗಕ್ಕೆ ಅಡ್ಡಿ ಮಾಡಲು ಮುಂದಾದನು. ಭೀಷ್ಮರು 'ಕೃಷ್ಣನ ಹಿರಿಮೆಯನ್ನು ಈಗಲೇ ನಿದರ್ಶನವಾಗಿ ತೋರಿಸುತ್ತೇನೆ ; ಕೃಷ್ಣನೊಡನೆ ಕಾದಾಡಿ ಗೆಲ್ಲುವಿಯಾದರೆ ನೋಡು !' ಎನ್ನಲು ಕೃಷ್ಣನಿಗೂ ಶಿಶುಪಾಲನಿಗೂ ಕಾಳಗ ನಡೆದು ಕೃಷ್ಣನು ಶಿಶುಪಾಲನನ್ನು ಕೊಂದನು. ಆದರೆ ಕೊಲ್ಲುವುದಕ್ಕೆ ಮೊದಲು, ಅವನ ಒಂದು ನೂರು ತಪ್ಪುಗಳನ್ನಾದರೂ ಕ್ಷಮಿಸುವನೆಂದು ಅವನ ತಾಯಿಗೆ ಮಾತುಕೊಟ್ಟನು. ಶಿಶುಪಾಲನ ತಾಯಿ ಕೃಷ್ಣನಿಗೆ ಸೋದರತ್ತೆ.

ಅಂತೂ ಕೃಷ್ಣನ ಹೆಗ್ಗಳಿಕೆ ಆಗಿನ ಲೋಕಕ್ಕೆಲ್ಲ ಪ್ರಕಟವಾದುದು ಹೀಗೆ. ಭೀಷ್ಮರೇ ಅವನ ವ್ಯಕ್ತಿತ್ವದ ಎರಡು ಮುಖ್ಯವಾದ ಮುಖಗಳನ್ನು ಜಗತ್ತಿಗೆ ತೋರಿಸಿಕೊಟ್ಟರು—ಆಧ್ಯಾತ್ಮಿಕ ಪ್ರೌಢಿಮೆ ಮತ್ತು ಕ್ಷಾತ್ರ ತೇಜಸ್ಸು. ಮಹಾಭಾರತದುದ್ದಕ್ಕೂ ನಾವು ಕಾಣುವುದು ಇದನ್ನೇ. ಮುಂದೆ ಆದದ್ದು ಎಲ್ಲರಿಗೂ ಗೊತ್ತು. ದುರ್ಯೋಧನನೊಂದಿಗೆ ಯುಧಿಷ್ಠಿರನು ಜೂಜಾಡಿ ರಾಜ್ಯವನ್ನು ಕಳೆದುಕೊಂಡು, ತಮ್ಮಂದಿರೊಂದಿಗೆ ದ್ರೌಪದಿಯೊಂದಿಗೆ ಕುಂತಿಯೊಂದಿಗೆ ಕಾಡಿಗೆ ಹೋಗಿರುತ್ತಾನೆ. ಕೃಷ್ಣನು ಅಲ್ಲಿಗೆ ಬರುತ್ತಾನೆ. "ಜೂಜಾಡುವುದು ತುಂಬ ತಪ್ಪು. ನಾನು ಹತ್ತಿರ ಇದ್ದಿದ್ದರೆ ನಿನ್ನನ್ನು ಜೂಜಾಡಲು ಬಿಡುತ್ತಿರಲಿಲ್ಲ ('ವಾರಯೇಯಮಹಂ ದ್ಯೂತಂ ಬಹೂನ್ ದೋಷಾನ್ ಪ್ರದರ್ಶಯನ್'). ನಾನು ದ್ವಾರಕೆಗೆ ಬಂದ ಮೇಲೆ ಯುಯುಧಾನನು ಈ ವಿಚಾರವನ್ನು ತಿಳಿಸಿದ. ಒಡನೆಯೇ ಇಲ್ಲಿಗೆ ಬಂದೆ. ಈಗ ನಾನೇನು ಮಾಡಬಲ್ಲೆ ? ಕೆರೆಯ ಕಟ್ಟೆಯೊಡೆದ ಮೇಲೆ ನೀರನ್ನು ನಿಲ್ಲಿಸುವುದು ಹೇಗೆ ? ('ಅದ್ಯಾಹಂ

ಕಿಂ ಕರಿಷ್ಯಾಮಿ ಭಿನ್ನಸೇತುರಿವೋದಕಂ')" ಇದು ಕೃಷ್ಣನ ಮಾತು (ವನಪರ್ವ, 22, 43).

ಆದರೆ ಇಲ್ಲಿಂದ ಮುಂದೆ ಮಹಾಭಾರತದ ಕಥೆಯಲ್ಲಿ ಕೃಷ್ಣನ ಪಾತ್ರ ಹೆಚ್ಚುತ್ತ ಹೋಗುತ್ತದೆ. ಪಾಂಡವರು ಧರ್ಮಾತ್ಮರೆಂಬುದನ್ನೂ ಕೌರವರು ಅಧರ್ಮಿಗಳೆಂಬುದನ್ನೂ ಮನವರಿಕೆ ಮಾಡಿಕೊಂಡು, ಧರ್ಮ ಸಂಸ್ಥಾಪನೆಗಾಗಿ ಪಾಂಡವರ ಪಕ್ಷವನ್ನು ಹಿಡಿಯುತ್ತಾನೆ. ಮುಂದೆ ಎಲ್ಲ ಪ್ರಸಂಗಗಳಲ್ಲೂ ಅವನ ನಡವಳಿಕೆ, ಉಪದೇಶಗಳೆಲ್ಲವೂ ಲೋಕೋತ್ತರ ವಾದವು, ಆದರೆ ಲೋಕಾತೀತವೆನ್ನಲಾಗದು. ಇದನ್ನು ಉದ್ಯೋಗ ಪರ್ವದಲ್ಲಿ ಚೆನ್ನಾಗಿ ಕಾಣಬಹುದು.

(5) ಪುರಾಣದಲ್ಲಿ ಪರಿವರ್ತನೆ

ಈಗ ಇದೊಂದು ಸೋಜಿಗದ ಸಂಗತಿಯನ್ನು ಗಮನಿಸಬೇಕು. ನಮ್ಮ ದೇಶದಲ್ಲಿ ಇಂದು ಪೂಜೆಗೊಳ್ಳುತ್ತಿರುವ ದೇವತೆಗಳಲ್ಲಿ ತುಂಬ ಜನಪ್ರಿಯನೆಂದರೆ ಕೃಷ್ಣನೇ. ಆದರೆ ಜನರಿಗೆ ಅವನ ವಿಚಾರವಾಗಿ ಇರುವಷ್ಟು ದುರಭಿಪ್ರಾಯ ಬೇರೆ ಯಾವ ದೇವತೆಯ ವಿಚಾರವಾಗಿಯೂ ಇರದು ! ವ್ಯವಹಾರದಲ್ಲಿ ರಾಮನೆಂದರೆ ಸಾಚಾ, ಕೃಷ್ಣನೆಂದರೆ ಕಳುವು, ಸುಳ್ಳು, ಕಪಟ, ಲಂಪಟತನ, ಇವುಗಳಿಗೆ ಪ್ರತೀಕವೇ. ರಾಮನೆಂದರೆ ನ್ಯಾಯ, ಕೃಷ್ಣನೆಂದರೆ ಮೋಸ. ಲೆಕ್ಕಗಳಲ್ಲಿ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಎಂದಿಲ್ಲವೆ ? ಕೃಷ್ಣನೆನ್ನುವ ಮಾತಿಗೆ ಕಪ್ಪೆಂಬ ಅರ್ಥವನ್ನೇ ಎತ್ತಿ ಕಾಣಿಸುವುದೂ ಉಂಟು. ಹೀಗೇಕೆ ವಿರಸವಾಯಿತು ? ಯಾರಿಗಾದರೂ ಇದು ತೊಡಕೆಂದು ತೋರದಿರದು.

ಭಗವದ್ಗೀತೆಯಲ್ಲಿ ಕೃಷ್ಣ ಉದಾತ್ತವಾದ ಆದರ್ಶವನ್ನು ಜನರೆದುರು ಇರಿಸಿದ್ದಾನೆ ; ಧರ್ಮಸಂಸ್ಥಾಪನೆಯ ಉದ್ದೇಶವನ್ನೇ ಕಾಣಿಸಿದ್ದಾನೆ. ಸಂಯಮ, ಸದಾಚಾರ, ತ್ಯಾಗ, ಆರ್ಜವ, ದೈವೀಸಂಪತ್ತು ಇವುಗಳ ಅಗತ್ಯವನ್ನೂ ಸ್ವಾರಸ್ಯವನ್ನೂ ವಿವರಿಸಿದ್ದಾನೆ. ಆದರೆ ತಾನು ತನ್ನ ಬದುಕಿನಲ್ಲಿ ಇದ್ದುದು ಹೇಗೆ ? ಮಾಡಿದ್ದು ಏನು ? ಎಳೆತನದಲ್ಲಿ ಕಳ್ಳತನ ಮಾಡಲಿಲ್ಲವೆ ? ಹರೆಯದಲ್ಲಿ ಹಾದರ ಮಾಡಲಿಲ್ಲವೆ ? ನೂರಾರು ಹೆಂಗಳೆಯರನ್ನು ಕೆಡಿಸಲಿಲ್ಲವೆ? ಹತ್ತಾರು ಓರಗೆಯವರನ್ನೂ ಹಿರಿಯರನ್ನೂ ಕೊಂದನಲ್ಲವೆ ? ಪಾಂಡವರ ಹಿತವನ್ನೆಣಿಸಿ ಮೋಸವನ್ನೇ ಬೆಳೆಸಲಿಲ್ಲವೆ ? ಕಪಟನಾಟಕ ಸೂತ್ರಧಾರಿಯೆಂಬ ಹೆಸರು ಸರಿಯಾದುದಲ್ಲವೆ? ಮನುಷ್ಯರಲ್ಲಿ ಹೀಗೆ ಕೀಳಾಗಿದ್ದವನು ದೇವರಾಗಿ ಮಾನ್ಯತೆ ಪಡೆದದ್ದು ಹೇಗೆ? ಅಥವಾ ದೇವರು ಮನುಷ್ಯನಾಗಿ ಹುಟ್ಟಿ ಹೀಗೆ ದುಷ್ಟತನವನ್ನು ಮೆರೆಯಬಹುದೆ ?

ಕೃಷ್ಣಭಕ್ತರೇನೋ ಈ ಕೆಟ್ಟತನಗಳಿಗೆಲ್ಲ ಸಮಾಧಾನವನ್ನು ಕೊಡಲು ಯತ್ನಿಸಿದ್ದಾರೆ ; ಆದರಲ್ಲೆಲ್ಲ ಸಾಂಕೇತಿಕವಾದ ತಾತ್ಪರ್ಯವನ್ನು ಮೂಡಿ

ಸಲು ಹೆಣಗಾಡಿದ್ದಾರೆ. ಆದರೆ ಕೃಷ್ಣನಲ್ಲಿ ಕೆಟ್ಟತನವನ್ನು ಆರೋಪ ಮಾಡಲು ತೊಡಗಿದವರು ಯಾರೆಂಬುದನ್ನು ವಿವೇಚಿಸಬೇಡವೆ ? ಮೊದ ಲಿಂದ ಕೃಷ್ಣನ ಕಲ್ಪನೆ ಹೀಗೆಯೇ ಇದ್ದಿತೆ ? ವೈದಿಕಯುಗದಲ್ಲಿ ಅವನು ಋಷಿ ; ಉಪನಿಷತ್ತಿನ ಕಾಲದಲ್ಲಿ ಋಷಿಯ ಶಿಷ್ಯ, ಗುರುವಿನ ಉಪದೇಶ ದಿಂದ ಕೃತಾರ್ಥನಾದವನು. ಮಹಾಭಾರತದಲ್ಲಿ ಭೀಷ್ಮರೇ ಅವನನ್ನು ವೇದವೇದಾಂಗಗಳನ್ನು ತಿಳಿದವವನು, ಧರ್ಮಾತ್ಮನೆಂದು ಹೊಗಳಿದ್ದಾರೆ. ಭಗವದ್ಗೀತೆಯಲ್ಲಿ ಎದ್ದು ಕಾಣುವುದು ಮಾನವಕಲ್ಯಾಣದ ಹಿತವೇ. ಬೌದ್ಧ ವಾಙ್ಮಯದಲ್ಲಿ ಅವನು ಮಹಾಪುರುಷ, ಜೈನರಿಗೆ ಶಲಾಕಾಪುರುಷ ರಲ್ಲಿ ಒಬ್ಬ. ಹೀಗಿದ್ದೂ ಅವನಲ್ಲಿ ಅಸಭ್ಯಪ್ರವೃತ್ತಿಗಳ ಮೇಲಾಟವನ್ನು ಮೂಡಿಸಿದವರು ಯಾರು ? ಯಾವ ಕಾಲದಲ್ಲಿ ?

ಇದಕ್ಕೆ ಉತ್ತರವನ್ನು ಕೂಡ ಎಲ್ಲರೂ ಬಲ್ಲರು. ಭಾಗವತ, ಹರಿವಂಶ, ಪುರಾಣಗಳನ್ನು ಬರೆದವರೇ ಕೃಷ್ಣನ ವಿಚಾರವಾಗಿ ಜನರಲ್ಲಿ ಅನುಚಿತವಾದ ಭಾವನೆಗಳು ಬೆಳೆಯುವಂತೆ ಮಾಡಿದರು. ಈ ಗ್ರಂಥ ಗಳನ್ನು ಓದಿದವರಿಗೆಲ್ಲ ಇದು ಮನದಟ್ಟಾಗುತ್ತದೆ. ಆದರೆ ಹೀಗೆ ಬರೆಯಲು ಪೌರಾಣಿಕರಿಗೆ ಇದ್ದ ಆಧಾರವಾದರೂ ಏನು ? ಪುರಾಣಗಳು ಜಾನಪದನೆಲೆಯ ರಚನೆಗಳು. ಸಂಸ್ಕೃತ ಭಾಷೆಯಲ್ಲಿದ್ದ ಮಾತ್ರಕ್ಕೆ ಅವುಗಳ ಬಣ್ಣವೇನು ಬದಲಾಯಿಸುವುದಿಲ್ಲ. ಜಾನಪದವೀರನಿಗೆ ಸರಿಹೊಂದುವ ಗುಣಗಳನ್ನೇ ಕೃಷ್ಣನಿಗೆ ಕಲ್ಪಿಸಿಕೊಂಡಿದ್ದಾರೆ, ಅಷ್ಟೆ. ಜಾನಪದ ಗಾಹೆ ಗಳಲ್ಲಿ ವೀರ, ಶೃಂಗಾರ, ಅದ್ಭುತ ರಸಗಳದ್ದೇ ಹೆಚ್ಚಳ ; ಕಾಮಕೇಳಿ ಯಾಗಲಿ ಕಪಟವಾಗಲಿ ಅಲ್ಲಿ ಅನುಚಿತವಲ್ಲ. ಇದಕ್ಕೆ ಚೌಕಟ್ಟು ಸರಿಯಾಗಿರ ಲೆಂದೇ ಕೃಷ್ಣನನ್ನು ಮೊದಲೇ ಗೊಲ್ಲನೆಂದೂ, ವ್ರಜವಾಸಿಯೆಂದೂ, ಗೋಗೋಪಗೋಪೀಜನ ಮಧ್ಯವರ್ತಿಯೆಂದೂ ಬಣ್ಣಿಸಿಬಿಟ್ಟರು ! ವೃಷ್ಣಿ ವಂಶದ ಅರಸುಗುವರ ಗೊಲ್ಲನಾದದ್ದು ಹೇಗೆಂದು ಯಾರೂ ಪ್ರಶ್ನಿಸಲಿಲ್ಲ. ಅವನ ಬಾಲಲೀಲೆಗಳಿಗೆ (ಎಂದರೆ ಎಳೆತನದ ಪುಂಡಾಟಗಳಿಗೆ) ಆಧಾರ ಪುರಾಣಗಳನ್ನು ಬಿಟ್ಟು ಬೇರೆ ಎಲ್ಲಿದೆಯೆಂದು ಯಾರೂ ಕೇಳಲಿಲ್ಲ. ಗರ್ಗಾ ಚಾರ್ಯರಿಂದ ದೀಕ್ಷೆ ಪಡೆದು, ಕಾಶಿಯಲ್ಲಿ ಸಾಂದೀಪಿನೀ ಋಷಿಗಳಲ್ಲಿ ಶಿಷ್ಯವೃತ್ತಿ ಮಾಡಿದವನು ಹಲವಾರು ಹೆಂಗಳೆಯರ ಬೆನ್ನಟ್ಟಿ ಅವರನ್ನು ಬವಣೆಪಡಿಸಿದುದು ಏಕೆಂಬುದು ಯಾರಿಗೂ ಗೊಂದಲಕ್ಕೆ ಕಾರಣ ವಾಗಲಿಲ್ಲ.

ಭಾರತದಲ್ಲಿಲ್ಲದ ಗೋಪಿಯರು ವಿಷ್ಣುಪುರಾಣದಲ್ಲಿ ಹೇಗೆ ಕಾಣಿಸಿಕೊಂಡರೋ ! ವಿಷ್ಣುಪುರಾಣದಲ್ಲಿ ಗೋಪಿಯರೊಂದಿಗೆ ಹಲ್ಲೀಷವೆಂಬ ಜಾನಪದ ಕ್ರೀಡೆಯಲ್ಲಿ ಪಾಲ್ಗೊಂಡ ಕೃಷ್ಣ ಹರಿವಂಶದಲ್ಲಿ ಕಾಮುಕನಾಗಿ ರತಿಕೇಳಿಯಲ್ಲಿ ತೊಡಗಿದ ; ಇದೇ ಕೃಷ್ಣನ ಚೆಲ್ಲಾಟ ಭಾಗವತದ ದಶಮ ಸ್ಕಂಧದಲ್ಲಿ ಐದು ಅಧ್ಯಾಯಗಳಿಗೆ ಸಾಮಗ್ರಿಯಾಯಿತು (ರಾಸಪಂಚಾಧ್ಯಾಯ). ಇಲ್ಲೆಲ್ಲೂ ಕಂಡರಿಯದ ರಾಧೆ ಇದ್ದಕ್ಕಿದ್ದಂತೆ ಬ್ರಹ್ಮವೈವರ್ತಪುರಾಣದಲ್ಲಿ ಕೃಷ್ಣನಿಗೆ ಗಂಟುಬಿದ್ದಳು. ವಿಷ್ಣುಪುರಾಣದ ಒಕ್ಕಣೆ, ಕೃಷ್ಣನಿಗೆ ಹೆಂಡಂದಿರು ಹದಿನಾರುಸಾವಿರದ ಏಳು ಮಂದಿಯೆಂದು ; ಮಕ್ಕಳು ಒಂದು ಲಕ್ಷ ಎಂಬತ್ತುಸಾವಿರ ಮಂದಿಯಂತೆ ! ಮಹಾಭಾರತದಲ್ಲಿ ಹೇಳಿರುವ ಅಷ್ಟಮಹಿಷಿಯರನ್ನು ಪರೀಕ್ಷೆಗೆ ಒಳಪಡಿಸಿದರೆ, ಗಟ್ಟಿಯಾಗಿ ಉಳಿಯುವವಳು ರುಕ್ಮಿಣಿಯೊಬ್ಬಳೇ ಹೆಂಡತಿ ; ಉಳಿದವರೆಲ್ಲ ಗಾಳಿಮಾತಾಗಿ ಹಾರಿಹೋಗುತ್ತಾರೆ. ಹೀಗಿದ್ದರೂ ಜನರ ಕಲ್ಪನೆಯಲ್ಲೇನೋ ಕೃಷ್ಣನ ಕಾಮುಕತೆ, ಬಹುಪತ್ನೀತ್ವಗಳು ಅಚ್ಚಳಿಯದೆ ಉಳಿದುಕೊಂಡಿವೆ ! ಅಮರಕೋಶವನ್ನೋದುವವರು ಕೃಷ್ಣನ ವಿಚಾರವಾಗಿ ಹೇಳುವಾಗ ಗೋಪಿಯರ ಪ್ರಸ್ತಾಪವಿಲ್ಲದಿರುವುದನ್ನು ಗಮನಿಸುವುದಿಲ್ಲ. ವಿಷ್ಣುಸಹಸ್ರನಾಮವನ್ನು ಪಾರಾಯಣಮಾಡುವವರು ವಾಸುದೇವನ ಹೆಸರು ಹಲವು ಬಾರಿ ಬಂದರೂ ಗೋಪಿಯರ ಸಂಬಂಧವಾಗಲೀ ರಾಧೆಯ ಉಲ್ಲೇಖವಾಗಲೀ ಅಲ್ಲಿ ಇಲ್ಲವೆಂಬುದನ್ನು ಮನಸ್ಸಿಗೆ ತಂದುಕೊಳ್ಳುವುದಿಲ್ಲ. ನಮ್ಮ ಆಧ್ಯಾತ್ಮಿಕಸಂಪತ್ತಿಗೆ ಪುರಾಣಗಳ ಕೊಡುಗೆ ಇದು ! ಇತಿಹಾಸವನ್ನಾದರೂ ಬಿಟ್ಟೇವು, ಪುರಾಣವನ್ನು ಬಿಡಲಾರೆವು !

ಪುರಾಣಗಳಲ್ಲಿ ಇರುವುದೆಲ್ಲ ಬುಡವಿಲ್ಲದ ಪೊಳ್ಳುಹರಟೆ ಎಂದು ನಾನು ಹೇಳುತ್ತಿಲ್ಲ. ಅವುಗಳಲ್ಲಿ ಸ್ವಾರಸ್ಯವಾದ, ಗಂಭೀರವಾದ, ಉದಾತ್ತವಾದ ವಿವರಗಳೆಷ್ಟೋ ಇವೆ. ಆದರೆ ಜನರು ಇವುಗಳನ್ನು ಕಡೆಗಣಿಸಿ ಮನುಷ್ಯಸಹಜವಾದ ಚಾಪಲ್ಯಕ್ಕೆ ರೂಪುಕೊಡುವಂಥ ಭಾಗಗಳನ್ನಷ್ಟೆ ಗ್ರಹಿಸಿ ಉಳಿಸಿಕೊಳ್ಳುತ್ತಾರೆ. ನಿದರ್ಶನಕ್ಕೆ, ಭಾಗವತದಲ್ಲಿ (11,12) ಬರುವ ಕೃಷ್ಣನ ದಿಟವಾದ ಸ್ವರೂಪದ ವರ್ಣನೆ ಎಷ್ಟು ಸೊಗಸಾಗಿದೆ, ನೋಡಿ–

"ಅವನಿಗೆ ಭೂಮಿಯೇ ಪಾದಗಳು, ದ್ಯುಲೋಕವೇ ತಲೆ, ಅಂತರಿಕ್ಷವೇ ಹೊಕ್ಕುಳು, ಸೂರ್ಯನೇ ಕಣ್ಣುಗಳು, ಗಾಳಿಯೇ ಮೂಗು, ದಿಕ್ಕುಗಳೇ ಕಿವಿಗಳು... ಲೋಕಪಾಲಕರೇ ಅವನ ತೋಳುಗಳು,

ಚಂದ್ರನೇ ಮನಸ್ಸು, ಯಮುನೇ ಹುಬ್ಬುಗಳು ನಾಚಿಕೆಯೆನ್ನುವುದು ಅವನ ಮೇಲ್ದುಟಿ, ಆಸೆಯೆನ್ನುವುದು ಕೆಳದುಟಿ ; ಬೆಳದಿಂಗಳು ಅವನ ಹಲ್ಲುಗಳು ; ಮಾಯೆ ಅವನ ಮುಗುಳ್ನಗೆ. ಗಿಡಮರಗಳೆಲ್ಲ ಅವನ ಮೈಗೂದಲುಗಳು, ಮೋಡಗಳು ಅವನ ತಲೆಗೂದಲು, ಲೋಕವ್ಯವಸ್ಥೆಯಂತೆ ಅವನ ಪುರುಷಾಕೃತಿ. ತನ್ನ ಬೆಳಕನ್ನೇ ಎದೆಯ ಮೇಲೆ ಕೌಸ್ತುಭದಂತೆ ಧರಿಸಿದ್ದಾನೆ ; ಅದರಿಂದ ನಾಲ್ಕೂ ಕಡೆ ಪಸರಿಸಿದ ಕಿರಣಗಳೇ ಶ್ರೀವತ್ಸ ; ಹಲವು ಗುಣಗಳುಳ್ಳ ತನ್ನ ಮಾಯೆಯನ್ನೇ ವನಮಾಲೆಯಂತೆ ತೊಟ್ಟಿದ್ದಾನೆ, ವೇದಗಳೇ ಅವನ ಪೀತಾಂಬರ ; ಪ್ರಣವದ ಮೂರು ಸ್ವರಗಳು ಅವನ ಜನಿವಾರದ ಮೂರು ಎಳೆಗಳು ; ಸಾಂಖ್ಯ, ಯೋಗ ಇವೆರಡೂ ಅವನ ಕಿವಿಯ ಓಲೆಗಳು ; ಅಭಯಪ್ರದವಾದ ಅವನ ಒಡೆತನವೇ ಕಿರೀಟ ; ಅವ್ಯಾಕೃತವಾದ ಮೂಲಪ್ರಕೃತಿಯೇ ಅವನ ಆಸನ ; ಧರ್ಮ, ಜ್ಞಾನ ಮೊದಲಾದ ಪ್ರಕಾರಗಳಿಂದ ಕೂಡಿದ ಶುದ್ಧಸತ್ತ್ವ ಅವನ ಪದ್ಮಪೀಠ ; ಶಾರೀರಕ ಮತ್ತು ಮಾನಸಿಕ ಸಾಮರ್ಥ್ಯಗಳನ್ನೊಳಗೊಂಡ ಮುಖ್ಯಪ್ರಾಣವೇ ಅವನು ಹಿಡಿದಿರುವ ಗದೆ. ಅಪ್ ತತ್ತ್ವ ಶಂಖ ; ತೇಜೋತತ್ತ್ವ ಚಕ್ರ."

ಭಾಗವತಪುರಾಣವನ್ನು ಓದುವವರಿಗೆ ಇಂಥ ಭಾಗಗಳು ನೆನಪಿನಲ್ಲಿ ಉಳಿಯುವುದಿಲ್ಲ ; ಕೃಷ್ಣನ ಬಾಲಲೀಲೆ, ಜಲಕ್ರೀಡೆ, ಯಮುನಾ ವಿಹಾರ, ರಾಸನೃತ್ಯ ಇಂಥವನ್ನು ಅವರು ಮರೆಯಲಾರರು ! ಇನ್ನು ರಸಿಕರಾದ ಕವಿಜನರಂತೂ ಬರಡು ಆಧ್ಯಾತ್ಮಿಕ ವಿಚಾರಗಳಲ್ಲಿ ವಿಮುಖರು; ಅವರ ಪಾಲಿಗೆ ಶೃಂಗಾರ, ಅದ್ಭುತ ರಸಗಳೇ ರಸಗಳು, ಶಾಂತಿರಸ ರಸಗಳ ಎಣಿಕೆಯಲ್ಲೊಂದು ಅಷ್ಟೆ. ಬ್ರಹ್ಮವೈವರ್ತ ಪುರಾಣದಲ್ಲಿ ಮೊಟ್ಟಮೊದಲು, ಇದ್ದಕ್ಕಿದ್ದಂತೆ ಎಲ್ಲಿಂದಲೋ ತೋರಿಕೊಂಡ ರಾಧೆ (ಆಗಲೇ ಮದುವೆಯಾಗಿದ್ದ ಗರತಿ, ಗಂಡನನ್ನು ಬಿಟ್ಟು ಕೃಷ್ಣನನ್ನು ಕೂಡಿಕೊಂಡಳೆಂದು ಕೃಷ್ಣನಿಗೆ ಪುರಾಣ ಕೊಟ್ಟಿರುವ ಉಡುಗೆರೆ !) ಜಯದೇವನ 'ಗೀತಗೋವಿಂದ' ಕಾವ್ಯಕ್ಕೆ ಪ್ರಧಾನವಾದ ಪ್ರೇರಣೆಯಾದಳು. ಗೋಲೋಕದಿಂದ ಭೂಲೋಕಕ್ಕೆ ಇಳಿದುಬಂದ ರಾಧಾ–ಕೃಷ್ಣರ ವಿರಸ, ವಿರಹ, ಪ್ರಣಯ, ಸಂಗಮ, ಕೇಳಿಗಳು ಕೃಷ್ಣಚೈತನ್ಯನಿಂದ ಮೊದಲಾದ ವೈಷ್ಣವ ಪಂಥದ ಅಡಿಗಲ್ಲುಗಳಾದುವು. ಈ ಹುಚ್ಚು ಹೊಳೆಗೆ ನಾರದಪಾಂಚರಾತ್ರವೂ ಕೂಡಿಕೊಂಡಿತು.

ಇನ್ನು ಕೇಳುವುದೇನು ? ಕೃಷ್ಣನ ಸ್ವಭಾವವೇ ಮಾರ್ಪಟ್ಟಿತು. ವೈದಿಕವಾಙ್ಮಯದಲ್ಲಿ ಋಷಿಯಾಗಿದ್ದವನು ಈಗ ರಸಿಕನಾದ, ಗೀತೆಯಲ್ಲಿ ಯೋಗೀಶ್ವರನೆಂದಾದವನು ಈಗ ಕಾಮರಾಜನಾದ, ಮಹಾಭಾರತದಲ್ಲಿ 'ವೇದವೇದಾಂಗ ವಿಜ್ಞಾನ'ಕ್ಕೆ ಎತ್ತಿದ ಕೈಯೆಂದು ಭೀಷ್ಮರಿಂದಲೇ ಹೊಗಳಿಸಿಕೊಂಡವನು ಈಗ ರತಿಸುಖನಿಪುಣನಾದ. ಮಹಾಭಾರತಕ್ಕೆ ಪೂರಕವೆಂದು ಸಿದ್ಧವಾದ ಹರಿವಂಶ ಈಗ ಮಹಾಭಾರತವನ್ನೇ ಹಿಂದಕ್ಕೆ ತಳ್ಳಿ ತಾನು ಸ್ವತಂತ್ರವಾಗಿ ಮೆರೆಯಿತು. ಭಗವದ್ಗೀತೆಯನ್ನು ದೂರ ಸರಿಸಿ ಭಾಗವತ ಪುರಾಣ ಮುಂದೆ ಬಂದಿತು. ಉಪಾಸನೆಯಲ್ಲಿ 'ಕ್ಲೀಂ' ಎನ್ನುವ ಕಾಮರಾಜಬೀಜ (ಮನ್ಮಥ ಬೀಜ) ಕೃಷ್ಣನ ಹೆಸರಿಗೆ ಸೇರಿ ಕೊಂಡು ಬಂದಿತು ('ಕ್ಲೀಂ ಕೃಷ್ಣಾಯ ನಮಃ' ಎನ್ನುವುದು ಕೃಷ್ಣ ಮಂತ್ರ).

ಪುರಾಣಗಳಲ್ಲಿ ಬರುವ ವರ್ಣನೆಯನ್ನು ನೋಡಿದರೆ ಕೃಷ್ಣನಿಗೆ ಇಬ್ಬಂದಿಯ ಪರಿಸ್ಥಿತಿ, ಇತ್ತಲಾಗಿ ಮನುಷ್ಯನೂ ಅಲ್ಲ, ಅತ್ತಲಾಗಿ ಅವತಾರವೂ ಅಲ್ಲ. ಮನುಷ್ಯರಿಗೆ ಸಹಜವಾಗಿ, ಸಾಮಾನ್ಯವಾಗಿ ಇರುವ ಪ್ರವೃತ್ತಿಗಳನ್ನು ಅವನಲ್ಲಿ ಕಾಣಲಾರೆವು ; ಅವತಾರದಲ್ಲಿರುವ ನಿರ್ಮಾನುಷ ವ್ಯವಹಾರವನ್ನೂ ಗುರುತಿಸಲಾರೆವು. ಅವತಾರಗಳ ಕಲ್ಪನೆಯೇನು ಹೊಸದಲ್ಲ. ಮತ್ಸ್ಯಾದಿ ದಶಾವತಾರಗಳೂ, ನಾರಾಯಣಾದಿ ಶತರೂಪಗಳೂ, ವಿಶ್ವಾದಿ ಸಹಸ್ರರೂಪಗಳೂ, ಪರಾದಿ ಬಹು ರೂಪಗಳೂ ಅಜಿತಾದಿ ಅನಂತರೂಪಗಳೂ ಪಾಂಚರಾತ್ರ ಸಿದ್ಧಾಂತದಲ್ಲಿ ಮೂಲಭೂತವಾದ ಪ್ರಕ್ರಿಯೆಯೇ. ಭಾಗವತಪುರಾಣದಲ್ಲಿ ಅವತಾರಗಳು ಲೆಕ್ಕವಿರದಷ್ಟೆಂದು ಹೇಳಿದೆ ; ಕೆರೆಯಿಂದ ಹೇಗೆ ಸಾವಿರಾರು ನಾಲೆಗಳನ್ನು ತೆಗೆಯಬಹುದೋ ಹಾಗೆ ಸತ್ತ್ವನಿಧಿಯಾದ ವಿಷ್ಣುವಿನ ಅವತಾರಗಳೂ ಲೆಕ್ಕವಿಲ್ಲದಷ್ಟು–

'ಅವತಾರಾಃ ಹ್ಯಸಂಖ್ಯೇಯಾ ಹರೇಃ ಸತ್ತ್ವನಿಧೇರ್ದ್ವಿಜಾಃ ।
ಯಥಾ ವಿದಾರಿಣಃ ಕುಲ್ಯಾಃ ಸರಸಃ ಸ್ಯುಃ ಸಹಸ್ರಶಃ ॥'

(ಮೊದಲ ಸ್ಕಂಧ, 3ನೆಯ ಅಧ್ಯಾಯ)

ಋಷಿಗಳು, ಮನುಗಳು, ಮನುಪುತ್ರರು, ದೇವತೆಗಳು, ಪ್ರಜಾಪತಿಗಳು ಇವರೆಲ್ಲ ಅವತಾರಗಳೆಂದೇ ಇಲ್ಲಿ ಬಂದಿರುವ ಮಾತು.

ಹೀಗೆ ಹೇಳುವ ಮೊದಲು, ಭಾಗವತವು ಇಪ್ಪತ್ತೆರಡು ಅವತಾರಗಳನ್ನು ಪ್ರಧಾನವೆಂದು ಹೇಳಿದೆ. ಬ್ರಹ್ಮ, ವರಾಹ, ನಾರದ, ನರ

ನಾರಾಯಣರು, ಕಪಿಲ, ದತ್ತಾತ್ರೇಯ, ಯಜ್ಞ, ವೃಷಭ, ಪೃಥು, ಮತ್ಸ್ಯ, ಕೂರ್ಮ, ಧನ್ವಂತರಿ, ಮೋಹಿನಿ, ನೃಸಿಂಹ, ವಾಮನ, ಪರಶುರಾಮ, ವೇದವ್ಯಾಸ, ರಾಮ, ರಾಮಕೃಷ್ಣರು (ಎಂದರೆ ಬಲರಾಮ, ಕೃಷ್ಣ), ಬುದ್ಧ, ಕಲ್ಕಿ. ಮಹಾಭಾರತವು ವಿಷ್ಣುವಿನ ದಶಾವತಾರಗಳನ್ನು ಮಾತ್ರ ಹೇಳುವುದೆಂಬುದನ್ನು ಗಮನಿಸಬೇಕು (ಶಾಂತಿಪರ್ವ, ಮೋಕ್ಷಧರ್ಮಪರ್ವ, 339,77–106). ಇಲ್ಲಿ ಕೃಷ್ಣಾವತಾರವನ್ನು ಹೇಳುವಾಗ, ಅರ್ಜುನನು ಕೃಷ್ಣನಿಗೆ ಧರ್ಮಸಂಸ್ಥಾಪನ ಕಾರ್ಯದಲ್ಲಿ ನೆರವಾಗಿ, ಇಬ್ಬರೂ ಲೋಕದಲ್ಲಿ ನರ–ನಾರಾಯಣರೆಂಬ ಋಷಿಗಳೆಂದು ಪ್ರಸಿದ್ಧರಾಗುವರೆಂದು ಸೂಚನೆಯಿದೆ (ಶ್ಲೋಕ 100)—

'ಏವಂ ಲೋಕಾ ವದಿಷ್ಯಂತಿ ನರನಾರಾಯಣಾವೃಷೀ ।
ಉದ್ಯುಕ್ತೌ ದಹತಃ ಕ್ಷತ್ರಂ ಲೋಕಕಾರ್ಯಾರ್ಥಮೀಶ್ವರೌ ॥'

ಭಾಗವತ ಪುರಾಣವು ನರನಾರಾಯಣರನ್ನು ಸೇರಿಸಿ ಐದನೆಯ ಅವತಾರವೆಂದು ಎಣಿಸಿದೆ. ಇವರು ಘೋರವಾದ ತಪಸ್ಸನ್ನಾಚರಿಸಿದರೆಂದೂ ಮಾತಿದೆ ('ಭೂತ್ವಾತ್ಮೋಪಶಮೋಪೇತಂ ಅಕರೋದ್ದುಶ್ಚರಂ ತಪಃ'). ಮತ್ತೆ ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಅವತಾರಗಳಾಗಿ ರಾಮ–ಕೃಷ್ಣರೆಂದು ಕೂಡಿಸಿ, ಭೂಭಾರಹರಣ ಮಾಡಿದರೆಂದು ಬಲರಾಮನನ್ನೂ ಕೃಷ್ಣನನ್ನೂ ಎಣಿಸಿದೆ–

'ಏಕೋನವಿಂಶೇ ವಿಂಶತಿತಮೇ ವೃಷ್ಣಿಷು ಪ್ರಾಪ್ಯ ಜನ್ಮನೀ ।
ರಾಮಕೃಷ್ಣಾವಿತಿ ಭುವೋ ಭಗವಾನಹರತ್ ಭರಂ ॥'

ಇದು ದ್ವಾಪರಯುಗದ ಕೊನೆಯಲ್ಲಿ, ಕಲಿಯುಗ ಮೊದಲಾಗುವ ಮುಂಚೆ. ಮಹಾಭಾರತದಲ್ಲಿ ಅವತಾರಗಳನ್ನು ಹೇಳುವ ಮೊದಲು ಮೂವರು ರಾಮರನ್ನು ('ರಾಮೋ ರಾಮಶ್ಚ ರಾಮಶ್ಚ'), ಎಂದರೆ ಭಾರ್ಗವರಾಮ (ಪರಶುರಾಮ), ದಾಶರಥಿರಾಮ, ಬಲರಾಮ ಇವರನ್ನು ಎಣಿಸಿದೆ (ಶಾಂತಿಪರ್ವ, ಮೋಕ್ಷಧರ್ಮಪರ್ವ, 339,77). ಆದರೆ ವರ್ಣನೆಯಲ್ಲಿ ಬಲರಾಮನ ಪ್ರಸ್ತಾಪವಿಲ್ಲ. ದಶಾವತಾರದ ವರ್ಣನೆ ಮುಗಿದ ಮೇಲೆ ಬರುವ ಶ್ಲೋಕವೊಂದರಲ್ಲಿ (104) 'ರಾಮೋ ದಾಶರಥಿಶ್ಚೈವ ಸಾತ್ತ್ವತಃ ಕಲ್ಕಿರೇವ ಚ' ಎಂದು ಹೇಳಿ ಬಲರಾಮನನ್ನು ಕೈಬಿಟ್ಟಿದ್ದಾರೆ. ಹತ್ತರ ಸಂಖ್ಯೆಯನ್ನು ಪೂರ್ಣ ಮಾಡಲು ಮತ್ಸ್ಯಾವತಾರಕ್ಕೆ ಮೊದಲು 'ಹಂಸ' ಎಂದು ಎಣಿಸಿದ್ದಾರೆ. ಎಂದರೆ ಕೃಷ್ಣನಲ್ಲೇ ಬಲರಾಮನೂ ಅಂತರ್ಗತನೆಂದು ಅಭಿಪ್ರಾಯವೋ ? ಭಾಗವತವು 'ರಾಮಕೃಷ್ಣೌ' ಎಂದು

ಇಬ್ಬರನ್ನೂ ಸೇರಿಸಿಯೇ ಹೇಳಿದೆ; ಮಹಾಭಾರತದಲ್ಲೂ ಬಹುವೇಳೆ 'ರಾಮಕೃಷ್ಣ'ರೆಂಬ ಜೋಡಿ ಪ್ರಸ್ತಾಪವೇ ಇದೆ.

ಭಾಗವತದಲ್ಲಿ (1,3) ಹಲವಾರು ಅವತಾರಗಳನ್ನು ಹೇಳಿ ಇವೆಲ್ಲವೂ ಅಂಶಾವತಾರವೆಂದೂ ಕೃಷ್ಣನು ಮಾತ್ರ ಪೂರ್ಣಾವತಾರವೆಂದೂ ಒಕ್ಕಣೆಯಿದೆ('ಏತೇ ಚಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ ಸ್ವಯಂ'). ಎಂದರೆ ಕೃಷ್ಣನೊಬ್ಬನು ದೇವರು, ಉಳಿದ ಅವತಾರಗಳೆಲ್ಲ ಮನುಷ್ಯರೇ. ಭಾಗವತವು ಮೊದಲು ಉಲ್ಲೇಖಮಾಡಿದ ವೃಷ್ಣಿವಂಶದ ರಾಮ–ಕೃಷ್ಣರು ಕೂಡ ಮನುಷ್ಯರೇ ಎಂದಾಯಿತು; ಅಥವಾ ಅಂಶಾವತಾರಗಳು. 'ಭಗವಾನ್–ಕೃಷ್ಣ'ನನ್ನು ವಾರ್ಷ್ಣೇಯ–ಕೃಷ್ಣನಿಂದ (ವೃಷ್ಣಿವಂಶದ, ರಾಮನ ಸೋದರನಾದ ಕೃಷ್ಣನಿಂದ) ಬೇರ್ಪಡಿಸಿ ಹೇಳಿರುವುದನ್ನು ಗಮನಿಸಬೇಕು.

ಆದರೆ ವಾಸುದೇವ–ಕೃಷ್ಣನ ಚರಿತ್ರೆಯನ್ನು ಹೇಳುವಾಗ ಅಂಶಾವತಾರಕ್ಕೂ ಭಗವಾನನಿಗೂ ನಡುವೆ ಗೊಂದಲಮಾಡಿದ್ದಾರೆ; ರಾಮ–ಕೃಷ್ಣರಲ್ಲಿ ಒಬ್ಬನಾದ ಕೃಷ್ಣನು ಬೇರೆ, ಭಗವಾನ್ ಕೃಷ್ಣನು ಬೇರೆ ಎಂಬ ಒಕ್ಕಣೆಯನ್ನು ಮರೆತಿದ್ದಾರೆ. ಅದಿರಲಿ, ಸ್ವಾರಸ್ಯವಾದ ಮಾತೆಂದರೆ, ಬಲರಾಮ–ಕೃಷ್ಣರನ್ನು ಒಟ್ಟಿಗೆ ರಾಮಕೃಷ್ಣರೆಂದು ಪರಿಗಣನೆ ಮಾಡಿರುವುದು; ಅರ್ಜುನನನ್ನೂ ಕೃಷ್ಣನನ್ನೂ ಒಟ್ಟಿಗೆ ನರನಾರಾಯಣರೆಂದು ಪರಿಗಣನೆ ಮಾಡಿರುವುದು. ಸಂಕರ್ಷಣ–ವಾಸುದೇವರನ್ನು ಕೂಡಿಸಿರುವುದು ಪತಂಜಲಿಯ ಕಾಲದಿಂದ, ಎಂದರೆ ಪುರಾಣಕಾಲಕ್ಕಿಂತ ತುಂಬ ಹಿಂದೆಯೇ, ಬಳಕೆಯಲ್ಲಿದೆ; ಅರ್ಜುನನನ್ನೂ ವಾಸುದೇವನನ್ನೂ ಕೂಡಿಸಿರುವುದು ಇನ್ನೂ ಹಿಂದೆ, ಪಾಣಿನಿಯ ಕಾಲದಲ್ಲೇ, ಕಾಣಿಸುತ್ತದೆ. ಇದನ್ನು ಈಗಾಗಲೇ ಪ್ರಸ್ತಾಪಿಸಿದ್ದೇವೆ. ಮೊದಲಿಬ್ಬರು ವೃಷ್ಣಿವಂಶ ವೀರರು; ಇನ್ನಿಬ್ಬರು ಪೂಜಾರ್ಹರಾದ ಗೋತ್ರಕ್ಷತ್ರಿಯರು. ಈ ಎರಡು ಜೋಡಿಗಳಲ್ಲಿ ಸಾಮಾನ್ಯನಾದವನು ವಾಸುದೇವ. ಅವನು ಸಂಕರ್ಷಣನೊಂದಿಗೆ ವೀರನೂ ಹೌದು, ಅರ್ಜುನ (ನರ) ನೊಂದಿಗೆ ಋಷಿಯೂ ಹೌದು. ಯುಧಿಷ್ಠಿರನ ರಾಜಸೂಯಯಾಗದ ಸಂದರ್ಭದಲ್ಲಿ ಅರ್ಘ್ಯಾಭಿಹರಣಕ್ಕೆ ಕೃಷ್ಣನು ತಕ್ಕವನೆಂದು ಭೀಷ್ಮರು ಸೂಚಿಸುವಾಗ ವಾಸುದೇವನ ಈ ಎರಡು ಹಿರಿಮೆಗಳನ್ನು ಎಣಿಸಿರುವುದನ್ನು ನೆನಪಿಗೆ ತಂದುಕೊಳ್ಳಬೇಕು.

ಸಂಕರ್ಷಣ–ವಾಸುದೇವರು ವ್ಯೂಹಮೂರ್ತಿಗಳೆಂದಾದರು ; ನರ–ನಾರಾಯಣರು ಅವತಾರಗಳೆಂದಾದರು. ವ್ಯೂಹವೆನ್ನುವ ಕಲ್ಪನೆ ಅವತಾರ ಕಲ್ಪನೆಗಿಂತ ಪ್ರಾಚೀನವಾದುದು. ಆದರೆ ಎರಡಕ್ಕೂ ಪುರಾಣಪ್ರಶಸ್ತಿಯುಂಟು, ಪಾಂಚರಾತ್ರ, ಭಾಗವತ ಪ್ರಶಸ್ತಿಯುಂಟು. ವ್ಯೂಹ ಬಹುಮಟ್ಟಿಗೆ ತಾತ್ತ್ವಿಕ ಚೌಕಟ್ಟಿನ ಕಲ್ಪನೆ ; ಅವತಾರವಾದರೋ ಹೆಚ್ಚೂ ಕಡಮೆ ಐತಿಹಾಸಿಕ ನೆಲೆಯದು. ಮಹಾಭಾರತದಲ್ಲಿ ಮೇಲೆ ಹೇಳಿದ ದಶಾವತಾರ ವರ್ಣನೆಯ ಸಂದರ್ಭದಲ್ಲಿ ಕೃಷ್ಣನು ತನ್ನನ್ನು 'ಚತುರ್ಮೂರ್ತಿಧರೋ ಹ್ಯಹಂ' (ಶ್ಲೋಕ 102) ಎಂದು ಹೇಳಿಕೊಂಡಿದ್ದಾನೆ. ಇಲ್ಲಿ ನಾಲ್ಕು ಮೂರ್ತಿಗಳೆಂದರೆ ವ್ಯೂಹಗಳೇ (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ).' ಇವರಲ್ಲಿ ವಾಸುದೇವನು ಭಗವಂತನ 'ಪರಾ' ಸ್ಥಿತಿಯ ಸಂಕೇತ; ಸಂಕರ್ಷಣ ಪ್ರಕೃತಿಯ ಸಂಕೇತ; ಪ್ರದ್ಯುಮ್ನ ಮನಸ್ಸಿನ ಪ್ರತೀಕ ; ಅನಿರುದ್ಧ ಅಹಂಕಾರದ (ಎಂದರೆ ನಾನೆಂಬ ಭಾವನೆಯ) ಪ್ರತೀಕ. ಆದರೆ ಈ ನಾಲ್ವರೂ ವೃಷ್ಣಿವಂಶದ ವೀರರೆಂದು ಮೊದಲೇ ಬಂದಿತಷ್ಟೆ. ಸಾತ್ತ್ವತವಿಧಿ ರೂಪುಗೊಂಡಾಗ ಈ ವೀರರಿಗೆ ತತ್ತ್ವ ಸಂದರ್ಭ ಒದಗಿಬಂದಿತು. ಶುದ್ಧಸೃಷ್ಟಿಯಲ್ಲಿ ಷಾಡ್ಗುಣ್ಯಪ್ರಾದುರ್ಭಾವ (ಎಂದರೆ ಆರು ಗುಣಗಳು ತೋರಿಕೊಳ್ಳುವುದು) ಮುಖ್ಯವಾದ ವಿವರ. ಆರು ಗುಣಗಳು ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ ಮತ್ತು ತೇಜಸ್ಸು. ಪೂರ್ಣಷಾಡ್ಗುಣ್ಯವಿಗ್ರಹನಾದವನು ಭಗವಂತ ; ಪರವಾಸುದೇವ. ಅವನಿಂದ ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾ ಎಂಬ ಪ್ರಕಾರಗಳು ಹೊರಹೊಮ್ಮುತ್ತವೆ. ಅವತಾರಗಳನ್ನು ವಿಭವವೆಂಬ ಪ್ರಕಾರದಲ್ಲಿ ಸೇರಿಸುತ್ತಾರೆ. ಈ ನೆಲೆಯಲ್ಲಿಯೇ ಪಾಂಚರಾತ್ರಸಂಹಿತೆಯು ಮೂವತ್ತೊಂಬತ್ತು ಅವತಾರಗಳನ್ನು ಹೇಳಿರುವುದು.

ವ್ಯೂಹದ ಕಲ್ಪನೆ ಲೋಕಾತೀತವಾದುದು ; ವಿಶ್ವವ್ಯವಸ್ಥೆಯ ಹಿನ್ನೆಲೆಯಲ್ಲಿರುವಂಥವು. ಆದರೆ ವಿಭವದ ಕಲ್ಪನೆಯಲ್ಲಿ ಮನುಷ್ಯರೂ ಅವರ ವ್ಯವಹಾರವೂ ಸೇರಿಬರುತ್ತದೆ. 'ಅವತಾರ'ವೆಂದರೆ ಕೆಳಗಿಳಿದುಬರುವುದು ; ಭಗವಂತನು ತನ್ನ 'ಪರಾ' ಅವಸ್ಥೆಯಿಂದ ವ್ಯೂಹದ ಸ್ಥಿತಿಗೆ ಬರುವುದು ತನ್ನ ಇಚ್ಛಾಶಕ್ತಿಯಿಂದ, ಭೂತಿಶಕ್ತಿಯಿಂದ. ಆದರೆ 'ಅವತಾರ' ಮನುಷ್ಯರ ನೆಲೆಗೆ ಇಳಿದುಬರುವುದು ; ಅದಕ್ಕೆ ಸಂದರ್ಭಗಳ ಔಚಿತ್ಯವಿರಬೇಕು. ಸಾಮಾನ್ಯವಾಗಿ ಭೂಭಾರಹರಣ, ದುಷ್ಟಶಿಕ್ಷಣ,

ಶಿಷ್ಟರಕ್ಷಣ, ಧರ್ಮಸ್ಥಾಪನೆಗಳ ಪ್ರಯೋಜನಗಳನ್ನು ಅವತಾರಗಳಿಗೆ ಕಾಣಿಸುತ್ತಾರೆ.

ನರ–ನಾರಾಯಣರು ಅವತಾರಗಳಾಗಿ ಮಾನುಷದೇಹವನ್ನು ಧರಿಸಿ ಬದರಿಕಾಶ್ರಮದಲ್ಲಿ ತಪಸ್ಸು ಮಾಡುತ್ತಿದ್ದ ಮಹಾಪುರುಷರೆಂದು ಮಹಾಭಾರತದಲ್ಲೇ ಉಲ್ಲೇಖವಿದೆ (ಶಾಂತಿಪರ್ವ, ನಾರಾಯಣೀಯ ಪರ್ವಾಧ್ಯಾಯ, 344). ದೇವೀಭಾಗವತದಲ್ಲಿಯೂ (4, 5, 15) ನರನಾರಾಯಣರೆಂಬ ಇಬ್ಬರು ಋಷಿಗಳು ವಿಷ್ಣುವಿನ ಅಂಶದಿಂದ ಒದಗಿದವರೆಂದೂ, ಒಂದು ಸಾವಿರವರ್ಷಗಳ ಕಾಲ ತಪಸ್ಸು ಮಾಡಿದರೆಂದೂ ಹೇಳಿದೆ—

'ಹರೇರಂಶೌ ಸ್ಥಿತೌ ತತ್ರ ನರನಾರಾಯಣಾವೃಷೀ।
ಪೂರ್ಣಂ ವರ್ಷಸಹಸ್ರಂ ತು ಚಕ್ರಾತೇ ತಪ ಉತ್ತಮಂ॥'

ನಾರಾಯಣನೆಂಬ ಋಷಿಯೇನೋ ಪ್ರಸಿದ್ಧ ; ಋಗ್ವೇದಕ್ಕೆ ಸೇರಿದ ಪುರುಷ ಸೂಕ್ತಕ್ಕೆ ಅವನೇ ದ್ರಷ್ಟಾರ (10, 90). ನರನೆಂಬ ಋಷಿಯೂ ಋಗ್ವೇದದಲ್ಲಿ ಕಾಣಿಸಿಕೊಳ್ಳುತ್ತಾನೆ. ಆರನೆಯ ಮಂಡಲದಲ್ಲಿ ಇಂದ್ರ ದೇವತಾಕವಾದ ಎರಡು ಇಡೀ ಸೂಕ್ತಗಳಿಗೆ (35, 36) ಅವನೇ ಋಷಿ. ಇವನನ್ನು ಭಾರದ್ವಾಜ ಕುಲದವನೆಂದು ಕೆಲವರು ನಿರ್ದೇಶಿಸಿದ್ದಾರೆ ; ಆದರೆ ವೇದದಲ್ಲಾಗಲೀ ಭಾಷ್ಯದಲ್ಲಾಗಲೀ ಹೀಗೆ ಹೇಳಿಲ್ಲ. ನರನೆಂಬ ಋಷಿಗೂ ಇಂದ್ರನೆಂಬ ದೇವತೆಗೂ ಇರುವ ಸಂಬಂಧ ಇಷ್ಟಕ್ಕೆ ಮುಗಿಯುವುದಿಲ್ಲ. ಶತಪಥ ಬ್ರಾಹ್ಮಣದಲ್ಲಿ ಇಂದ್ರನಿಗೆ ಅರ್ಜುನನೆಂಬ ರಹಸ್ಯ ನಾಮವಿರುವುದಾಗಿ ಹೇಳಿದೆ. ನರ–ನಾರಾಯಣರಲ್ಲಿ ನರನೆಂದರೆ ಅರ್ಜುನನೆಂದು ಪ್ರತೀತಿ. ನರನೆಂಬ ಮುನಿಯ ಅಂಶದಿಂದ ಹುಟ್ಟಿದವನಾದುದರಿಂದ ಅರ್ಜುನನು ನರನೆನಿಸಿಕೊಂಡನೆಂದು ಮೇದಿನೀಕೋಶದ ವಿವರಣೆ. ಋಗ್ವೇದದಲ್ಲಿ ಇಂದ್ರನೆಂಬ ಋಷಿಯೂ ಇದ್ದಾನೆ (10, 28 ; 10, 38), ಅವನಿಗೆ ವೈಕುಂಠನೆಂಬ ಹೆಸರೂ ಇದೆ (10, 48 ರಿಂದ 50).

ಆದರೆ ಅರ್ಜುನನೂ ವಾಸುದೇವಕೃಷ್ಣನೂ ಒಟ್ಟಿಗೆ ಅಥವಾ ಬೇರೆ ಬೇರೆ ದೀರ್ಘಕಾಲ ತಪಸ್ಸುಮಾಡಿದ ಉಲ್ಲೇಖ ಮಹಾಭಾರತದಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ. ಹೀಗಾಗಿ ನರ–ನಾರಾಯಣರೆಂದರೆ ಅರ್ಜುನ–ಕೃಷ್ಣರೇ ಎಂದು ಗುರುತಿಸುವುದು ಕಷ್ಟವಾಗುತ್ತದೆ. ಅಮರಕೋಶ ಟೀಕಾಕಾರನಾದ ಭರತನು 'ನರನೆಂಬ ಋಷಿಯ ಮಗನಾಗಿ ನಾರಾಯಣ' ('ಕ್ವಚಿನ್ಮನ್ವಂತರೇ ನರನಾಮ–ಋಷೇರಪತ್ಯತಾಂ ಗತಃ ಇತಿ ನಾರಾಯಣಃ') ಎಂದು ವಿವರಿಸಿರುವುದು ಸ್ವಾರಸ್ಯವಾಗಿದೆ. ನರ–ನಾರಾಯಣ

ರೆಂಬುವರು ತಂದೆ-ಮಕ್ಕಳಾದ ಋಷಿಗಳು ಎಂದು ತಾತ್ಪರ್ಯವೇ? ಮೊದಲಿಗೆ ನರನೆಂದರೆ ಅರ್ಜುನನೆಂಬ ಅರ್ಥ ಕಾಣುವುದಿಲ್ಲ. ಮುಂದೆ ಪುರಾಣಕಾರರು ನರನೆಂಬ ಋಷಿಗೂ ಇಂದ್ರನಿಗೂ ಇದ್ದ ನೆಂಟನ್ನು ಆಧಾರ ಮಾಡಿಕೊಂಡು, ಇಂದ್ರನ ರಹಸ್ಯನಾಮವಾದ ಅರ್ಜುನನೇ ಅವನು ಎಂದು ಭಾವಿಸಿರಬೇಕು. ಕೃಷ್ಣವಾಸುದೇವನನ್ನು ನಾರಾಯಣನೆಂದು ವ್ಯವಹರಿಸು ವುದೇನೋ ಮಹಾಭಾರತದಲ್ಲೂ ಇದೆ, ಪುರಾಣಗಳಲ್ಲೂ ಇದೆ. ಇವರಿಬ್ಬ ರನ್ನೂ ಜೋಡಿ ಋಷಿಗಳೆಂದು ಕಾಣಿಸಿರುವುದು ಪುರಾಣದ ಕೆಲಸವೇ.

ಮಹಾಭಾರತದಲ್ಲಿ ಕೃಷ್ಣಾರ್ಜುನರು ಒಂದೇ ಓರಗೆಯವರು, ಸ್ನೇಹಿತರು, ನೆಂಟರು. ದ್ರೌಪದೀಸ್ವಯಂವರದಲ್ಲಿ ಕೃಷ್ಣನು ಅರ್ಜುನ ನನ್ನು ಮೊದಲ ಬಾರಿಗೆ ಕಂಡು, ಅವನ ಮತ್ಸ್ಯಯಂತ್ರಭೇದನದ ಚಾತುರ್ಯ ವನ್ನೂ ಜಗಳಕ್ಕೆ ಬಂದ ರಾಜರನ್ನು ಎದುರಿಸಿದ ಶೌರ್ಯವನ್ನೂ ಕಂಡು ಮೆಚ್ಚಿಕೊಂಡು ಅವನಲ್ಲಿ ತುಂಬ ವಿಶ್ವಾಸವನ್ನು ತಳೆಯುತ್ತಾನೆ. ಈ ಸ್ನೇಹ ಕೃಷ್ಣನ ಕೊನೆಯುಸಿರಿನವರೆಗೂ ಉಳಿಯುತ್ತದೆ; ತಾನು ಪ್ರಾಣ ಬಿಡುವ ಮುನ್ನವೂ ಅರ್ಜುನನಿಗೆ ಹೇಳಿಕಳುಹಿಸುತ್ತಾನೆ. ಈ ಸ್ನೇಹ ಸಂಬಂಧವನ್ನೇ ನೆವವಾಗಿ ಇರಿಸಿಕೊಂಡು ಪುರಾಣಕಾರರು ಕೃಷ್ಣಾವತಾರದ ಕಾಲಕ್ಕೆ ಎಷ್ಟೋ ಪ್ರಾಚೀನವಾದ ನರ-ನಾರಾಯಣರ ಪ್ರಾದುರ್ಭಾವಕ್ಕೂ ಕೃಷ್ಣಾರ್ಜುನರಿಗೂ ಗಂಟು ಹಾಕುತ್ತಾರೆ.

(5) ಅವತಾರದ ತಾತ್ಪರ್ಯ

ಹೀಗೆ ಕೃಷ್ಣನ ಚಿತ್ರಣದಲ್ಲಿ ಹಲವಾರು ಎಳೆಗಳು ಕಾಲಕಾಲಕ್ಕೆ ಸೇರಿ ಕೊಳ್ಳುತ್ತ ಬಂದು ಈಗ ಬಿಡಿಸಲಾಗದ ಗೋಜಾಗಿದೆ. ಅದು ಎಷ್ಟರ ಮಟ್ಟಿಗೆ ಗೋಜೆಂದರೆ, ಹಲವರು ಕೃಷ್ಣನೆಂಬ ವ್ಯಕ್ತಿ ದಿಟವಾಗಿ ಇದ್ದನೋ ಇಲ್ಲವೋ ಎಂದು ಸಂಶಯಪಡುತ್ತಾರೆ. ಕೆಲವರಂತೂ ಅಂಥವನು ಇರಲೇ ಇಲ್ಲ, ಅದೊಂದು ಕಲ್ಪನೆ, ಕವಿಸಮಯ, ತಾತ್ತ್ವಿಕಪ್ರತಿಮೆ ಅಷ್ಟೆ ಎಂದು ಹೇಳಿಬಿಡುತ್ತಾರೆ. ಪುರಾಣಗಳ ಬೆನ್ನಟ್ಟಿಹೋದರೆ ಈ ಸಂಶಯವಾಗಲಿ ನಿರ್ಣಯವಾಗಲಿ ಸಾಧುವೆಂದೇ ತೋರುವುದು ಸಹಜ. ಆದರೆ ಮಹಾ ಭಾರತದಲ್ಲಿ, ಮತ್ತಿತರ ಆಕರಗಳಲ್ಲಿ (ಜೈನ, ಬೌದ್ಧ ವಾಙ್ಮಯಗಳು ; ಪಾಣಿನಿ, ಪತಂಜಲಿಗಳ ಪ್ರಸ್ತಾಪ ; ವೈದಿಕ ಸಾಹಿತ್ಯದ ಒಕ್ಕಣೆ ಇತ್ಯಾದಿ) ಕೃಷ್ಣನ ಐತಿಹಾಸಿಕ ವ್ಯಕ್ತಿತ್ವ ಸ್ಪಷ್ಟವಾಗುತ್ತದೆ. ಮತ್ತೆ, ಅವನ ಬದುಕಿನ ಸ್ಥೂಲ ವಿವರಗಳನ್ನು ಗುರುತಿಸಿದರೆ ಆದರಲ್ಲಿ ಯಾವ ಅಸಂಭಾವ್ಯತೆಯೂ ನಮ್ಮ ಕಣ್ಣನ್ನು ಕುಕ್ಕುವುದಿಲ್ಲ. ಪುರಾಣದ ಅದ್ಭುತ ವರ್ಣನೆಗಳನ್ನು ಗಮನಿಸಬಾರದು ಅಷ್ಟೆ. ವಿಮರ್ಶೆಗೆ ನಿಲ್ಲುವಂಥ ವಿವರಗಳಲ್ಲ ಅವು.

ಐತಿಹಾಸಿಕ ವ್ಯಕ್ತಿಯೆಂದೊಡನೆ ಗುಣಗಳಿದ್ದರೂ ಲೋಪದೋಷ ಗಳಿಂದ ಕೂಡಿದವನು, ವ್ಯಾಮಿಶ್ರಸ್ವಭಾವದವನು ಎಂಬ ಧ್ವನಿ ಮೂಡಿ ಕೊಳ್ಳುತ್ತದೆ. ಆದರೆ ಕೃಷ್ಣನ ವಿಚಾರವಾಗಿ ಇದನ್ನು ಹೇಳುವಹಾಗಿಲ್ಲ. ಹಾಗೆಂದೇ ಅವನನ್ನು ಅವತಾರಪುರುಷ, ಲೀಲಾಮಾನುಷವಿಗ್ರಹ ಎಂದು ನಿರ್ದೇಶಿಸಿರುವುದು. ಅವತಾರ, ಐತಿಹಾಸಿಕತೆಗಳು ಪರಸ್ಪರ ವಿರುದ್ಧ ವೆಂದೇನಿಲ್ಲ. ರಾಮಾಯಣದ ಶ್ರೀರಾಮನು ಅವತಾರಪುರುಷನೇ. ಆದರೆ ವಾಲ್ಮೀಕಿಗಳು ರಾಮಾಯಣದುದ್ದಕ್ಕೂ ಅವನ ಮನುಷ್ಯತ್ವವನ್ನೇ ಎತ್ತಿ ತೋರಿಸಿದ್ದಾರೆ. ಆದರೆ ರಾಮನಿಗೆ ದೊರೆತ ವಾಲ್ಮೀಕಿಗಳ ಮನೋಧರ್ಮ ಬೇರೆ, ಕೃಷ್ಣನಿಗೆ ದೊರೆತ ವ್ಯಾಸರ ಮನೋಧರ್ಮ ಬೇರೆ. ರಾಮಾ ಯಣವು ಕಾವ್ಯವೆಂದಾದರೂ ಅದರಲ್ಲಿ ಐತಿಹಾಸಿಕಗುಣವಿದೆ ; ಮಹಾ ಭಾರತ ಇತಿಹಾಸವೆಂದಾದರೂ ಅದರಲ್ಲಿ ಕವಿಸಮಯಗಳು ತುಂಬಿವೆ.

ಆದುದರಿಂದಲೇ ರಾಮಾಯಣ ಹೆಚ್ಚೂ ಕಡಮೆ ಹಾಗೆಯೇ ಉಳಿದು ಕೊಂಡಿತು ; ಮಹಾಭಾರತ ಕಾಲಕಾಲಕ್ಕೆ ಬೆಳೆಯುತ್ತ ಬಂದಿತು. ರಾಮನ ವ್ಯಕ್ತಿತ್ವ ಆದಿಕಾವ್ಯದಲ್ಲೇ ಸ್ಪಷ್ಟವಾಗಿ ಚಿತ್ರಿತವಾಗಿದೆ ; ಪುರಾಣಗಳು ಅದನ್ನು ಮಾರ್ಪಡಿಸಲು ತೊಡಗಲಿಲ್ಲ. ಆದರೆ ಕೃಷ್ಣನ ವ್ಯಕ್ತಿತ್ವ ಮಸು ಕಾಗಿದ್ದು, ಪುರಾಣಗಳು ಅದರ ಮೇಲೆ ಧಾರಾಳವಾಗಿ ಕೈಯಾಡಿಸಿವೆ.

ಶ್ರೀರಾಮ, ಶ್ರೀಕೃಷ್ಣ ಇಬ್ಬರೂ ವ್ಯಕ್ತಿಗಳೂ ಹೌದು, ಅವತಾರ ಗಳೂ ಹೌದು. ಅವರ ಸ್ವಭಾವ ಲೋಕೋತ್ತರವಾದುದು, ಆದರೆ ಲೋಕಾ ತೀತವಲ್ಲ. ಅಡಿಯಿಂದ ಮುಡಿಯವರೆಗೂ ಮನುಷ್ಯಸ್ವಭಾವವೇ ; ಆದರೆ ಮನುಷ್ಯನಿಗೆ ಸಾಧ್ಯವಿರುವ ಭವ್ಯತೆ ಅವರಲ್ಲಿ ಮುಗಿಲುಮುಟ್ಟಿದೆ. ಪರಿ ಪೂರ್ಣರು ಎನ್ನಲಡ್ಡಿಯಿಲ್ಲ. ಮೇಲಾಗಿ, ಮನುಷ್ಯಜೀವನದ ಆದರ್ಶ ವನ್ನು ಅವರು ಪ್ರತಿಬಿಂಬಿಸಿದರು. ಭೂಮಿಯ ಮೇಲೆ ಅಡ್ಡಾಡುವ ದೇವತೆಗಳಂತೆ ಮೆರೆದರು ; ಅವರಿಂದ, ಅವರ ಆದರ್ಶದಿಂದ, ಉಪದೇಶ ದಿಂದ ಉಪಕೃತರಾದ ಜನ ಅವರನ್ನು ಅವತಾರಗಳೆಂದು ಸನ್ಮಾನಿಸಿದರು. ನಾಡಿಗೆ ನಾಡೇ ಅದನ್ನು ಒಪ್ಪಿಕೊಂಡು ಅವರ ನೆನಪನ್ನು ಆದರದಿಂದ ಉಳಿಸಿಕೊಂಡಿತು.

ಈ ಚೌಕಟ್ಟಿನಲ್ಲಿ ಅವತಾರವೆಂದರೇನು ? ಪುರಾಣಗಳೇನೋ ಭೂಮಿಯ ಭಾರವನ್ನು ಇಳಿಸುವುದೇ (ಭೂಭಾರಾವತರಣ) ಅವತಾರದ ಉದ್ದೇಶವೆಂದು ಹೇಳುತ್ತವೆ. ಭೂಮಿಗೆ ಭಾರವಾಗುವುದು ರಾಕ್ಷಸರಿಂದ, ಅಸುರರಿಂದ, ದಾನವರಿಂದ. ಇವರನ್ನು ಕೊಂದಲ್ಲದೆ ಭೂಮಿಗೆ ನೆಮ್ಮದಿ ಯಿರದು. ಇವರನ್ನು ಕೊಲ್ಲುವುದು ಮನುಷ್ಯರಿಂದಾಗಲೀ ದೇವತೆ ಗಳಿಂದಾಗಲೀ ಸಾಧ್ಯವಿಲ್ಲ. ರಾಕ್ಷಸರ ಬಲ ದೇವತೆಗಳಿಗಿರದು ; ಅಸುರರ ವೀರ್ಯ ಮಾನವರಿಗಿರದು. ಆದುದರಿಂದ ಸರ್ವಶಕ್ತನಾದ ಭಗವಂತ ತನ್ನ ಅವ್ಯಕ್ತ, ಪರಾ ನೆಲೆಯಿಂದ ಕೆಳಗಿಳಿದು ಬರಬೇಕು. ಇದೇ ಅವ ತಾರ. ಕೆಳಗಿಳಿದು ಬಂದಾಗ ವ್ಯಕ್ತವಾದ, ಮೂರ್ತರೂಪವನ್ನು ತಳೆಯ ಬೇಕಾದ ಅಗತ್ಯವಿದೆ. ಮತ್ಸ್ಯ, ಕೂರ್ಮ, ವರಾಹ, ನೃಸಿಂಹ ಮೊದ ಲಾದ ಮೃಗರೂಪಗಳೋ, ವಾಮನ, ಪರಶುರಾಮ, ರಾಮ, ಕೃಷ್ಣ, ಕಲ್ಕಿ ಮೊದಲಾದ ಮಾನವರೂಪಗಳೋ ಆಗಬಹುದು. ರೂಪ ಏನಾದರೂ ಭೂಭಾರವನ್ನು ಇಳಿಸುವುದೇ ಉದ್ದೇಶ. ಒಂದೊಂದು ಅವತಾರದಲ್ಲೂ ಅಸುರನಿಗ್ರಹ, ರಾಕ್ಷಸಸಂಹಾರ, ದಾನವದಮನಗಳನ್ನೇ ಕಾಣಬೇಕು. ಆದರೆ ಬುದ್ಧ, ಕಪಿಲ, ನರನಾರಾಯಣರು, ದತ್ತಾತ್ರೇಯ ಮೊದಲಾದ

ಅವತಾರಗಳಲ್ಲಿ ಈ ಪ್ರಯೋಜನವಿರದು. ಇವುಗಳಲ್ಲಿ ಧರ್ಮಸಂಸ್ಥಾಪನೆಯೇ ನೇರವಾದ ಉದ್ದೇಶ. ದುಷ್ಟರ ದಮನದಿಂದಲೂ ಶಿಷ್ಟರ ರಕ್ಷಣೆಯಾಗಿ ಧರ್ಮಸಂಸ್ಥಾಪನೆಗೆ ಕಾರಣವಾಗುತ್ತದೆಯೆನ್ನಿ. ಮೂವತ್ತೊಂಬತ್ತು ಅವತಾರಗಳನ್ನು ಹಲವು ಪುರಾಣಗಳು ಎಣಿಸುವಾಗ ನೇರವಾಗಿಯೋ ಬಳಸಾಗಿಯೋ ಧರ್ಮಸಂಸ್ಥಾಪನೆಯೇ ಪ್ರಧಾನವಾದ ತಾತ್ಪರ್ಯ. ಭಗವದ್ಗೀತೆಯಲ್ಲಿ ಕೃಷ್ಣನಿಂದ ಹೇಳಿಸಿರುವ ಈ ಮಾತುಗಳನ್ನು ಎಲ್ಲರೂ ಬಲ್ಲರಷ್ಟೆ—

'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥'

ಧರ್ಮ ಮಸುಕಾದಾಗ, ಅಧರ್ಮ ಮೇಲೇರಿಬಂದಾಗ ಸಜ್ಜನರನ್ನು ಕಾಪಾಡಲು, ದುರ್ಜನರನ್ನು ದಂಡಿಸಲು ಭಗವಂತ ತನ್ನನ್ನು ಸಂದರ್ಭೋಚಿತವಾಗಿ ತೋರಿಸಿಕೊಳ್ಳುತ್ತಾನೆ. ಇಲ್ಲಿ ಅವತಾರವೆಂಬ ಮಾತಿಲ್ಲದಿದ್ದರೂ ಇದು ಅವತಾರದ ಸಂಗ್ರಹನಿರೂಪಣೆಯೇ. ಆದರೆ ಇಲ್ಲಿ ಪೂರ್ಣ, ಅಂಶ, ಆವೇಶ ಮೊದಲಾದ ವಿಭಾಗವೇನು ಕಾಣಿಸುವುದಿಲ್ಲ. ಅವತಾರದ ಸ್ವರೂಪವೂ ಸ್ಪಷ್ಟವಾಗುವುದಿಲ್ಲ. ಅವತಾರವೆಂದು ನಿರ್ದೇಶಿಸುವುದು ಹೇಗೆಂಬ ಸೂಚನೆಯೂ ಇಲ್ಲ. ಇವೆಲ್ಲ ಮುಂದೆ ಪೌರಾಣಿಕರ ಒಕ್ಕಣೆ.

ವಿಷ್ಣುವಿನ ಪ್ರಸಿದ್ಧವಾದ ಹತ್ತು ಅವತಾರಗಳಲ್ಲಿ, ಬುದ್ಧನೊಬ್ಬನನ್ನು ಬಿಟ್ಟರೆ, ಉಳಿದುವೆಲ್ಲ ದುಷ್ಟದಮನಕ್ಕೆಂದೇ ಸಿದ್ಧವಾದುದೆಂದು ಪ್ರತೀತಿ. ಈ ಒಂದೊಂದು ಅವತಾರದಲ್ಲೂ ನಿರ್ದಿಷ್ಟವಾಗಿ ಕೆಲವು ಅಸುರರ ನಿಗ್ರಹ ಹೇಳಲ್ಪಟ್ಟಿದೆ. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ ಎಂಬ ಅವತಾರಗಳಲ್ಲಿ ಇದೇ ಪ್ರಧಾನವಾದರೂ, ರಾಮ, ಕೃಷ್ಣ, ಪರಶುರಾಮ, ಕಲ್ಕಿ ಈ ಅವತಾರಗಳು ಇಷ್ಟಕ್ಕೆ ಮುಗಿಯುವುದಿಲ್ಲ. ನಿದರ್ಶನಕ್ಕೆ ರಾಮಾವತಾರ ರಾವಣನ ಸಂಹಾರಕ್ಕೆಂದು, ಕೃಷ್ಣಾವತಾರ ಕಂಸ–ಜರಾಸಂಧರ ದಮನಕ್ಕೆಂದು ಹೇಳಬಹುದಾದರೂ ಅಷ್ಟಕ್ಕೆ ಅವತಾರ ಸೀಮಿತವಾಗಿಲ್ಲ. ಅದನ್ನು ಮೀರಿ ಲೋಕಕ್ಕೆ ಒಂದು ಆದರ್ಶ, ಅಭಯ, ಧರ್ಮನಿಷ್ಠೆಗಳನ್ನು ಒದಗಿಸುವುದೇ ಉದ್ದೇಶವೆಂಬಂತೆ ತೋರುತ್ತದೆ. ಆದ್ದರಿಂದ ಧರ್ಮಸಂಸ್ಥಾಪನೆಯೆಂಬ ವಿಶಾಲಾರ್ಥದಲ್ಲಿ ಅವತಾರದ ಪ್ರಯೋಜನವನ್ನು ಗ್ರಹಿಸಬೇಕು.

ಧರ್ಮಸಂಸ್ಥಾಪನೆಗೆ ಅಡ್ಡಿಯಾಗಿ ಅಸುರರ ಉಪಟಳವೇ ಇರುವುದೆಂದೂ ಹೇಳುವಹಾಗಿಲ್ಲ. ಸರ್ಗಾದಿಯಲ್ಲಿ ಭಗವಂತ ಮಾಡಿದ ಉಪದೇಶ ಕಾಲಕ್ರಮದಲ್ಲಿ ಅಳಿಸಿಹೋಗುವುದು ಸಹಜವೇ ; ಗೀತೆಯಲ್ಲಿಯೇ 'ಮಹತಾ ಕಾಲೇನ ನಷ್ಟಃ' ಎಂಬ ಮಾತಿದೆಯಲ್ಲವೆ ? ಇದಕ್ಕೆ ರಾಕ್ಷಸರೇ ಇರಬೇಕೆಂಬ ನಿಯಮವೇನಿಲ್ಲ. ಆದರೆ ಪುರಾಣಕಾರರ ಕಣ್ಣಿಗೆ ಅಸುರ ಸಂಹಾರವೇ ಅವತಾರದ ತಾತ್ಪರ್ಯವೆಂದು ಕಂಡಿತು. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ರಾಮ ಈ ಅವತಾರಗಳಿಗೆಲ್ಲ ಒಬ್ಬೊಬ್ಬ ಅಸುರನೇ ಕಾರಣವಾದುದು. ಆದರೆ ಕೃಷ್ಣಾವತಾರ, ಪೂರ್ಣಾವತಾರವೆಂದೋ ಏನೋ, ಲೆಕ್ಕವಿಲ್ಲದಷ್ಟು ಅಸುರರ ಸಂಹಾರಕ್ಕೆ ಕಾರಣವಾಯಿತು. ಅವನ ಬಾಲಲೀಲೆಗಳೆಲ್ಲ ಅಸುರಸಂಹಾರಗಳೇ ; ಕೌರವರ ವಿನಾಶಕ್ಕೆಂದೇ ಅವನು ಅವತರಿಸಿದ್ದು ! ಅವನ ಬದುಕಿನಲ್ಲಿ ಅವನಿಂದ ಸತ್ತ ಅಸುರರ ಸಂಖ್ಯೆ ತುಂಬ ದೊಡ್ಡದು. ಪತಂಜಲಿಯಂಥ ಪ್ರಾಚೀನರಿಗೆ ಪರಿಚಯವಿದ್ದುದು ಕಂಸವಧೆಯೊಂದೇ. ಜೈನವಾಙ್ಮಯದ ಹಿಂದಲ ಸ್ತರದಲ್ಲಿ ಭೀಮನಿಂದಾದ ಜರಾಸಂಧನ ವಧೆಯೂ ಉಲ್ಲೇಖಗೊಂಡಿದೆ. ಇಷ್ಟನ್ನು ಬಿಟ್ಟು ಬೇರೆ ಯಾರನ್ನೂ ಅವನು ಕೊಂದಂತೆ, ಕೊಲ್ಲಿಸಿದಂತೆ ಪ್ರಸ್ತಾಪ ಪುರಾಣಗಳಿಗೆ ಮುಂಚೆ ಕಾಣುವುದಿಲ್ಲ. ಅದೂ, ಕಂಸ–ಜರಾಸಂಧರು ಅಸುರರೇನಲ್ಲ ; ಮನುಷ್ಯರೇ, ಕೃಷ್ಣನಿಗೆ ನೆಂಟರಾಗಿದ್ದವರೇ. ಅಸುರರನ್ನು ಸಾಯಿಸದೆ ಅವತಾರವೆಂಥದು ? ಆದ್ದರಿಂದ ಪುರಾಣಕಾರರು ಪೂತನಿಯೆಂಬ ರಾಕ್ಷಸಿ, ಶಕಟಾಸುರ, ತೃಣಾವರ್ತನೆಂಬ ಅಸುರ, ಕಾಲಿಯನೆಂಬ ದಾನವ, ನಿಕುಂಭನೆಂಬ ದೈತ್ಯ, ಧೇನುಕಾಸುರ, ಪ್ರಲಂಬಾಸುರ, ನರಕಾಸುರ, ಬಾಣಾಸುರ ಮೊದಲಾದವರನ್ನೆಲ್ಲ ಸೃಷ್ಟಿ ಮಾಡಬೇಕಾಯಿತು. ಅವನು ಕೊಂದ ಮಾನವರ ಗುಂಪಿಗೆ ಶಿಶುಪಾಲ, ಸಾಳ್ವ, ಪೌಂಡ್ರ, ದಂತವಕ್ರ, ವಿದೂರಥ ಮೊದಲಾದವರನ್ನೂ ಸೇರಿಸಿದರು. ಹೇಗೂ ಇತಿಹಾಸದ ಕಟ್ಟುಪಾಡು ಪುರಾಣಕ್ಕಿರದಷ್ಟೆ ?

ಪುರಾಣಗಳು ಕೃಷ್ಣನಿಗೆ ಮಾಡಿರುವ ಅಪಚಾರ ಇಷ್ಟಕ್ಕೆ ನಿಲ್ಲುವುದಿಲ್ಲ. ಬಲರಾಮನನ್ನೂ, ಭೀಮಾರ್ಜುನರನ್ನೂ ಮುಂದಿಟ್ಟುಕೊಂಡು ಕೃಷ್ಣನು ಕೌರವರ ವಿನಾಶಕ್ಕೇ ಮೂಲಕಾರಣನಾದನೆಂದು ಪುರಾಣಗಳ ಒಕ್ಕಣೆ ; ಇದಕ್ಕಾಗಿ ಕಪಟ, ಸುಳ್ಳು, ಮೋಸ, ಚಾಡಿ, ಚಿತಾವಣೆ, ಪ್ರಲೋಭನೆ ಎಲ್ಲವನ್ನೂ ಬಳಸಿಕೊಂಡನೆಂದೂ ಅಂಜದೆ ಅಳುಕದೆ ಹೇಳಿವೆ ! ಪೂರ್ಣಾವತಾರದ ಸ್ವಾರಸ್ಯ ಅವುಗಳ ದೃಷ್ಟಿಯಲ್ಲಿ ಇಷ್ಟು !

ಜಯಾಖ್ಯಸಂಹಿತೆಯಿರಲಿ, ಭಾರತದಲ್ಲಿ ಕೂಡ ಇದಕ್ಕೆ ಏನೇನೂ ಸಮರ್ಥನೆ ಸಿಗುವುದಿಲ್ಲ. ಯುದ್ಧವಾಗದಂತೆ ತಡೆಯುವುದೇ ಕೃಷ್ಣನ ಉದ್ದೇಶ ವಾಗಿದ್ದಿತೆಂದು ಮಹಾಭಾರತದಲ್ಲಿಯೂ ಸ್ಪಷ್ಟವಾಗಿದೆ. ವಿರಾಟಪರ್ವ ದಲ್ಲಿ ಅಭಿಮನ್ಯುವಿನ ವಿವಾಹಸಂದರ್ಭದಲ್ಲಿ ನೆರೆದ ರಾಜರೆದುರು ಕೃಷ್ಣ ಪಾಂಡವರಿಗಾದ ಅನ್ಯಾಯದ ಮಾತನ್ನೆತ್ತುತ್ತಾನೆ ; ಕಡೆಗೆ ಅರ್ಧರಾಜ್ಯ ವನ್ನಾದರೂ ಅವರಿಗೆ ಕೊಡಿರೆಂದು ದುರ್ಯೋಧನನನ್ನೂ ಕರ್ಣನನ್ನೂ ಕೇಳಿಕೊಳ್ಳುತ್ತಾನೆ. ಹೇಗಾದರೂ ಯುದ್ಧ ತಪ್ಪಲಿ, ಯುದ್ಧನಡೆದು ಸಾವಿರಾರು ಜನರು ಸಾಯುವುದಕ್ಕಿಂತ ಅರ್ಧರಾಜ್ಯವನ್ನು ಕೈಬಿಡಲಾಗದೇ ಎಂದು ಕೃಷ್ಣನ ವಾದ. ದುರ್ಯೋಧನನ ಮೊಂಡತನದಿಂದ ಯುದ್ಧ ಅನಿವಾರ್ಯವಾಗುತ್ತದೆ ; ಕೃಷ್ಣನ ಕಪಟದಿಂದಲ್ಲ.

ಯುಧಿಷ್ಠಿರನ ರಾಜಸೂಯಯಾಗದ ಸಂದರ್ಭದಲ್ಲಿ ತನ್ನ ಹಳೆಯ ವೈರವನ್ನು ತೀರಿಸಿಕೊಳ್ಳುವುದಕ್ಕೆಂದು ಯುಧಿಷ್ಠಿರನನ್ನೂ ಭೀಮಾರ್ಜುನ ರನ್ನೂ ಮಗಧದ ರಾಜ ಜರಾಸಂಧನ ಮೇಲೆ ಎತ್ತಿಗಟ್ಟಿದವನು ಕೃಷ್ಣನೆಂಬ ಕುಖ್ಯಾತಿಯಿದೆಯಷ್ಟೆ. ಮಹಾಭಾರತದಲ್ಲಿ ಈ ಭಾಗವನ್ನು ಓದಿನೋಡಿ. ಜರಾಸಂಧನ ಸಾವು ಕೃಷ್ಣನಿಗೆ ಇಷ್ಟವೇ ಇಲ್ಲ. ನೂರಾರು ಕ್ಷತ್ರಿಯರನ್ನು ರುದ್ರನ ಬಲಿಗೆಂದು ಸೆರೆಹಿಡಿದು ಇಟ್ಟಿದ್ದ ದುಷ್ಟ ಜರಾಸಂಧನನ್ನು ಅವನು ಸಾಯಿಸಿದ್ದರೂ ತಪ್ಪೇನು ಆಗುತ್ತಿರಲಿಲ್ಲ. ಆದರೆ ಕೃಷ್ಣ ಅವ ನನ್ನು ಕೇಳಿದ್ದು ಈ ಕ್ಷತ್ರಿಯರನ್ನೆಲ್ಲ ಬಿಟ್ಟುಬಿಡಬೇಕೆಂದಷ್ಟೆ. ಅವರನ್ನು ಸೆರೆಮನೆಯಿಂದ ಬಿಟ್ಟುಕೊಡಲು ಜರಾಸಂಧ ಒಪ್ಪಿದ್ದರೆ ಅವನು ಸಾಯ ಬೇಕಾದ ಕಾರಣವಿರುತ್ತಿರಲಿಲ್ಲ. ಇದನ್ನು ಕೃಷ್ಣನೇ ಬಾಯಿಬಿಟ್ಟು ಹೇಳುತ್ತಾನೆ ; ಜರಾಸಂಧನಿಗೆ ಕಡೆಯವರೆಗೂ ಎಚ್ಚರಿಕೆ ನೀಡುತ್ತಾನೆ. ಜರಾಸಂಧನ ವಧೆಯಾಗುವಾಗ, ಇತರರು ಯಾರೂ ಸಾಯದಿರಲೆಂದು ಸೈನ್ಯವನ್ನು ಕೊಂಡೊಯ್ಯದೆ ಮಲ್ಲಯುದ್ಧಕ್ಕೆ ಪ್ರೇರಿಸುತ್ತಾನೆ. ಹಳೆಯ ವೈರ ಜರಾಸಂಧನ ಮನಸ್ಸಿನಲ್ಲಿದ್ದಿತು ಅಷ್ಟೆ ; ಕೃಷ್ಣನ ಮನಸ್ಸಿನಲ್ಲಿರಲಿಲ್ಲ.

ಇಷ್ಟರಮೇಲೆ ಅವನು ಪಾಂಡವಪಕ್ಷಪಾತಿಯೆಂಬುದೂ ಮಹಾ ಭಾರತದಿಂದ ಸಿದ್ಧವಾಗುವುದಿಲ್ಲ. ವಾಸ್ತವವಾಗಿ ಅವನು ಸರ್ವತ್ರ ಸಮದರ್ಶಿ. ಕೌರವರು ವೃಥಾ ಬವಣೆಗೀಡಾಗುವುದು ಬೇಡೆಂದು ಮತ್ತೆ ಮತ್ತೆ ಪ್ರಯತ್ನಪಡುತ್ತಾನೆ. ಇನ್ನೇನು ದಾರಿಯಿಲ್ಲವೆಂದು ಸ್ಪಷ್ಟ ವಾದಾಗ ಧರ್ಮದ ಕಡೆ ಒಲಿದು ನಿಲ್ಲುತ್ತಾನೆ ಅಷ್ಟೆ. ಆಗಲೂ ತಾನು ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಡುವುದಕ್ಕೆ ಒಡಂಬಡಲಿಲ್ಲ. ಅವನು

ಸ್ವತಃ ವೀರ ; ಅವನೇ ಯೋಧನಾಗಿ ನಿಂತಿದ್ದರೆ ಮಹಾಭಾರತಯುದ್ಧ ಮೂರು ಗಳಿಗೆಯಲ್ಲೇ ಮುಗಿದುಹೋಗುತ್ತಿತ್ತು. ಆದರೆ ಯುದ್ಧ ವೆಂಬುದು ಅವನಿಗೆ ಎಷ್ಟುಮಾತ್ರಕ್ಕೂ ಬೇಡವಾದ ವಿಷಯ ; ಇದನ್ನು ಅಡಿಗಡಿಗೆ ಎತ್ತಿ ಆಡುತ್ತಾನೆ.

ಮಹಾಭಾರತಯುದ್ಧ ನಡೆದದ್ದು ಕೃಷ್ಣನಿಂದಲ್ಲವೆಂಬುದನ್ನು ನಾವು ಮನದಟ್ಟುಮಾಡಿಕೊಳ್ಳಬೇಕು. ಪುರಾಣಕಾರರು ಕಾಣಿಸಿರುವಂತೆ ಅವನು ಕಪಟನಾಟಕಸೂತ್ರಧಾರಿಯೆಂದಾಗಲೀ 'ಪಾಂಡವಾನಾಂ ಹಿತಾರ್ಥಾಯ ಕೌರವಾನಾಂ ವಿನಾಶಾಯ,' ಕೃಷ್ಣಜನ್ಮವೆಂದಾಗಲೀ ಬಗೆಯಬಾರದು. ಅವತಾರದ ತಾತ್ಪರ್ಯ ಇದಲ್ಲ. ಅವತಾರವಾದಮಾತ್ರಕ್ಕೆ ಭಗವಂತನಿಗೆ ಸಹಜವಾದ 'ನಿರ್ದೋಷಾಖಿಲಸದ್ಗುಣ'ತ್ವ ಮರೆಯಾಗುವುದಿಲ್ಲ. 'ಮನುಷ್ಯನೆಂಬ ರೂಪವಾದರೂ ದೇಹೋತ್ಪತ್ತಿಯ ಪ್ರಸಂಗವಿಲ್ಲ. ಪ್ರಾದುರ್ಭಾವವಷ್ಟೆ' ಎಂದು ಪರಮಶ್ರುತಿ ಹೇಳುವಲ್ಲಿ, ಮನುಷ್ಯದೇಹಕ್ಕೆ ಕರ್ಮ–ಸಂಸ್ಕಾರಗಳಿಂದ ಒದಗುವ ರಾಗದ್ವೇಷಾದಿಗಳ ಸೋಂಕಿಲ್ಲವೆಂದರ್ಥ. ಪರಮೋಪನಿಷತ್ತು 'ವರ್ಜಿತಃ ಸರ್ವದೋಷೈರ್ಯೋ ಗುಣಸರ್ವಸ್ವ ಮೂರ್ತಿಮಾನ್' ಎಂದು ಭಗವಂತನ ಸ್ವಭಾವವನ್ನು ನಿರೂಪಿಸಿದೆ. ಇದು ಅವತಾರದಲ್ಲೂ ಉಳಿದುಬರಬೇಕು. ಹಾಗಾದರೆ ಮಾತ್ರ ಅವತಾರದಿಂದ ಧರ್ಮಸಂಸ್ಥಾಪನೆಯಾದೀತು.

ಅವತಾರದಲ್ಲಿ ಆದರ್ಶವಿರಬೇಕೆಂದು ತಾತ್ಪರ್ಯ. ರಾಮಾವತಾರದಲ್ಲಿ ರಾಮನನ್ನು ವಾಲ್ಮೀಕಿಗಳು 'ವಿಗ್ರಹವಾನ್ ಧರ್ಮಃ', 'ರಾಮಃ ಸತ್ಪುರುಷೋ ಲೋಕೇ' ಎಂಬುದಾಗಿ ತೋರಿಸಿಕೊಟ್ಟಿದ್ದಾರೆ. ಕೃಷ್ಣಾವತಾರದಲ್ಲಿ ಕೃಷ್ಣನೂ ಹೀಗೆಯೇ ಇರಬೇಕಷ್ಟೆ ? ಮಹಾಭಾರತದ ಪ್ರಕ್ಷಿಪ್ತಭಾಗಗಳನ್ನು ಬಿಟ್ಟು ನೋಡಿದರೆ ಕೃಷ್ಣ ಹೀಗೆಯೇ ಇದ್ದಾನೆ. ಧರ್ಮಕ್ಕಾಗಿಯೇ ತಾನು ಹೆಣಗಾಡುವುದು ಎಂಬುದನ್ನು ಹೆಜ್ಜೆಹೆಜ್ಜೆಗೂ ಕಾಣಿಸಿದ್ದಾನೆ. ಅವನೂ ಧರ್ಮವೇ ಮೈವೆತ್ತಿ ಬಂದಂತೆ ಇದ್ದಾನೆ ; 'ವಿಗ್ರಹವಾನ್ ಧರ್ಮಃ'. ಮಹಾಭಾರತದಲ್ಲಿ ಅಡ್ಡಾಡುವ ಜನರ ನಡುವೆ ಅವನಷ್ಟು ಸತ್ಪುರುಷನಾದ ಬೇರೊಬ್ಬನನ್ನು ಕಾಣಲಾರೆವು. ಭಗವದ್ಗೀತೆಯಲ್ಲಿ ಅವನಾಡುವ ಮಾತು ಅವನಿಗೂ ಅನ್ವಯಿಸಲಾರದೆ ?—

'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥'
(3,31)

ಅವನೇ ಕಪಟಿಯಾದರೆ, ವಂಚಕನಾದರೆ, ಲಂಪಟನಾದರೆ ಯಾವ ಆದರ್ಶ ವನ್ನು ಜನರೆದುರು ತೋರಿಸಿಯಾನು ?

ಇಲ್ಲಿ ಇನ್ನೊಂದು ದೃಷ್ಟಿಯೂ ಇದೆ. ಕೃಷ್ಣನನ್ನು ಭಗವಂತನ ಅವತಾರವೆಂದು ಎಣಿಸುವಾಗ, ಮತ್ಸ್ಯ, ಕೂರ್ಮ, ವರಾಹ, ನೃಸಿಂಹ ಗಳಂತೆ ಅಲ್ಲ ; ರಾಮನಂತೆ, ಬುದ್ಧನಂತೆ ಎನ್ನುವುದು. ಮನುಷ್ಯನಾಗಿ ಅವತಾರದ ತಾತ್ಪರ್ಯವನ್ನು ಮೂಡಿಸಿಕೊಂಡವನು ಕೃಷ್ಣ. ಭಗವಂತನ ಸಂಬಂಧವನ್ನು ಬಿಟ್ಟರೂ, ಅವನ ಮನುಷ್ಯತ್ವದಲ್ಲಿಯೇ ಒಂದು ವಿಶೇಷ ವಾದ ಕಳೆಯಿದೆ, ಲೋಕಕ್ಕೆ ಉಪಕಾರಕವಾದ ಪ್ರಯೋಜನವಿದೆ. ಭಗವ ದ್ಗೀತೆಯಲ್ಲೇ ಅವನ ಬಾಯಲ್ಲೇ ಬಂದಿರುವ ಇನ್ನೊಂದು ಮಾತನ್ನು ಗಮನಿಸಿ—

'ಯದ್ಯದ್ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ವಾ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂ'ಶಸಂಭವಂ ॥'
(10,41).

ಲೋಕದಲ್ಲಿ ಹಿರಿಮೆಯಿರುವುದು, ಸಂಪದ್ಯುಕ್ತವಾದುದು, ಊರ್ಜಿತ ವಾದುದು ಏನೇನಿದೆಯೋ ಅವೆಲ್ಲ ಭಗವಂತನ ತೇಜಸ್ಸಿನ ಅಂಶದಿಂದ ಒದಗಿದುದೇ ಎನ್ನುವುದು ಈ ಶ್ಲೋಕದ ತಾತ್ಪರ್ಯ. ಕೃಷ್ಣನ ಬದುಕನ್ನು ನೋಡಿದರೆ ಈ ಬಗೆಯ ದಿವ್ಯವಾದ ವಿಭೂತಿ ಅವನಿಗಿದ್ದಿತು. ಇದರಿಂದ ಅವನ ಮನುಷ್ಯತ್ವವೇನು ಮರೆಯಾಗಲಿಲ್ಲ ; ಆದರೆ ಸಾಮಾನ್ಯಮನುಷ್ಯರಿ ಗಿಂತ ಎಷ್ಟೋ ಮೇಲಿನ ನೆಲೆಯಲ್ಲಿ ಇರುವ ಸೌಲಭ್ಯ ಒದಗಿತು.

ಮನುಷ್ಯನಾಗಿಯೇ ಇದ್ದು, ಮಾನುಷವ್ಯವಹಾರಗಳಲ್ಲೇ ತೊಡ ಗಿರುತ್ತ, ಮನುಷ್ಯಸಾಧ್ಯವಾದುದನ್ನೇ ಮಾಡಿ ಮನುಷ್ಯರಲ್ಲೆಲ್ಲ ಶ್ರೇಷ್ಠ ನೆನಿಸಿಕೊಂಡವನು ಕೃಷ್ಣ. ಅವನ ಮನುಷ್ಯತ್ವವನ್ನು ಮಹಾಭಾರತ ಅವನ ಬಾಯಿಂದಲೇ ಹೊರಡಿಸಿದೆ—

'ಅಹಂ ಹಿ ತತ್ ಕರಿಷ್ಯಾಮಿ ಪರಂ ಪುರುಷಕಾರತಃ ।
ದೈವಂ ತು ನ ಮಯಾ ಶಕ್ಯಂ ಕರ್ಮ ಕರ್ತುಂ ಕಥಂಚನ ॥'
(ಉದ್ಯೋಗಪರ್ವ, 78)

ಎಂದರೆ, "ಮನುಷ್ಯ ಉತ್ತಮವಾದುದು ಏನನ್ನು ಮಾಡಬಹುದೋ ಅದನ್ನು ಪ್ರಯತ್ನದಿಂದ ಮಾಡುತ್ತೇನೆ. ದೈವ ಮಾಡಬಲ್ಲ ಕೆಲಸವನ್ನು ನಾನು ಏನೂ ಮಾಡಲಾರೆ !" ಕೃಷ್ಣನ ಅವತಾರದ ವಿಚಾರವನ್ನು

ಆಲೋಚನೆಮಾಡುವಾಗ ಈ ಮಾತನ್ನು ಮರೆಯಬಾರದು. ವಾಲ್ಮೀಕಿಗಳು ರಾಮನ ಬಾಯಿಂದಲೂ ಇದೇ ಮಾತನ್ನು ನುಡಿಸಿದ್ದಾರೆ—

'ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ ।'

ಹೀಗೆ ರಾಮನಾಗಲಿ ಕೃಷ್ಣನಾಗಲಿ ಮನುಷ್ಯಮಾತ್ರದವರೆಂಬ ವಿವರ ಮನದಟ್ಟಾಗದಿದ್ದರೆ ಅವರ ಆದರ್ಶವೇನೂ ಉಳಿಯಲಾರದು. ಅವತಾರದಲ್ಲಿ ಅತಿಮಾನುಷವ್ಯಾಪಾರವೇ ಮುಖ್ಯವಾದರೆ ಮನುಷ್ಯರಿಗೆ ಪ್ರೇರಣೆಯಾಗಲೀ ಸ್ಫೂರ್ತಿಯಾಗಲೀ ಒದಗುವುದು ಹೇಗೆ ? ಮಹಾಭಾರತದುದ್ದಕ್ಕೂ ಕೃಷ್ಣ ಮನುಷ್ಯನೇ. ಎಷ್ಟು ಪ್ರಕ್ಷಿಪ್ತಭಾಗಗಳು ಸೇರಿಕೊಂಡು ಬಂದರೂ ಈ ಭಾಗ ಅಳಿಸಿಹೋಗಿಲ್ಲ. ಪುರಾಣಕಾರರ ಕೈಕಟ್ಟಿದ್ದು ಇದೇ. ಇದನ್ನು ಅವರು ಕೂಡ ಕಡೆಗಣಿಸುವಂತಿರಲಿಲ್ಲ. ವಿಷ್ಣುಪುರಾಣದಲ್ಲಿ ಬಂದಿರುವ ಈ ಒಕ್ಕಣೆಯನ್ನು ನೋಡಿ—

'ಮನುಷ್ಯದೇಹಿನಾಂ ಚೇಷ್ಟಾಂ ಇತ್ಯೇವಮನುವರ್ತತೇ ।
ಲೀಲಾ ಜಗತ್ಪತೇಃ ತಸ್ಯ ಛಂದತಃ ಸಂಪ್ರವರ್ತತೇ ॥'

(ಐದನೆಯ ಅಂಶ, 22,81)

ಇಲ್ಲಿ ಕೃಷ್ಣ ಜಗತ್ಪತಿಯೂ ಹೌದು, ಮನುಷ್ಯದೇಹಿಯೂ ಹೌದು, ಅವನ ನಡವಳಿಕೆಗಳೆಲ್ಲ ಲೀಲೆಗಳು, ತನ್ನ ಸಂಕಲ್ಪಾನುಸಾರವಾಗಿಯೇ ಎಲ್ಲವನ್ನೂ ನಡೆಸುತ್ತಾನೆ. ಕೃಷ್ಣನು ಭಗವಂತನಾದರೆ ಶತ್ರುಗಳನ್ನು ಅಸ್ತ್ರಾದಿಗಳಿಂದ ಸೆಣಸಬೇಕಾದುದೇನು ? ಅವರೊಂದಿಗೆ ಕಾದಬೇಕಾದುದಿಯೇ ? ಕ್ಷಣಮಾತ್ರದಲ್ಲಿ ಎಲ್ಲರ ಹುಟ್ಟಡಗಿಸುವ ಶಕ್ತಿ ಇರುವವನಿಗೆ ಇವೆಲ್ಲ ಏನು ? ಎಂದು ಆಕ್ಷೇಪವನ್ನೆತ್ತುವವರಿಗೆ ಪುರಾಣದ ಸಮಾಧಾನ ಇದು. ಅವನ ಲೀಲೆ ಮನುಷ್ಯರ ಚೌಕಟ್ಟಿನಲ್ಲೇ ಆದುದರಿಂದ ಈ ನಾಟಕ ;ಈ ನಾಟಕವೂ ಅವನ ಇಚ್ಛೆಯಂತೆಯೇ ನಡೆಯುವುದು.' ಜಟ್ಟಿ ಜಾರಿಬಿದ್ದರೆ ಅದೂ ಒಂದು ಪಟ್ಟು' ಎನ್ನುವ ಗಾದೆಯಂತೆ ಈ ವಿವರಣೆ !

ಆದರೆ ಕೃಷ್ಣನ ಮನುಷ್ಯತ್ವವನ್ನು ಹೀಗೆ ನಿರಾಕರಣೆಮಾಡಿದ್ದರಿಂದ ಆಗುವ ಲಾಭವಾದರೂ ಏನು ? ಕೃಷ್ಣನ ಮೇಲೆ ಆದರ, ಗೌರವ, ಭಕ್ತಿಗಳು ಹೆಚ್ಚುವುವೆಂಬ ನಿರೀಕ್ಷೆಯೋ ? ಆದರೆ ಪುರಾಣಗಳನ್ನೋದಿ ಕೃಷ್ಣನ ವಿಚಾರ ತಿಳಿದುಕೊಂಡವರಿಗೆ ಕೃಷ್ಣನ ವಿಚಾರವಾಗಿ ಗೌರವ ಮೂಡುವುದು ಕಷ್ಟವೇ. ಮಹಾಭಾರತವನ್ನು ಅವಧಾನದಿಂದ ನೋಡುವವರಿಗೆ ಕೃಷ್ಣನನ್ನು ಕುರಿತು ಆದರ ಮೂಡಿಯೇ ಮೂಡುತ್ತದೆ. ಇದಕ್ಕೆ ಕಾರಣ ಅಲ್ಲಿ ಎದ್ದು ಕಾಣುವ ಕೃಷ್ಣನ ಮನುಷ್ಯತ್ವ.

ನಿದರ್ಶನವಾಗಿ, ಕೃಷ್ಣನು ಮಹಾಭಾರತಯುದ್ಧದಲ್ಲಿ ಪಾಲ್ಗೊಂಡ ಬಗೆಯನ್ನು ನೋಡಿ. ಎಂದಾಗಲೀ ಯುದ್ಧವನ್ನು ಮೆಚ್ಚಿಕೊಂಡವನಲ್ಲ ಕೃಷ್ಣ. ಯುದ್ಧದಿಂದ ನಿರಪರಾಧಿಗಳಾದ ಬಹುಜನರ ಸಾವು ಜರುಗುವುದು ಯಾರಿಗೆ ಹಿತ ? ದುಷ್ಟವ್ಯಕ್ತಿಯ ದಮನವಾಗಬೇಕಾದರೂ, ಸೇನೆಯನ್ನು ಅದರಲ್ಲಿ ತೊಡಗಿಸಬಾರದೆಂದೇ ಕಂಸವಧೆಯಲ್ಲಾಗಲೀ ಜರಾಸಂಧವಧೆಯಲ್ಲಾಗಲೀ ಕೃಷ್ಣನು ಏರ್ಪಡಿಸಿದ್ದು ಮಲ್ಲಯುದ್ಧವನ್ನಷ್ಟೆ. ಪ್ರಸಕ್ತರಾದ ಎದುರಾಳಿಗಳನ್ನು ಮೀರಿ ಇತರರಿಗೆ ಹಿಂಸೆ ನಡೆಯಬಾರದೆಂದು ಅವನ ಕಾತರ. ಮಹಾಭಾರತಯುದ್ಧವನ್ನು ತಡೆಯಲೆಂದೇ ವಿರಾಟನಗರದಲ್ಲಿ ಅವನು ಪಾಂಡವರಿಗೆ ಅರ್ಧರಾಜ್ಯ ದೊರಕಿದರೂ ಸಾಕೆಂದು ವಾದಿಸಿದ್ದು. ಸಂಧಾನಕ್ಕೆ ಕೃಷ್ಣನು ಕೊಟ್ಟ ಬೆಲೆ ಮಹತ್ವದ್ದು. ಕಡೆಯವರೆಗೂ ಸಂಧಾನವನ್ನೇ ಪ್ರಯತ್ನಿಸಿ, ಕಡೆಗೆ ಅದು ಸಾಧ್ಯವಿಲ್ಲವೆಂದು ಖಚಿತವಾದಾಗ ಅನಿವಾರ್ಯವಾದ ಯುದ್ಧಕ್ಕೆ ಒಡಂಬಟ್ಟ.

ಕಡೆಯ ಬಾರಿ ಸಂಧಾನಕ್ಕೆ ಕೌರವರ ಕಡೆ ಕೃಷ್ಣನು ಹೊರಟಾಗ, ಅವನು ಯುಧಿಷ್ಠಿರನಿಗೆ ಹೇಳಿದ ಮಾತು ಮನನೀಯವಾದುದು– 'ನಿನ್ನ ದೃಷ್ಟಿ ಧರ್ಮದಲ್ಲಿ, ಕೌರವರದ್ದು ವೈರದಲ್ಲಿ. ಯುದ್ಧವಿಲ್ಲದೆ ನಿನಗೆ ರಾಜ್ಯ ದೊರೆಯುವುದಾದರೆ ನನಗೆ ತುಂಬ ಸಮಾಧಾನ ('ಯದಯುದ್ಧೇನ ಲಭ್ಯೇತ ತನ್ಮೇ ಬಹುಮತಂ ಭವೇತ್', ಉದ್ಯೋಗಪರ್ವ, 73,2). ನಾನು ಕೌರವರ ಬಳಿ ಹೋಗಿ ಒಪ್ಪಂದಕ್ಕೆ ಪ್ರಯತ್ನಪಡುತ್ತೇನೆ ('ಯತಿಷ್ಯೇ ಪ್ರಶಮಂ ಕರ್ತುಂ', 36). ಆದರೆ ಯುದ್ಧವೇ ನಡೆಯಬೇಕಾದೀತೆಂದು ನನಗನಿಸುತ್ತದೆ. ನನಗೆ ಕಾಣುತ್ತಿರುವ ನಿಮಿತ್ತಗಳೆಲ್ಲ ಅದನ್ನೇ ಸೂಚಿಸುತ್ತಿವೆ (38)'. ಹೀಗೆ ಹೇಳಿದಮೇಲೂ ಭೀಮನು 'ಯುದ್ಧಕ್ಕಿಂತ ನನಗೆ ಶಾಂತಿಯೇ ಹೆಚ್ಚು ಪ್ರಿಯವಾದುದು. ಕೌರವರೂ ನಾವೂ ಸೋದರರು ತಾನೇ ? ಸೋದರರಲ್ಲಿ ಸೌಹಾರ್ದವಿರಬೇಕು ('ಭ್ರಾತೃಣಾಮಸ್ತು ಸೌಭ್ರಾತ್ರಂ', 74,22)' ಎನ್ನುತ್ತಾನೆ. ಯುಧಿಷ್ಠಿರನಿಗಂತೂ ಯುದ್ಧ ಬೇಡ ; ಅರ್ಜುನನೂ ಯುದ್ಧವನ್ನು ಬಯಸುವುದಿಲ್ಲ, ಅವನಲ್ಲಿ ದಯೆ ಹೆಚ್ಚಿನದು('ಅರ್ಜುನೋ ನೈವ ಯುದ್ಧಾರ್ಥೀ ಭೂಯಸೀ ದಯಾರ್ಜುನೇ', 23) ಎಂದು ಹೇಳುತ್ತಾನೆ. ಭಗವದ್ಗೀತೆಯಲ್ಲಿ ಬರುವ ಅರ್ಜುನವಿಷಾದಯೋಗದ ವಿವರಣೆ ಇಲ್ಲಿದೆ. ಅರ್ಜುನನಿಗೆ ಇದ್ದಕ್ಕಿದ್ದಂತೆ ಬಂದ ಯುದ್ಧವಿಮುಖತೆಯಲ್ಲ ಅದು. ಮೊದಲಿಂದಲೂ ಪಾಂಡವರು ಯುದ್ಧಕುತೂಹಲಿಗಳಲ್ಲ ; ಶಾಂತಿಪ್ರಿಯರು.

(6) ಯೋಗೇಶ್ವರನಾದ ಕೃಷ್ಣ

ಕೃಷ್ಣನೆಂಬುದು ಕೇವಲ ಕಲ್ಪನೆಯಂತೂ ಅಲ್ಲ; ಸ್ವಯಂ ಭಗವಂತನೇ ಎನ್ನುವ ಮಾತೂ ಸರಿಯಲ್ಲ. ಮನುಷ್ಯನೇ ಆಗಿದ್ದವನು; ಅವತಾರದ ಅಗತ್ಯವನ್ನೂ ಹಿರಿಮೆಯನ್ನೂ ತನ್ನಲ್ಲಿ ಮೂಡಿಸಿಕೊಂಡವನು. ಅವತಾರಪುರುಷನೆನ್ನಿ. ಅವನಲ್ಲಿ ಒದಗಿದ ದಿವ್ಯವಿಭೂತಿ ಹುಟ್ಟಿನಿಂದ ಬಂದುದಲ್ಲ. ಬಾಲಲೀಲೆಗಳ ಅದ್ಭುತ ಪ್ರಸಂಗ ಪೌರಾಣಿಕ ಸೃಷ್ಟಿಯೆಂದು ಮೊದಲೇ ಕಂಡೆವಷ್ಟೆ. ತಾರುಣ್ಯದಲ್ಲೇ ಗರ್ಗಾಚಾರ್ಯರ ಬಳಿ ದೀಕ್ಷೆಯನ್ನು ತಳೆದು ಸಾಂದೀಪಿನಿ ಋಷಿಯ (ಅಥವಾ ಘೋರ ಆಂಗಿರಸನ) ಶಿಷ್ಯನಾಗಿ ಅಧ್ಯಾತ್ಮದಲ್ಲಿ ಆಸಕ್ತಿಯನ್ನೂ ಪ್ರವೃತ್ತಿಯನ್ನೂ ಪಡೆದುಕೊಂಡನೆಂಬುದನ್ನು ನೆನಪಿನಲ್ಲಿರಿಸಿಕೊಳ್ಳಬೇಕು.

ಮತ್ತೆ, ಅವನು ದಿನನಿತ್ಯದ ಬದುಕಿನಲ್ಲಿ ಸಾಧನೆಯನ್ನೂ ಮಾಡುತ್ತಿದ್ದವನು. ಮಹಾಭಾರತದ ಶಾಂತಿಪರ್ವದಲ್ಲಿ (ರಾಜಧರ್ಮಾನುಶಾಸನ ಪರ್ವ, 46, 3–6) ಅವನು ಮುಂಜಾನೆ ಎದ್ದು ಧ್ಯಾನದಲ್ಲಿ ಕೂಡುತ್ತಿದ್ದ ವರ್ಣನೆಯಿದೆ. ಯುಧಿಷ್ಠಿರನು ಇದನ್ನು ಗಮನಿಸಿದ್ದವನು. ಬಹುಕಾಲದ ಮೇಲೆ, ತಡೆಯಲಾರದೆ ಅವನು ಮಾಡುವ ಧ್ಯಾನದ ತಾತ್ಪರ್ಯವೇನೆಂದು ಅವನನ್ನೇ ಕೇಳುತ್ತಾನೆ. ಶರೀರದ ಧಾರಣೆಗೆ ಒದಗುವ ಪಂಚಪ್ರಾಣಗಳನ್ನೂ ತಡೆಹಿಡಿದು, ಇಂದ್ರಿಯಗಳನ್ನು ನೆಮ್ಮದಿಯಿಂದ ಮನಸ್ಸಿನಲ್ಲಿ ಬೇರೂರಿಸಿ, ಮಾತನ್ನೂ ಮನಸ್ಸನ್ನೂ ಬುದ್ಧಿಯಲ್ಲಿ ಅಡಗಿಸಿ, ಬುದ್ಧಿಯನ್ನು ಸ್ಥಿರವಾಗಿ ನಿಲ್ಲಿಸುವ ಈ ಧ್ಯಾನಮಾರ್ಗದ ವರ್ಣನೆ ಇಲ್ಲಿ ಬರುತ್ತದೆ. ಗಾಳಿಯಿರದೆಡೆ ಇರಿಸಿದ ದೀಪ ನೆಲೆಗೊಂಡು ಬೆಳಗುತ್ತ ಉರಿಯುವಂತೆ ಧ್ಯಾನಮಗ್ನನಾದ ಕೃಷ್ಣ ಗೋಡೆಯಂತೆ, ಕಟ್ಟಿಗೆಯ ತುಂಡಿನಂತೆ, ಕಲ್ಲುಬಂಡೆಯಂತೆ ಅಲುಗಾಡದೆ ಕುಳಿತಿರುವುದನ್ನು ಯುಧಿಷ್ಠಿರ ಕಂಡಿದ್ದಾನೆ. ಅವನ ಮಾತುಗಳನ್ನೇ ಕೇಳಿ—

'ನಿಗೃಹೀತೋ ಹಿ ವಾಯುಸ್ತೇ ಪಂಚಕರ್ಮಾ ಶರೀರಗಃ।
ಇಂದ್ರಿಯಾಣಿ ಪ್ರಸನ್ನಾನಿ ಮನಸಿ ಸ್ಥಾಪಿತಾನಿ ತೇ॥

ವಾಕ್ ಚ ಸತ್ವಂ ಚ ಗೋವಿಂದ ಬುದ್ಧೌ ಸಂವೇಶಿತಾನಿ ತೇ ।
ಸರ್ವೇ ಚೈವ ಗುಣಾ ದೇವಾಃ ಕ್ಷೇತ್ರಜ್ಞೇ ತೇ ನಿವೇಶಿತಾಃ ॥
ನೇಂಗಂತಿ ತವ ರೋಮಾಣಿ ಸ್ಥಿರಾ ಬುದ್ಧಿಸ್ತಥಾ ಮನಃ ।
ಕಾಷ್ಠ-ಕುಡ್ಯ-ಶಿಲಾಭೂತೋ ನಿರೀಹಶ್ಚಾಸಿ ಮಾಧವ ॥
ಯಥಾ ದೀಪೋ ನಿವಾತಸ್ಥೋ ನಿರಿಂಗೋ ಜ್ವಲತೇ ಪುನಃ ।
ತಥಾಸಿ ಭಗವನ್ ದೇವ ಪಾಷಾಣ ಇವ ನಿಶ್ಚಲಃ ॥'

ಅನವರತವಾದ ಇಂಥ ಆಧ್ಯಾತ್ಮಿಕ ಸಾಧನೆಯಿಂದಲೇ ಮನುಷ್ಯ ಕೃಷ್ಣನು ಲೋಕೋತ್ತರವಾದ ಕಾರ್ಯವನ್ನು ಸಾಧಿಸುವುದಾದದ್ದು. ಋಗ್ವೇದದ ಋಷಿಯಾಗಿ, ಸಾತ್ತ್ವತಪಂಥದ ಪ್ರವರ್ತಕನಾಗಿ ಬದುಕಿ ಬಾಳಿದ ಕೃಷ್ಣ ಧರ್ಮಸಂಸ್ಥಾಪನೆಗಾಗಿ ಮಹಾಭಾರತದುದ್ಧಕ್ಕೂ ಹೆಣಗಾಡಿ, ಲೋಕಕ್ಕೆ ಉಪಕಾರಕವಾದ ಭಗವದ್ಗೀತೆಯನ್ನೂ ಹೊರಹೊಮ್ಮಿಸಿದ. ಭಗವದ್ಗೀತೆ ಲೋಕಕ್ಕೆ ದೊರೆತದ್ದು ಈ ಕೃಷ್ಣನ ಸಹಜ ವ್ಯವಹಾರದಲ್ಲಲ್ಲ. ತನ್ನ ಸಾಧನೆಯಿಂದ ಅಳವಡಿಸಿಕೊಂಡ ದಿವ್ಯವಿಭೂತಿ ಅವನ ಚೇತನವನ್ನು ಮೇಲೆತ್ತಿ ಬೆಳಗಿಸಿದಾಗ ಗೀತಾಶಾಸ್ತ್ರ ಕಾಣಿಸಿಕೊಂಡಿತು. ಅರ್ಜುನ ವಿಷಾದದ ಸಂದರ್ಭದಲ್ಲಿ ಕೃಷ್ಣನ ಚೇತನ ಹೀಗೆ ದಿವ್ಯ ವಿಭೂತಿಯ ವಶವಾಯಿತು ; 'ಯೋಗ-ಯುಕ್ತ'ನಾದ ಅವನು ಗೀತೆಯನ್ನು ಹೇಳುವುದಾಯಿತು.

ಇದು ಮಹಾಭಾರತದಲ್ಲೇ ಬರುವ ಪ್ರಸಂಗ. ಆಶ್ವಮೇಧಿಕಪರ್ವದಲ್ಲಿ ಅನುಗೀತಾಪರ್ವ ಮೊದಲಾಗುವಾಗ ಇದರ ಒಕ್ಕಣೆಯಿದೆ. ಭಾರತ ಯುದ್ಧವೆಲ್ಲ ಮುಗಿದು, ಪಾಂಡವರಿಗೆ ರಾಜ್ಯ ದೊರೆತು ಕೃಷ್ಣನು ತನ್ನ ಅವತಾರ ಕಾರ್ಯವನ್ನೂ ಮುಗಿಸಿ ದ್ವಾರಕೆಗೆ ಹಿಂದಿರುಗಬೇಕೆಂದು ನಿಶ್ಚಯಿಸಿದಾಗ ಅರ್ಜುನನು ಕೃಷ್ಣನನ್ನು ಕಂಡು "ಹಿಂದೆ, ನನ್ನಲ್ಲಿಯ ಸ್ನೇಹದಿಂದ ನನಗೆ ಗೀತಾಶಾಸ್ತ್ರವನ್ನು ನೀನು ಉಪದೇಶ ಮಾಡಿದೆ ; ಆದರೆ ನೆಲೆಯಿಲ್ಲದ ನನ್ನ ಮನಸ್ಸಿನಲ್ಲಿ ಅದು ಉಳಿಯಲಿಲ್ಲ. ಆದರೆ ಅದರ ತಾತ್ಪರ್ಯದ ವಿಚಾರವಾಗಿ ಕುತೂಹಲವೇನೋ ಮತ್ತೆ ಮತ್ತೆ ಒದಗುತ್ತಿದೆ. ಇನ್ನೊಮ್ಮೆ ಅದನ್ನು ಹೇಳು" ಎಂದು ಕೇಳುತ್ತಾನೆ—

'ಯತ್ತದ್ ಭಗವತಾ ಪ್ರೋಕ್ತಂ ಪುರಾ ಕೇಶವ ಸೌಹೃದಾತ್ ।
ತತ್ಸರ್ವಂ ಪುರುಷವ್ಯಾಘ್ರ ನಷ್ಟಂ ಮೇ ಭ್ರಷ್ಟಚೇತಸಃ ॥
ಮಮ ಕೌತೂಹಲಂ ತ್ವಸ್ತಿ ತೇಷ್ವರ್ಥೇಷು ಪುನಃ ಪುನಃ ।'

ಇದು ಕೃಷ್ಣನಿಗೆ ಕೊಂಚ ಬೇಸರಕ್ಕೆ ಕಾರಣವಾಗುತ್ತದೆ. "ಎಂಥ ತಿಳಿಗೇಡಿ ನೀನು ! ರಹಸ್ಯವಾದುದೆಂದು ಸನಾತನವಾದುದೆಂದು ಅದನ್ನು ನಾನು ನಿನಗೆ ತಿಳಿಸಿದಾಗ ಅದನ್ನು ಮನಸ್ಸಿಗೆ ತಂದುಕೊಳ್ಳದೆ ಕೈಬಿಟ್ಟೆಯಲ್ಲ ! ಈಗ ಮತ್ತೆ ನಾನು ಅದನ್ನು ಹಾಗೆಯೇ ಹೇಳಬಲ್ಲೆನೆ ? ಅದನ್ನು ಹೇಳುವಾಗ ಯಾವುದೋ ಯೋಗ ನನ್ನಲ್ಲಿ ಕೂಡಿಕೊಂಡಿದ್ದಿತು ; ಆಗ ಹೇಳುವುದಾಯಿತು, ಅಷ್ಟೆ !"

'ಶ್ರಾವಿತಸ್ತ್ವಂ ಮಯಾ ಗುಹ್ಯಂ ಜ್ಞಾಪಿತಶ್ಚ ಸನಾತನಂ ।
ಅಬುದ್ಧ್ಯಾ ನಾಗ್ರಹೀರ್ಯಸ್ತ್ವಂ ತನ್ಮೇ ಸುಮಹದಪ್ರಿಯಂ ॥
ನೂನಮಶ್ರದ್ದಧಾನೋಽಸಿ ದುರ್ಮೇಧಾಃ ಹ್ಯಸಿ ಪಾಂಡವ ।
ನ ಚ ಶಕ್ಯಂ ಪುನರ್ವಕ್ತುಂ ಅಶೇಷೇಣ ಧನಂಜಯ ॥
ಪರಂ ಹಿ ಬ್ರಹ್ಮ ಕಥಿತಂ ಯೋಗಯುಕ್ತೇನ ತನ್ಮಯಾ ।'

ಗೀತೆಯನ್ನು ಹೇಳುವ ಕಾಲಕ್ಕೆ, ಮನುಷ್ಯನಾಗಿದ್ದ ಕೃಷ್ಣ ಮನುಷ್ಯಮಾತ್ರದವನಾಗಿರಲಿಲ್ಲ. ಎಲ್ಲ ಮಾನವರ ಸ್ವಭಾವದ ಒಳಪದರದಲ್ಲಿ ಅಡಗಿರುವ ಪ್ರಜ್ಞೆಯೊಂದು ಮೇಲೆದ್ದು ಬಂದು, ಅವನ ತಾತ್ಕಾಲಿಕವಾದ ಅರಿವನ್ನು ಕೊಚ್ಚಿಸಿಕೊಂಡು ಹೋಗಿದ್ದಿತು. ಆಗ ಅವನು ದೇವಕೀಪುತ್ರನಾದ, ಅರ್ಜುನನ ಮಿತ್ರನಾದ, ಅವನ ರಥಕ್ಕೆ ಸಾರಥಿಯಾದ ಕೃಷ್ಣನಾಗಿರಲಿಲ್ಲ ; ವಿಶ್ವವ್ಯಾಪಕವಾದ ಪರಮಾರ್ಥತತ್ತ್ವದ ಪ್ರತಿನಿಧಿಯಾಗಿದ್ದ. ವೃಷ್ಣಿವಂಶದ ಕೃಷ್ಣನೂ ಅವನೇ, ಪಾಂಡವನಾದ ಅರ್ಜುನನೂ ಅವನೇ ; ಬೆಳಗುವ ಸೂರ್ಯನೂ ಅವನೇ ; ನಕ್ಷತ್ರಗಳಿಗೆ ಒಡೆಯನಾದ ಚಂದ್ರನೂ ಅವನೇ ; ವೇದವೂ ಅವನೇ ; ಇಂದ್ರನೂ ಅವನೇ ; ಇಂದ್ರಿಯಗಳಲ್ಲಿ ಮನಸ್ಸು ಅವನೇ ; ಪ್ರಾಣಿಗಳಲ್ಲಿ ಚೈತನ್ಯ ಅವನೇ ; ಎಲ್ಲ ವಿವರಗಳಲ್ಲಿ ಅತ್ಯುತ್ತಮನಾದವನು ಅವನೇ ; ಕಾಲವೂ ಅವನೇ ; ನಿಯಾಮಕನೂ ಅವನೇ. ಅವನನ್ನು ಬಿಟ್ಟು ಯಾವ ಪ್ರಾಣಿಯೂ ಬದುಕಲಾರದು, ಯಾವ ಪದಾರ್ಥವೂ ಇರಲಾರದು. ಅವನ ವಿಭೂತಿಗಳಿಗೆ ಕೊನೆಮೊದಲಿಲ್ಲ. ತನ್ನ ಒಂದಂಶದಿಂದ ಇಡೀ ವಿಶ್ವವನ್ನೇ ವ್ಯವಸ್ಥೆಮಾಡಿ ನಿಂತಿರುವ ತತ್ತ್ವ ಅವನು. ಗೀತೆಯ ಕೃಷ್ಣನನ್ನು ನಾವು ಕಾಣುವುದು ಈ ಪ್ರಜ್ಞೆಯ ನೆಲೆಯಲ್ಲಿ.

ಈ ನೆಲೆಯಲ್ಲಿರುವಾಗ ಅವನು ಮನುಷ್ಯನೂ ಅಲ್ಲ, ಅವತಾರವೂ ಅಲ್ಲ, 'ಭಗವಾನ್ ಸ್ವಯಂ'. ಹಾಗೆಂದೇ ಆಗ 'ಮದ್ಯಾಜೀ ಭವ', 'ಮಾಂ ನಮಸ್ಕುರು', 'ಮಾಮನುಸ್ಮರ', 'ಮಾಮೇಕಂ ಶರಣಂ ವ್ರಜ' ಎಂದು

ಮುಂತಾದ ಮಾತಿನ ಧೋರಣೆಯಿರುವುದು. ಈ ನೆಲೆಯಲ್ಲಿರುವ ಯಾರಾದರೂ ಈ ಮಾತುಗಳನ್ನಾಡಬಹುದು ; ಮಾತು ಆಡಂಬರವಾಗುವುದಿಲ್ಲ, ಅಟ್ಟಹಾಸವಾಗುವುದಿಲ್ಲ, ಸಲ್ಲದ ಅಭಿಮಾನವಾಗುವುದಿಲ್ಲ. ಎಲ್ಲರಲ್ಲಿಯೂ ಒಂದೇ ತೆರನಾಗಿರುವ ಮೂಲತತ್ತ್ವ ಬಾಯ್ದೆರೆದು ಮಾತನಾಡುವುದಾದರೆ ಇಂಥ ಮಾತೇ ಹೊರಡುವುದು.

ಮನುಷ್ಯನು ಹೀಗೆ 'ಯೋಗಯುಕ್ತ' ನಾಗಿರುವಾಗ (ಭಗವದ್ಗೀತೆ, 4,29ರಲ್ಲಿಯೂ ಈ ಮಾತಿದೆ) ಪರತತ್ತ್ವದೊಂದಿಗೆ ತನ್ನನ್ನು ಸಮೀಕರಣ ಮಾಡಿಕೊಳ್ಳುವುದು ವೈದಿಕಸಾಹಿತ್ಯದಲ್ಲಿ ಹೊಸದಲ್ಲ. ಋಗ್ವೇದದ ನಾಲ್ಕನೆಯ ಮಂಡಲದಲ್ಲಿ (26ನೆಯ ಸೂಕ್ತ) ವಾಮದೇವನೆಂಬ ಋಷಿಯು "ನಾನು ಪ್ರಜಾಪತಿಯಾಗಿದ್ದವನು, ಜಗತ್ತಿಗೆ ಕಣ್ಣಾದ ಸೂರ್ಯನೂ ನಾನೇ,... ನನ್ನನ್ನು ನೋಡಿರಿ ! ಆರ್ಯನಿಗೆ ನಾನೇ ಭೂಮಿಯನ್ನು ಇತ್ತಿರುವೆ, ಮನುಷ್ಯರಿಗಾಗಿ ಮಳೆಗರೆಯುವೆ, ಹರಿಯುವ ನದಿಗಳನ್ನು ಎಲ್ಲೆಲ್ಲೂ ಹರಡಿರುವೆ. ಅಗ್ನಿಯೇ ಮೊದಲಾದ ಎಲ್ಲ ದೇವತೆಗಳೂ ನನ್ನ ಅಪ್ಪಣೆಗೆ ತಲೆಬಾಗುವವರೇ"ಎಂದು ಮುಂತಾಗಿ ಹೇಳಿಕೊಂಡಿರುವಾಗ 'ಯೋಗಯುಕ್ತ'ವಾದ ನೆಲೆಯೇ ಗೋಚರಿಸಬೇಕು—

> 'ಅಹಂ ಮನುರಭವಂ ಸೂರ್ಯಶ್ಚಾಹಂ ।
> ... ..., ಪಶ್ಯತಾ ಮಾ ॥
> ಅಹಂ ಭೂಮಿಮದದಾಂ ಆರ್ಯಾಯಾಹಂ ವೃಷ್ಟಿಂ ದಾಶುಷೇ ಮರ್ತ್ಯಾಯ
> ಅಹಮಾಪೋ ಅನಯಂ ವಾವಶಾನಾ ಮಮ ದೇವಾಸೋ ಅನು ಕೇತಮಾಯನ್ ।'

ಶಂಕರಾಚಾರ್ಯರು ಇದನ್ನು 'ಆರ್ಷದರ್ಶನ'ವೆಂದು ಕರೆದಿದ್ದಾರೆ ; ಎಂದರೆ ಋಷಿಗೆ ಸಹಜವಾದ ಕಾಣ್ಕೆ. ಶಾಸ್ತ್ರಕ್ಕೆ ಅನುಗುಣವಾಗಿ ತನ್ನನ್ನು ಪರಮಾತ್ಮನೆಂದೇ ಕಂಡುಕೊಂಡು, ಇತರರಿಗೆ ಉಪದೇಶವನ್ನು ಮಾಡುವಾಗ, ಈ ಕಾಣ್ಕೆಯೇ ಮುಖ್ಯವಾಗಿ 'ನನ್ನನ್ನೇ ತಿಳಿಯಬೇಕು' ಎಂಬ ಅನುಭವವನ್ನೇ ಋಷಿಯು ಅವಲಂಬಿಸುತ್ತಾನೆ (ವೇದಾಂತಸೂತ್ರ, 1,5,28–31 ; "ದೇವತಾತ್ಮಾ ಸ್ವಮಾತ್ಮಾನಂ ಪರಮಾತ್ಮತ್ವೇನ 'ಅಹಮೇವ ಪರಂಬ್ರಹ್ಮ' ಇತಿ ಆರ್ಷೇಣ ದರ್ಶನೇನ ಯಥಾಶಾಸ್ತ್ರಂ ಪಶ್ಯನ್ ಉಪದಿಶತಿಸ್ಮ 'ಮಾಮೇವ ವಿಜಾನೀಹಿ' ಇತಿ"). ಉಪಾಸಕನು ತಾನು ಉಪಾಸನೆಮಾಡುವ ದೇವತೆಯೇ ಆಗಿ ಈ ಕಾಣ್ಕೆಯನ್ನು ಪಡೆಯುವ

ನೆಂದು ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಹೇಳಿದೆ (1,4,10 'ತದ್ಯೋಯೋ ದೇವಾನಾಂ ಪ್ರತ್ಯಬುಧ್ಯತ ಸ ಏವ ತದ್‌ಭವತಿ').

ಭಾಗವತದಲ್ಲಿಯೂ (7,21) ಕಪಿಲಮುನಿಯು ತನ್ನ ತಾಯಿಗೆ "ಎಲ್ಲ ಪ್ರಾಣಿಗಳಲ್ಲಿಯೂ ಇರುವ ಆತ್ಮನೇ ನಾನು ; ಇದನ್ನು ತಿಳಿಯದೆ ನನ್ನನ್ನು ಕಡೆಗಣಿಸಿ ಮನುಷ್ಯನು ಬೇರೆ ಮೂರ್ತಿಗಳನ್ನು ಬರಿದೆ ಪೂಜಿಸು ತ್ತಾನಲ್ಲ !" ಎಂದು ಹೇಳುವಾಗಲೂ ಇದು ಬ್ರಾಹ್ಮೀಸ್ಥಿತಿಯೆಂದೇ ಪರಿಗಣಿಸಬೇಕು —

'ಅಹಂ ಸರ್ವೇಷು ಭೂತೇಷು ಭೂತಾತ್ಮಾವಸ್ಥಿತಃ ಸದಾ ।
ತಮವಜ್ಞಾಯ ಮಾಂ ಮರ್ತ್ಯಃ ಕುರುತೇಽರ್ಚಾವಿಡಂಬನಂ ॥'

ಕೃಷ್ಣನು ಭಗವದ್ಗೀತೆಯಲ್ಲಿ (4,29) ಈ ಕಾಣ್ಕೆಯ ನೆಲೆಯನ್ನು ವಿವರಿಸಿಯೂ ಇದ್ದಾನೆ. 'ಯೋಗಯುಕ್ತ'ನಾದವನು ತನ್ನನ್ನು ಎಲ್ಲ ಪ್ರಾಣಿಗಳಲ್ಲಿಯೂ ಇರುವವನೆಂದೂ, ಎಲ್ಲ ಪ್ರಾಣಿಗಳಲ್ಲಿಯೂ ತಾನೇ ಇರುವನೆಂದೂ ಕಂಡುಕೊಂಡು ಎಲ್ಲೆಡೆಯೂ ಒಂದೇ ಬಗೆಯಾಗಿ ಕಾಣುತ್ತಾನೆ—

'ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ ॥'

ಇಲ್ಲಿ ಬಂದಿರುವ 'ಯೋಗಯುಕ್ತ'ನೆಂಬ ಸ್ಥಿತಿಯನ್ನೇ ಆಶ್ವಮೇಧಿಕ ಪರ್ವದಲ್ಲಿ ಅನುಗೀತೆಯ ಸಂದರ್ಭದಲ್ಲಿ 'ಪರಂ ಹಿ ಬ್ರಹ್ಮ ಕಥಿತಂ ಯೋಗಯುಕ್ತೇನ ತನ್ಮಯಾ' ಎಂದು ಸೂಚಿಸಿರುವುದೆಂದು ಹಿಂದೆಯೇ ಹೇಳಲಾಯಿತಷ್ಟೆ. ಭಗವದ್ಗೀತೆಯಲ್ಲಿ ಈ 'ಯೋಗಯುಕ್ತ' ಸ್ಥಿತಿಯನ್ನು ಪಡೆಯಲು ಬೇಕಾದ ಸಾಧನೆಯ ವಿವರವನ್ನೂ ಹೇಳಿದೆ. ಎಡೆಬಿಡದ ಏಕಾಗ್ರತೆಯಿಂದ ಕೂಡಿದ ಬುದ್ಧಿಯಿಂದ ಮೆಲ್ಲಮೆಲ್ಲನೆ ಮನಸ್ಸನ್ನು ಕದಲದಂತೆ ಆತ್ಮನಲ್ಲೇ ನೆಲೆಸಿ ನೆಮ್ಮದಿಗೊಳಿಸಬೇಕು ; ಮನಸ್ಸು ಏನನ್ನಾಗಲೀ ಆಲೋಚಿಸದಿರುವಂತೆ ಮಾಡಬೇಕು. ಹೀಗೆ ಯೋಗದಿಂದ ಚಿತ್ತದ ನಿರೋಧವಾದರೆ ಆತ್ಮನನ್ನು ಆತ್ಮನಿಂದಲೇ ಕಾಣುತ್ತಾನೆ ; ಆತ್ಮನಲ್ಲೇ ತೃಪ್ತಿಯನ್ನು ಪಡೆಯುತ್ತಾನೆ. ಇದನ್ನು ಪಡೆದವನು ಇನ್ನಾವ ಲಾಭವನ್ನೂ ಹೆಚ್ಚಿನದೆಂದು ಭಾವಿಸಲಾರ. ಅದರಲ್ಲಿ ನೆಲೆಸಿದ್ದವನು, ಎಂಥ ದೊಡ್ಡ ಕಷ್ಟವಾಗಲಿ ಅದರಿಂದ ಎದೆಗುಂದುವುದಿಲ್ಲ—

'ಶನೈಃಶನೈರುಪರಮೇದ್ ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥
ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।

ಯತ್ರ ಚೈವಾತ್ಮನಾತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥
ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥'
(6.25,20,22)

ಇದನ್ನು 'ಬ್ರಹ್ಮಸಂಸ್ಪರ್ಶ'ವೆಂದು ಗೀತೆಯಲ್ಲಿ ಕರೆದಿದೆ (28). ಎಂದರೆ ಬ್ರಹ್ಮವನ್ನು ಮುಟ್ಟುವುದು. ವ್ಯಕ್ತಿಯು ತನ್ನ ದೈಹಿಕ, ಮಾನಸಿಕ, ಕೌಟುಂಬಿಕ, ಸಾಮಾಜಿಕ ಕಟ್ಟುಪಾಡುಗಳನ್ನೆಲ್ಲ ಕಳಚಿ ವಿಶಾಲವಿಶ್ವದ ಮೂಲಭೂತವಾದ ತತ್ತ್ವವನ್ನು ತನ್ನ ಅಂತರಾಳದೊಳಗೇ ಅರಿತು ಕೊಳ್ಳುವುದು, ಅನುಭವಿಸುವುದು. ಅರ್ಜುನನಿಗೆ ಕೃಷ್ಣನು ತೋರಿಸಿದ 'ವಿಶ್ವರೂಪ'ದ ಅರ್ಥವೂ ಇದೇ. ಆದರೆ ಅದೊಂದು ರಸಮಯವಾದ ರೂಪಕವಾಯಿತು. ಕೃಷ್ಣನು ತಾನು ಬದುಕಿನುದ್ದಕ್ಕೂ ಅಭ್ಯಾಸ ಮಾಡಿದ ಯೋಗದ, ತಪಸ್ಸಿನ ನೆರವಿನಿಂದ ಪಡೆದುಕೊಂಡ ಕಾಣ್ಕೆಯನ್ನು, 'ಬ್ರಹ್ಮಸಂಸ್ಪರ್ಶ'ವನ್ನು, ಅರ್ಜುನನು ಈ ಯೋಗದ ಬಲವಿಲ್ಲದೆ, ಕೃಷ್ಣನ ಮಾಧ್ಯಮದಿಂದಲೇ, ಕ್ಷಣಕಾಲ ಪಡೆದುಕೊಂಡ. ಆದರೆ ಕ್ಷಣ ಕಾಲವಷ್ಟೆ ; ಅದು ತೋರಿ ಮರೆಯಾಯಿತು. ಅಷ್ಟರಲ್ಲೇ ಅರ್ಜುನನಿಗೆ ಅದನ್ನು ತಡೆದುಕೊಳ್ಳುವುದಾಗಲಿಲ್ಲ. ಕೃಷ್ಣನಿಗೆ ಅದು ಒದಗಿಸಿದ್ದುದು ನೆಮ್ಮದಿಯನ್ನು ; ಆದರೆ ಅರ್ಜುನನಿಗೆ ಅದರಿಂದ ಆದದ್ದು ಉದ್ವೇಗ, ರೋಮಾಂಚ !

ಕೃಷ್ಣನು ನೂರಇಪ್ಪತ್ತೈದು ವರ್ಷಗಳು ಬದುಕಿದ್ದನೆಂದು ವಿಷ್ಣು ಪುರಾಣದಲ್ಲಿ ಒಕ್ಕಣೆಯಿದೆ. ನೂರಕ್ಕಿಂತ ಹೆಚ್ಚು ವರ್ಷಗಳು ಬದುಕಿದ್ದ ನೆಂದು ಇತರ ಆಕರಗಳಲ್ಲಿಯೂ ವಿವರವಿದೆ. ಅವನ ಕಡೆಗಾಲವನ್ನು ದ್ವಾರಕೆಯಲ್ಲೇ ಕಳೆದ ವಿಚಾರವೂ ಇದೆ. ಬಲರಾಮನೂ ಅವನೊಂದಿಗೇ ಇರುತ್ತಿದ್ದವನು. ಮೊದಲಿನಿಂದ ಕಡೆಯವರೆಗೂ ಈ ಇಬ್ಬರು ಸೋದ ರರು ಅನ್ಯಾದೃಶವಾದ ಸ್ನೇಹದಿಂದ, ಅಪರಿಮಿತವಾದ ಪ್ರೀತಿಯಿಂದ ನಡೆದುಕೊಂಡರು. ಮಹಾಭಾರತದಲ್ಲಿ ಯಾವುದೇ ಪ್ರಸಂಗವಾಗಲಿ, ಕೃಷ್ಣನಿದ್ದಲ್ಲಿ ಬಲರಾಮ ಇರುವವನೇ. ಹಾಗೆಂದೇ ಇತಿಹಾಸವು ಅವರನ್ನು 'ರಾಮಕೃಷ್ಣ'ರೆಂದು ಅಡಿಗಡಿಗೆ ಜೋಡಿಯಾಗಿಯೇ ಎಣಿಸುತ್ತದೆ. ಕೃಷ್ಣ ನನ್ನು ಬಿಟ್ಟು ಒಂದು ಗಳಿಗೆಯೂ ಇರಲಾರೆನೆಂದು ಬಲರಾಮನೇ ಹೇಳಿದ ಮಾತನ್ನು ಹಿಂದೆಯೇ ಉಲ್ಲೇಖಿಸಿದ್ದೇನೆ. ಕಡೆಗಾಲದವರೆಗೂ ಅವರ ಸ್ನೇಹ ಉಳಿಯಿತು. ಬಲರಾಮ ತೀರಿಕೊಂಡ ಮೇಲೆ ಕೃಷ್ಣ ಬಹುಕಾಲ

ಉಳಿಯಲಿಲ್ಲ. ಇಂಥ ಸೋದರರ ನಡುವೆಯೂ ವಿಷ್ಣುಪುರಾಣ (4,13, 66–101) ವಿರಸವನ್ನು ತಂದೊಡ್ಡಿತು! ಸ್ಯಮಂತಕಮಣಿಯ ಕಟ್ಟು ಕಥೆಯನ್ನು ಸಂದರ್ಭವಾಗಿರಿಸಿಕೊಂಡು ಬಲರಾಮನು ಕೃಷ್ಣನೊಂದಿಗೆ ಕಾದಾಡಿದುದನ್ನು ಈ ಪುರಾಣ ಹುಟ್ಟುಹಾಕಿದೆ. ಬೇರೆಲ್ಲಿಯೂ ರಾಮ–ಕೃಷ್ಣರು ಸೆಣಸಿದುದಿಲ್ಲ.

ರಾಮಾಯಣದ ರಾಮಲಕ್ಷ್ಮಣರಂತೆ ಮಹಾಭಾರತದಲ್ಲಿ ರಾಮ–ಕೃಷ್ಣರು. ಎರಡೂ ಸಂದರ್ಭಗಳಲ್ಲಿ ರಾಮನೇ ಅಣ್ಣ, ಅಲ್ಲಿ ದಾಶರಥಿ ರಾಮ, ಇಲ್ಲಿ ಬಲರಾಮ. ಆದರೆ ವಿಷ್ಣುವಿನ ಅವತಾರವಾಗಿ ಅಲ್ಲಿ ರಾಮ, ಇಲ್ಲಿ ಕೃಷ್ಣ. ಅಲ್ಲಿ ಲಕ್ಷ್ಮಣ ಶೇಷಾವತಾರ, ಇಲ್ಲಿ ಬಲರಾಮ ಶೇಷಾವತಾರ. ಎರಡೂ ಕಡೆ ಅಣ್ಣನಿಗೆ ತಮ್ಮ ವಿಧೇಯನಾಗಿಯೇ ನಡೆದುಕೊಳ್ಳುತ್ತಾನೆನ್ನಿ. ಅವತಾರಗಳ ತಾರತಮ್ಯ ಇದಕ್ಕೇನು ಅಡ್ಡಿಯೊಡ್ಡುವುದಿಲ್ಲ.

ಅಂತೂ ಮಹಾಭಾರತಯುದ್ಧವೆಲ್ಲ ಮುಗಿದು, ಯುಧಿಷ್ಠಿರನ ಅಶ್ವಮೇಧಯಾಗವೂ ನಡೆದು ರಾಮ–ಕೃಷ್ಣರು ದ್ವಾರಕೆಗೆ ಹಿಂದಿರುಗಿದಮೇಲೆ, ಯಾದವರಲ್ಲಿ ಸುರಾಪಾನ ಹೆಚ್ಚಿ, ಅವರಲ್ಲೇ ಒಡಕು ತೋರಿಕೊಂಡು ಹಗರಣವಾಗಿ ಇಡೀ ಯಾದವವಂಶದ ನಾಶವಾಗುತ್ತದೆ. ದ್ವಾರಕೆಯ ಹೊರಗೆ ಅರಳೀಮರದಡಿಯಲ್ಲಿ ಬಲರಾಮ ಯೋಗಸಮಾಧಿಯಲ್ಲಿ ಕೂತು ಪ್ರಾಣಬಿಟ್ಟ. ಇದರ ವಿವರ ಭಾಗವತದಲ್ಲಿ (11, 30, 26) ಬಂದಿದೆ. ಅಣ್ಣನನ್ನು ಹುಡುಕಿಕೊಂಡುಬಂದ ಕೃಷ್ಣನು ಇದನ್ನು ಕಂಡು ತಾನೂ ದೇಹತ್ಯಾಗಮಾಡುವ ಸಮಯ ಬಂತೆಂದು, ಹತ್ತಿರದಲ್ಲೇ ಇದ್ದ ಮರವೊಂದರ ಅಡಿಯಲ್ಲಿ ಮಲಗಿದನೆಂದೂ, ಜರೆಯೆಂಬ ಬೇಡನೊಬ್ಬನು ಅವನ ಕಾಲುಗಳನ್ನು ಮಾತ್ರ ಕಂಡು ಅದೊಂದು ಜಿಂಕೆಯಿದ್ದೀತೆಂಬ ಭ್ರಮೆಯಿಂದ ಬಾಣಬಿಟ್ಟು ಹೊಡೆದನೆಂದೂ, ಅನಂತರ ತನ್ನ ತಪ್ಪನ್ನು ತಿಳಿದು ಕೃಷ್ಣನಲ್ಲಿ ಕ್ಷಮೆಬೇಡಿದನೆಂದೂ, ಕೃಷ್ಣನು ಅವನನ್ನು ಮನ್ನಿಸಿ ಸಂತೈಸಿ ಕಳುಹಿಸಿ ತಾನೂ ಪ್ರಾಣಬಿಟ್ಟನೆಂದೂ ಕಥೆಯಿದೆ. ಜರೆಯೆನ್ನುವುದು ಬೇಡನ ಹೆಸರೋ? ಅಥವಾ ಮುಪ್ಪಿಗೇ ಮೈದುಂಬಿಸಿ ಹೀಗೆ ಹೇಳಿದರೋ?

ಮಹಾಭಾರತದ ಮೌಸಲಪರ್ವದಲ್ಲೂ ಈ ವೃತ್ತಾಂತದ ಸಂಗ್ರಹ ನಿರೂಪಣೆಯಿದೆ. ಭೋಜ, ವೃಷ್ಣಿ, ಅಂಧಕ, ಕೌಕುರ ಈ ಎಲ್ಲ ವಂಶದ ವಿನಾಶವಾದಾಗ ಬಲರಾಮನು ಕಾಡಿನ ನಡುವೆ ಒಬ್ಬನೇ ಕೂತು ಚಿಂತನೆಯಲ್ಲಿ ತೊಡಗಿ ಯೋಗಯುಕ್ತನಾಗಿ ಪ್ರಾಣಬಿಟ್ಟುದನ್ನು ಕೃಷ್ಣನು ಕಂಡ ವಿವರವೂ, ಹಾಗೆ ಕಂಡ ಕೃಷ್ಣನು ಶೂನ್ಯಮನಸ್ಕನಾಗಿ ಒಬ್ಬನೇ ಕಾಡಿನಲ್ಲಿ

ಕೊಂಚಹೊತ್ತು ಅಲೆದಾಡಿ ಅನಂತರ ನೆಲದ ಮೇಲೆ ಮಲಗಿ, ಆವರೆಗೆ ನಡೆದುಹೋದ ತನ್ನ ವಂಶದ ವಿನಾಶವನ್ನೂ ಕುರುವಂಶದ ಕ್ಷಯವನ್ನೂ ಕುರಿತು ಚಿಂತಿಸುತ್ತ, ಸಂಕ್ರಮಣದ ಕಾಲ ಬಂತೆಂದು, ಇಂದ್ರಿಯ ನಿರೋಧ ಮಾಡಿದ ವಿವರವೂ ಅಲ್ಲಿದೆ (4,12–20). ಕೃಷ್ಣನು ಮರಣಕ್ಕೆ ಮೊದಲು ಯೋಗಸಮಾಧಿಯಲ್ಲಿ ತೊಡಗಿದುದು ಅಲ್ಲಿ ಹೀಗೆ ಬಂದಿದೆ, (4.21)—

'ಸ ಸಂನಿರುದ್ಧೇಂದ್ರಿಯವಾಙ್ಮನಾಸ್ತು
ಶಿಶ್ಯೇ ಮಹಾಯೋಗಮುಪೇತ್ಯ ಕೃಷ್ಣಃ ॥'

ಮುಂದೆ ಜರಾವ್ಯಾಧ ಅವನನ್ನು ಹೊಡೆದದ್ದನ್ನೂ ಹೇಳಿ, ಕಡೆಯಲ್ಲಿ ಕೃಷ್ಣನು ಮಹಾತ್ಮನಾದ 'ಯೋಗಾಚಾರ್ಯ' ನಾಗಿಯೇ ತೀರಿಕೊಂಡ ದ್ದನ್ನು ಸೂಚಿಸಿದೆ (26)—

'ತತೋ ರಾಜನ್ ಭಗವಾನ್ ಉಗ್ರತೇಜಾ
ನಾರಾಯಣಃ ಪ್ರಭವಶ್ಚಾವ್ಯಯಶ್ಚ ।
ಯೋಗಾಚಾರ್ಯೋ ರೋದಸೀ ವ್ಯಾಪ್ಯ ಲಕ್ಷ್ಮ್ಯಾ
ಸ್ಥಾನಂ ಪ್ರಾಪ ಸ್ವಂ ಮಹಾತ್ಮಾಪ್ರಮೇಯಂ ॥'

ಹೀಗೆ ಬಲರಾಮ, ಕೃಷ್ಣರು ತೀರಿಕೊಂಡಾಗ ಹತ್ತಿರ ಯಾರೂ ಇರ ಲಿಲ್ಲ ; ಅವರ ವಂಶವೆಲ್ಲ ನಿರ್ಮೂಲವಾಗಿದ್ದಿತು. ಬಲರಾಮನನ್ನು ಹುಡುಕುತ್ತ ಕೃಷ್ಣನು ಬರುವಾಗ ಅವನೊಂದಿಗೆ ದಾರುಕನೂ ಬಭ್ರುವೂ ಇದ್ದರು. ಮರದಡಿಯಲ್ಲಿ ಕುಳಿತಿದ್ದ ಬಲರಾಮ ಇನ್ನೂ ಜೀವಂತ ನಾಗಿದ್ದ ; ಆದರೆ ಅವನ ಅರಿವು ಹೊರಗೆ ಯಾತರ ಮೇಲೂ ಇರಲಿಲ್ಲ. ಇದನ್ನು ಕಂಡು ಕೃಷ್ಣನು ಪಾಂಡವರಿಗೆ ಸುದ್ದಿ ತಿಳಿಸುವುದಕ್ಕಾಗಿ ದಾರುಕ ನನ್ನು ಕಳುಹಿಸಿದ ; ದಸ್ಯುಗಳು ದ್ವಾರಕೆಯ ಮೇಲೆರಗಿ ಬರುವ ಸಂಭವ ವಿದ್ದಿತಾಗಿ, ಹೆಂಗಳೆಯರನ್ನು ಸುರಕ್ಷಿತವಾದ ಸ್ಥಳಕ್ಕೆ ಒಯ್ಯುವಂತೆ ಹೇಳಿ ಬಭ್ರುವನ್ನೂ ಕಳುಹಿಸಿದ. ಆದರೆ ಹೊರಟ ಬಭ್ರುವಿಗೆ ಇದ್ದಕ್ಕಿದ್ದಂತೆ ಮುಸಲದ ಪೆಟ್ಟಿನಿಂದ ಸಾವು ಸಂಭವಿಸಿತು. ಕೃಷ್ಣನು ಹೆಂಗಳೆಯರ ಯೋಗಕ್ಷೇಮವನ್ನು ತನ್ನ ತಂದೆಗೆ ವಹಿಸಿಬರಲು ತಾನೇ ದ್ವಾರಕೆಗೆ ಹೋಗಿ, ತನ್ನ ತಂದೆಯ ಮುಂದೆ "ಯದುಗಳ ನಾಶವಾಯಿತು, ಕುರುಗಳು ಹೆಸ ರಿಲ್ಲದೆ ಅಳಿಸಿಹೋದರು, ಈ ಹಾಳು ರಾಜ್ಯವನ್ನು ಇನ್ನು ನೋಡಲಾರೆ ! ಬಲರಾಮನೊಂದಿಗೆ ನಾನೂ ಕಾಡಿಗೆ ಹೋಗಿ ತಪಸ್ಸುಮಾಡುತ್ತೇನೆ"—

'ತಪಶ್ಚರಿಷ್ಯಾಮಿ ನಿಬೋಧ ತನ್ಮೇ
ರಾಮೇಣ ಸಾರ್ಧಂ ವನಮಭ್ಯುಪೇತ್ಯ ॥'

(ಮೌಸಲಪರ್ವ, 4,10)

ಹೀಗೆಂದು ಹೇಳಿ ತಂದೆಯ ಕಾಲುಮುಟ್ಟಿ ನಮಸ್ಕರಿಸಿ, ಬಲರಾಮನಿದ್ದಲ್ಲಿಗೆ ಬರುತ್ತಾನೆ. ಅಷ್ಟರಲ್ಲಿ ಬಲರಾಮನ ನಿರ್ಯಾಣವಾಗಿರುತ್ತದೆ. ಬಲರಾಮನಿಲ್ಲದೆ ತಪಸ್ಸು ಎಂಥದು ? ತಪಸ್ಸಿನ ಯೋಚನೆಯನ್ನೂ ಬಿಟ್ಟು, ಕೃಷ್ಣನು ಯೋಗದಿಂದ ದೇಹತ್ಯಾಗಮಾಡುತ್ತಾನೆ.

ಅನಂತರವೇ ಅರ್ಜುನನು ದಾರುಕನೊಂದಿಗೆ ಬಂದು ರಾಮ–ಕೃಷ್ಣರ ಕಳೇಬರಗಳಿಗೆ ದಹನಸಂಸ್ಕಾರವನ್ನು ಮಾಡುವುದು. ಹೀಗೆ ಮರಣದಲ್ಲಿಯೂ ಕೃಷ್ಣನು ಮಾನುಷವ್ಯಕ್ತಿಯೇ, ಅಸಾಧಾರಣಚಾರಿತ್ರ್ಯದವನೇ.

(7) ಜಾನಪದ ಚೌಕಟ್ಟು

ಇಷ್ಟೆಲ್ಲ ಹೇಳಿದರೂ ಕೃಷ್ಣನ ಜನಪ್ರೀತಿಯ ಗುಟ್ಟು ಬಯಲಾಗುವುದಿಲ್ಲ. ಇತಿಹಾಸ ಸಾಮಾನ್ಯಜನರ ಮೇಲೆ ಪ್ರಭಾವ ಬೀರುವುದು ಕಡಮೆಯೇ. ಮಹಾಭಾರತಯುದ್ಧವೇನೋ ಅರಸೊತ್ತಿಗೆಗಳ ಹಗರಣದಲ್ಲಿ ಮುಖ್ಯವಾದ ಪ್ರಸಂಗವೇ. ಪ್ರಾಚೀನಭಾರತದ ಸ್ವರೂಪ–ಸ್ವಭಾವಗಳನ್ನೂ ಬದಲಿಸಿರಬಹುದು. ಆದರೆ ಜನಜೀವನದಲ್ಲಿ ಇದರ ಪಾತ್ರ ವೆಷ್ಟಿದ್ದೀತು ? ನಿದರ್ಶನಗಳನ್ನು ನಾವು ಗುರುತಿಸಲಾರೆವು. ಮಹಾಭಾರತದಲ್ಲಿ ಪ್ರಧಾನವ್ಯಕ್ತಿಯಾಗಿರುವವನು ಕೃಷ್ಣ ಎಂಬ ಕಾರಣದಿಂದ ಕೃಷ್ಣ ಜನಪ್ರಿಯನಾದನೆಂದು ಹೇಳುವಂತಿಲ್ಲ. ಮುಂದೆ ಹರಿವಂಶ ಅವನ ಬದುಕಿನಲ್ಲಿ ರಸಮಯವಾದ ಸಂದರ್ಭಗಳನ್ನೂ ಸಾಹಸದ ಪ್ರಸಂಗಗಳನ್ನೂ ಸೇರಿಸಿ ಅವನ ವ್ಯಕ್ತಿತ್ವಕ್ಕೆ ವಿಶೇಷವಾದ ಕಳೆಯನ್ನು ಒದಗಿಸಿತು, ನಿಜ. ಆದರೆ ಹರಿವಂಶಕ್ಕೆ ಈ ಪ್ರೇರಣೆ ಬಂದುದು ಎಲ್ಲಿಂದ ? ಋಷಿಯಾದ, ಯೋಗೇಶ್ವರನಾದ ವಾಸುದೇವಕೃಷ್ಣನನ್ನು ಅವತಾರದ ನೆಲೆಗೆ ಏರಿಸುವ ಒತ್ತಾಯ ಎಲ್ಲಿಂದ ಬಂದಿತು ? ಭಾಗವತವೇ ಮೊದಲಾದ ಪುರಾಣಗಳಾದರೂ ಕೃಷ್ಣನನ್ನೇ ಮೇಲೇರಿಸಿಕೊಂಡು ಹೋದುದು ಹೇಗೆ ? ಲೋಕೋತ್ತರಧರ್ಮದ ಮಾನುಷವ್ಯಕ್ತಿಯಾದ ಕೃಷ್ಣನನ್ನು ಲೋಕಾತೀತನಾದ ಭಗವಾನ್ ವಿಷ್ಣುವೇ ಎಂದು ಹೇಳುವ ಮನೋಧರ್ಮ ಉಂಟಾದುದು ಹೇಗೆ ?

ಒಂದು ವಿವರವೇನೋ ಮುಂದೆ ನಿಲ್ಲುತ್ತದೆ. ಪಾಂಚರಾತ್ರ ಸಂಪ್ರದಾಯ (ಭಾಗವತ, ಸಾತ್ತ್ವತ, ನಾರಾಯಣೀಯ, ಐಕಾಂತಿಕ ಎಂದೆಲ್ಲ ಕರೆಸಿಕೊಳ್ಳುವ ಸಂಪ್ರದಾಯ) ಬಲಗೊಂಡುದು ಭಕ್ತಿಯ ದಾರಿಯೇ ಪ್ರಮುಖವಾಗಿ ಕಾಣಿಸಿಕೊಂಡು ಭಗವಾನನ ಕಲ್ಪನೆ ಅಗತ್ಯವಾಯಿತು. ಈ ಸಂಪ್ರದಾಯದ ಪ್ರವರ್ತಕನೇ ವಾಸುದೇವ–ಕೃಷ್ಣನೆಂಬ ಒಕ್ಕಣೆಯೂ ಇದೆ. ಇವನನ್ನೇ ಭಗವಾನನೆಂದು ಕರೆದಿರುವುದು ಸಾಧ್ಯ, ಸಂಭಾವ್ಯ.

ಈಗಿನ ಮಹಾಭಾರತದಲ್ಲಿ (ಶಾಂತಿಪರ್ವ, ಮೋಕ್ಷಧರ್ಮ)

'ನಾರಾಯಣೀಯ'ವೆನಿಸಿಕೊಳ್ಳುವ ಭಾಗದಲ್ಲಿ ಭಗವಾನನನ್ನು 'ಪಂಚಕಾಲ ಕರ್ತೃಗತ'ನೆಂದು ಹೇಳಿದೆ. 'ಪಂಚಕಾಲ'ವನ್ನು (ಎಂದರೆ ಸಾತ್ತ್ವತವಿಧಿ) ಅನುಷ್ಠಾನಮಾಡುವವರು ಇವನನ್ನು ತಿಳಿದಾರು ಎಂದು ಆ ಮಾತಿನ ಅರ್ಥ. ಪಂಚರಾತ್ರಸತ್ರವನ್ನು ಮಾಡಿ ನಾರಾಯಣನು ಲೋಕೋತ್ತರ ನಾದದ್ದು ಶತಪಥ ಬ್ರಾಹ್ಮಣದಲ್ಲಿಯೇ (12,3,4,1 ಮತ್ತು 13,6,1) ಇದೆ. ನರರು ಎಂದರೆ ಮನುಷ್ಯರು, ಎಲ್ಲಿ ನೆಲೆಗೊಳ್ಳುವರೋ ಅದೇ ನಾರಾಯಣ (ನರರ ಅಯನ) ; ನರರ ಸಮಷ್ಟಿಪ್ರತೀಕ, ವಿರಾಟ್‌ರೂಪ ; ವಿಶ್ವರೂಪವೆಂದರೂ ಒಪ್ಪುತ್ತದೆ. ನರನಂತೆ ನಾರಾಯಣ ಒಬ್ಬ ವ್ಯಕ್ತಿ ಯಲ್ಲ, ಅದೊಂದು ವಿಶಿಷ್ಟಕಲ್ಪನೆ.

ಆದರೆ ಈ ನಾರಾಯಣ ಸಂಪ್ರದಾಯ ವೃಷ್ಣಿವಂಶದ ಸಂಕರ್ಷಣ–ವಾಸುದೇವರ ಸಂಪ್ರದಾಯವನ್ನು ಒಳಗೊಂಡಾಗ ಭಕ್ತಿಗೆ ನಿರ್ದಿಷ್ಟವಾದ ಒಂದು ಭೂಮಿಕೆ ಸಿದ್ಧವಾಯಿತು. ಇದೇ ಭಾಗವತಧರ್ಮ. ಇದನ್ನು ಅಹಿರ್ಬುಧ್ನ್ಯ–ಸಂಹಿತೆ, ನಾರದಪಾಂಚರಾತ್ರ, ಸಾತ್ತ್ವತಶಾಸ್ತ್ರ ಮುಂತಾದ ಗ್ರಂಥಗಳಲ್ಲಿ ಕಾಣಬಹುದು. ಸಾತ್ತ್ವತಶಾಸ್ತ್ರದಲ್ಲಿ ಹೇಳಿರುವ ಭಾಗವತ ಧರ್ಮವನ್ನು ಮೊಟ್ಟಮೊದಲು ಬೋಧಿಸಿದವನು ಯೋಗಿಯಾದ ಶೇಷ–ಸಂಕರ್ಷಣ (ಎಂದರೆ ಬಲರಾಮ, ಕೃಷ್ಣನ ಅಣ್ಣ) ಎನ್ನುವ ಮಾತು ಭಾಗವತದಲ್ಲೇ (6,16,33–46) ಇದೆ. ದ್ವಾಪರಯುಗ ಮುಗಿಯು ವಾಗ ಸಾತ್ತ್ವತವಿಧಿಯನ್ನು ಸಂಕರ್ಷಣನು ಹೇಳಿದನೆಂದು ಮಹಾ ಭಾರತವೂ (ಭೀಷ್ಮಪರ್ವ, 66,40) ತಿಳಿಸುತ್ತದೆ. ವಿಷ್ಣುಧರ್ಮೋತ್ತರ ಪುರಾಣವು ಕೂಡ (3,142,5) ಪಾಂಚರಾತ್ರಜ್ಞಾನವು ಸಂಕರ್ಷಣನಿಂದಲೇ ಹೊರಬಂದಿತೆಂದು ವಿವರಿಸುತ್ತದೆ. ಹೀಗಾಗಿ ಭಾಗವತಧರ್ಮದ ಮೊದಲ ಹಂತದಲ್ಲಿ ಸಂಕರ್ಷಣನೇ ಭಗವಾನನೆಂಬ ಕಲ್ಪನೆ ಬೇರೂರಿಕೊಂಡಿತು.

ವೃಷ್ಣಿವಂಶದ ವೀರರಲ್ಲಿ ಒಬ್ಬನಾಗಿ, ವಸುದೇವ–ರೋಹಿಣಿಯರ ಮಗನಾಗಿ, ರೈವತರಾಜಪುತ್ರಿಯಾದ ರೇವತಿಯ ಗಂಡನಾಗಿ, ತನ್ನ ಸೋದರ (ಎಂದರೆ ವಸುದೇವ–ದೇವಕಿಯರ ಮಗ) ವಾಸುದೇವನ ಸಹಚರನಾಗಿ ಪ್ರಭಾವಶಾಲಿಯಾದುದು ಹಲವು ಪುರಾಣಗಳಲ್ಲಿ ಬರುವ ವಿವರ (ಬ್ರಹ್ಮ ಪುರಾಣ, 7,33–84 ; ವಿಷ್ಣುಪುರಾಣ, ಪಂಚಮಾಂಶ ; ಕೂರ್ಮ ಪುರಾಣ 1,25,79 ; ಭಾಗವತಪುರಾಣ, ಹತ್ತನೆಯ ಹನ್ನೊಂದನೆಯ ಸ್ಕಂಧಗಳು ; ಬ್ರಹ್ಮಾಂಡಪುರಾಣ, ದ್ವಿತೀಯ ಖಂಡ, 101–7 ಇತ್ಯಾದಿ). ವಸುದೇವನ ಮಗನಾದುದರಿಂದ ಇವನೂ ವಾಸುದೇವನೇ ಎನ್ನಬಹು

ದಾದರೂ, ವಾಸುದೇವನೆಂಬ ಹೆಸರು ಕೃಷ್ಣನಿಗೇ ಮೀಸಲಾಗಿ ಇವನನ್ನು ಸಂಕರ್ಷಣನೆಂದೇ ವ್ಯವಹರಿಸುವುದು ವಾಡಿಕೆ. ವಾಸುದೇವನೆಂದರೆ 'ವಸ್' ಧಾತುವಿನಿಂದ ಒದಗಿ ಎಲ್ಲೆಡೆಯಲ್ಲೂ ಇರುವವನು, ಎಲ್ಲವನ್ನೂ ಇರಿಸುವವನು ಎಂಬರ್ಥವೇ ಮೊದಲಿಗೆ ಇದ್ದಂತೆ ಸೂಚನೆಯಿದೆ.

ಇದು ಏನಾದರಿರಲಿ, ಸಂಕರ್ಷಣನನ್ನು ನಾಗಾರಾಧಕರು ಮೆಚ್ಚಿ ಬಳಸಿಕೊಂಡರು. ಈ ಶೇಷ–ಸಂಕರ್ಷಣನನ್ನೇ ಸಂಕರ್ಷಣ–ರುದ್ರನೆಂದು ಕರೆದಿರುವುದೂ ಉಂಟು (ಸನತ್ಕುಮಾರ ಸಂಹಿತೆ, 3,6,6,7 ; ಬ್ರಹ್ಮಾಂಡ ಪುರಾಣ, 23,137 ; ವಿಷ್ಣುಪುರಾಣ 2,5,18 ಇತ್ಯಾದಿ). ಕಲಿ ಯುಗದ ಆದಿಯಲ್ಲಿ ಇವನ ಬೋಧನೆ ಬಲವನ್ನು ಒದಗಿಸಿದುದರಿಂದ ಇವನು ಬಲದೇವನೆಂದೂ ಬಲಭದ್ರನೆಂದೂ ಕರೆಸಿಕೊಂಡ. ಎಲ್ಲ ಭೂತ ಗಳಿಗೂ ಅಗ್ರಜನೆಂದು ಸಂಕರ್ಷಣನ ಸೃಷ್ಟಿಯಾಯಿತೆಂದೂ, ಅವನಿಂದ ನಾರಾಯಣ ತೋರಿಕೊಂಡನೆಂದೂ ಮಹಾಭಾರತದಲ್ಲಿ (ಭೀಷ್ಮಪರ್ವ, ಭೀಷ್ಮವಧಪರ್ವ, 67,11) ಹೇಳಿದೆ. ಮೊದಲಿಗೆ 'ಸಂಕರ್ಷಣ–ವಾಸು ದೇವ'ರೆಂಬ ಕ್ರಮವೇ ಇದ್ದಿತೆಂದು ಸೂಚಿಸಿದೆವಷ್ಟೆ ; ಸಂಕರ್ಷಣನಿಗೂ ವಾಸುದೇವನಿಗೂ ಗುಡಿಗಳು ಕ್ರಿಸ್ತಪೂರ್ವ ಎರಡನೆಯ ಶತಮಾನದಷ್ಟು ಹಿಂದೆಯೇ ಇದ್ದುವೆಂಬುದನ್ನೂ ಈಗಾಗಲೇ ತಿಳಿಸಿದೆ. ಸಂಕರ್ಷಣನು ದೇವತೆಯೆಂಬ ಪ್ರತೀತಿ ಹೀಗೆ ಬಲವಾಗಿದ್ದರೂ ಅವನ ಸ್ವಭಾವವನ್ನು ಗಮನಿಸಿದರೆ ಮೊದಲಿಗೆ ಅವನು ಮಾನುಷವೀರನೇ. ಅವನು ಮಧು ಪ್ರಿಯ (ವಿಷ್ಣುಪುರಾಣ, 5, 25), ಜಗಳಗಂಟ (ಅಲ್ಲಿಯೇ, 4,13,99), ಮುಂಗೋಪಿ (ಅಲ್ಲಿಯೇ, 5,25,8–24), ಶೀಘ್ರಕೋಪಿ (ಭಾಗವತ, 10, 68) ; ಅವನ ಆಯುಧ ನೇಗಿಲು (ಹಲಭೃತ್, ಲಾಂಗಲಿ) ಎಂದರೆ ಬೇಸಾಯಗಾರ ; ಯಮುನೆಯನ್ನೇ ಎಳೆದುತಂದವನು (ಸಂಕರ್ಷಣ), ಎಂದರೆ ಊರ ಜನರಿಗೆ ನೀರನ್ನು ಒದಗಿಸಿದವನು.

ಇವನ ಶೌರ್ಯ, ಪರಾಕ್ರಮ, ಲೋಕೋಪಕಾರಗಳನ್ನು ನೋಡಿ ಜನ ಇವನನ್ನು ದೇವಾಂಶಸಂಭೂತನೆಂದು ಬಗೆದದ್ದು ಆಶ್ಚರ್ಯವಲ್ಲ. ಮೇಲಾಗಿ ಯೋಗಿ, ಪಂಥಪ್ರವರ್ತಕ ; ಅವನಿಗೆ ವಂಶವೀರರ ಪಂಕ್ತಿಯಲ್ಲಿ ಅಗ್ರಮರ್ಯಾದೆ ದೊರೆತದ್ದೂ ಆಶ್ಚರ್ಯವಲ್ಲ. ಆದರೆ ಅವನ ಮೊದಲ ಹಿರಿಮೆ ವೃಷ್ಣಿವಂಶಕ್ಕೆ ಸೀಮಿತವಾಗಿದ್ದಿರಬೇಕು ; ಮಹಾಭಾರತ ಪ್ರಸಂಗ ದಲ್ಲಿ, ಎಂದರೆ ವೃಷ್ಣಿವಂಶದ ಹೊರಗೆ ನಾಡಿನ ವಿವಿಧ ಜನಾಂಗಗಳ ನಡುವೆ,

ಅವನ ಪಾತ್ರ ಅಷ್ಟೇನು ಮುಖ್ಯವಾದುದಲ್ಲ ; ಕೃಷ್ಣನೊಂದಿಗೆ ಇರುತ್ತಿದ್ದವನೆಂದಷ್ಟೇ ಅವನ ಪ್ರಸ್ತಾಪ. ಕೃಷ್ಣನಿಗಾದರೆ ವ್ಯಾಪಕವಾದ ಯಶಸ್ಸು.

ಅವನೂ ಕೃಷ್ಣನೂ ಯಾದವ ಜನರ ನಾಯಕರಾಗಿದ್ದವರು. ಯಾದವರಿಗೆ ರಾಜನೆಂಬುವನು ಇರುತ್ತಿರಲಿಲ್ಲ, ಆದರೆ ಅವರ ಹಿತವನ್ನು ಕಾಪಿಡುವ ವೀರರು ಜನನಾಯಕರಾಗಿ ಗೌರವವನ್ನು ಪಡೆಯುತ್ತಿದ್ದರು. ಉಗ್ರಸೇನನಾಗಲೀ, ಕಂಸನಾಗಲೀ, ಜರಾಸಂಧನಾಗಲೀ, ಭೀಷ್ಮಕನಾಗಲೀ ರಾಜರಾಗಿದ್ದಂತೆ ವಸುದೇವ ರಾಜನಾಗಿರಲಿಲ್ಲ. ಅವನು ಜನನಾಯಕನೂ ಆಗಿದ್ದ ಉಲ್ಲೇಖವಿಲ್ಲ. ಆದರೆ ಅವನ ಮಕ್ಕಳು (ಬಲರಾಮ, ಕೃಷ್ಣರು) ತಮ್ಮ ಸಾಮರ್ಥ್ಯ, ಚಾತುರ್ಯ, ಸಾಹಸಗಳಿಂದ ವೀರರಾದರು, ನಾಯಕರೆನಿಸಿದರು ; ದಕ್ಷಿಣಕನ್ನಡಜಿಲ್ಲೆಯ ಕೋಟಿ–ಚೆನ್ನಯರಿದ್ದಂತೆ ಎಂದುಕೊಳ್ಳಿ. ಕೋಟಿ–ಚೆನ್ನಯರಿಗೆ ಗರಡಿಗಳಿರುವಂತೆಯೇ ರಾಮ–ಕೃಷ್ಣರಿಗೆ ಪೂಜಾಸ್ಥಾನಗಳಿರುತ್ತಿದ್ದ ಉಲ್ಲೇಖ ಹಲವಾರು ಶಾಸನಗಳಲ್ಲಿ ಬರುತ್ತದೆ. ಅವರ ವಿಚಾರವಾಗಿ ಕಥೆಗಳೂ ಹಾಡುಗಬ್ಬಗಳೂ ಸಾಹಸ ವೃತ್ತಾಂತಗಳೂ ಜನಜನಿತವಾಗಿ ಪ್ರಚುರವಾಗಿದ್ದಿರಬಹುದು–ದೈವಗಳ ಪಾಡ್ದನಗಳಿರುವಂತೆ. ಗುಡಿಗಳಲ್ಲಿ ಅವನ್ನು ಹಾಡಿ, ಕುಣಿತಕ್ಕೆ ಬಳಸಿಕೊಂಡು, ಉತ್ಸವಕ್ಕೆ ಅಳವಡಿಸಿಕೊಂಡು, ನಿರೂಪಣೆಯಲ್ಲಿ ಅವಕ್ಕೆ ಮೆರಗು ಕೊಟ್ಟು ಜನರು ಆದರದಿಂದ ಕಾಣುತ್ತಿದ್ದಿರಬೇಕು. ಇಂಥ ಜಾನಪದ ಕಥೆಗಳೂ ಗೀತಗಳೂ ಇಂದಿಗೂ ನಾಡಿನಲ್ಲೆಲ್ಲ ಬಳಕೆಯಲ್ಲಿವೆಯಲ್ಲವೆ ? ಬಲರಾಮ–ಕೃಷ್ಣರ ವಿಚಾರವಾಗಿಯೂ ಇಂಥ ಜಾನಪದ ಕಥೆ, ಗೀತೆಗಳಿದ್ದು, ಪುರಾಣಗಳಿಗೆ ಅವೇ ಸಾಮಗ್ರಿಯನ್ನು ಒದಗಿಸಿರಬೇಕು. ಭಾಗವತ, ಹರಿವಂಶ, ಪುರಾಣಗಳು ಜನಸಾಮಾನ್ಯರ ಮನರಂಜನೆ, ಬೋಧೆಗಳೆರಡಕ್ಕೂ ಸಿದ್ಧವಾದುವೆಂದು ತೋರುತ್ತದೆ.

ಕವಿಗಳಿಗೂ ಇಂಥ ಜಾನಪದಸಾಮಗ್ರಿ ಪ್ರಶಸ್ತವಾದುದೇ. ತಮ್ಮ ಕಲ್ಪನಾಶಕ್ತಿಯನ್ನು ಸ್ವೇಚ್ಛೆಯಿಂದ ಪ್ರಯೋಗಿಸಿ, ಅದ್ಭುತಗಳನ್ನೂ ರಂಜಕಗಳನ್ನೂ ಒಟ್ಟಿಗೆ ಹೆಣೆದು ರವಿ ಕಾಣದುದನ್ನೂ ತಾವು ಕಂಡು ಜನರಿಗೆ ಕಾಣಿಸುವುದು ಕವಿಗಳ ಕೆಲಸ. ನಡುಯುಗದ ಕಾವ್ಯಧರ್ಮದಲ್ಲಿ ಶೃಂಗಾರ, ವೀರ, ಅದ್ಭುತರಸಗಳಿಗೆ ಒತ್ತು ಹೆಚ್ಚು. ಹೀಗಾಗಿ ಕೃಷ್ಣನನ್ನು ಕುರಿತು ವಿಪುಲವಾದ ಕಾಲ್ಪನಿಕ ಸಾಹಿತ್ಯ ಸಿದ್ಧವಾಯಿತು. ಬ್ರಹ್ಮವೈವರ್ತಪುರಾಣಕಾರನು ತನ್ನ ಕನಸಿನಲ್ಲಿ ಕಂಡುಹಿಡಿದ ರಾಧೆ ಜಯದೇವನ ಗೀತಗೋವಿಂದ ಕಾವ್ಯಕ್ಕೆ ದಿಟವಾದ ನಾಯಕಿಯಾದಳಷ್ಟೆ. ಮುಂದೆ

ರಾಧಾಮಾಧವವೆಂಬ ಸಾಹಿತ್ಯಪ್ರಕಾರ ಭಾಗವತರ, ವೈಷ್ಣವರ ಉತ್ಸಾಹ ದಲ್ಲಿ ಮೇರೆಮೀರಿ ಹಬ್ಬಿಕೊಂಡಿತು. ಕೃಷ್ಣನ ಜನಪ್ರೀತಿ ಒದಗಿದುದು ಹೀಗೆ. ಪುರಾಣಕಾರರೂ ಕವಿಗಳೂ ಕೃಷ್ಣನಿಗೆ ಪ್ರಚಾರವನ್ನು ಒದಗಿಸಿ ದರು. ಬಲದೇವನ ವಿಚಾರವಾಗಿ ಕವಿಗಳಿಗೂ ಪುರಾಣಕಾರರಿಗೂ ಅಷ್ಟಾಗಿ ಆದರವಿರಲಿಲ್ಲ ; ಅವನಲ್ಲಿ ಶೃಂಗಾರದ ಭಾಗ ಸೊನ್ನೆ. ಅವನಿಗೆ ಪ್ರಿಯ ವಾದುದು ಹೆಂಡ ; ತನ್ನ ಒಬ್ಬಳೇ ಹೆಂಡತಿ ರೇವತಿಯಲ್ಲೇ ಅನುರಕ್ತ. ಮಹಾಭಾರತದ ಕಥೆಯಲ್ಲೂ ಅವನ ಪಾತ್ರ ತೀರ ಸಣ್ಣದು. ಮಹಾ ಕಾವ್ಯಕ್ಕೆ ತಕ್ಕ ನಾಯಕನಲ್ಲವಲ್ಲ ?

ಭಾಗವತ ಪಂಥದ ಬೆಳವಣಿಗೆಯಲ್ಲೂ ಸಂಕರ್ಷಣ ಹಿಂದೆ ಬಿದ್ದು ವಾಸುದೇವ ಮೇಲೇರಿನಿಂತಿದುದನ್ನು ಆಗಲೇ ಅರಿಕೆಮಾಡಿಕೊಂಡಿದ್ದೇನೆ. ವ್ಯೂಹದ ಕಲ್ಪನೆ ಸರ್ವಸಮ್ಮತವಾದಾಗ ಪರ–ವಾಸುದೇವನ ಮೇಲ್ಮೆಯೇ ಕಾಣಿಸಿಕೊಂಡದ್ದು. 'ವಾಸನಾದ್ವಾಸುದೇವ'ನಾದ ಇವನನ್ನು 'ವಸುದೇವ ಪುತ್ರ'ನಾದ ವಾಸುದೇವ–ಕೃಷ್ಣನೊಂದಿಗೆ ಹೊಂದಿಸಿಕೊಂಡಾಗ ಸಂಕರ್ಷಣ– ರಾಮನದು ಎರಡನೆಯ ಸ್ಥಾನವಾಯಿತು. ಬರುಬರುತ್ತ ಜನರ ಪ್ರಚಲಿತ ಧರ್ಮದಲ್ಲಿ ಅವನ ಪಾತ್ರ ತುಂಬ ಸೀಮಿತವಾಯಿತು.

ಆದರೆ ಜಾನಪದ ನೆಲೆಯಲ್ಲಿ ಅವರಿಬ್ಬರಿಗೂ ಸಮಾನವಾದ ಸ್ಥಾನ ವಿದ್ದುದು ಹಲವಾರು ವಿವರಗಳಿಂದ (ಮುಖ್ಯವಾಗಿ ಶಾಸನಗಳಿಂದ, ಪ್ರಾಚೀನ ಉಲ್ಲೇಖಗಳಿಂದ) ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಇದೊಂದು ವಿವರವನ್ನು ಗಮನಿಸಬೇಕು. ಈಗ ಕೃಷ್ಣನ ಆರಾಧನೆಗೆ ಮುಖ್ಯ ಸ್ಥಳವೆನಿಸಿದ ಪುರಿ–ಜಗನ್ನಾಥದಲ್ಲಿ ಪೂಜೆಗೊಳ್ಳುವ ಮೂರ್ತಿಗಳು ಮೂರು—ಬಲಭದ್ರ, ಕೃಷ್ಣ, ಸುಭದ್ರೆ. ಮೂರ್ತಿವ್ಯವಸ್ಥೆಯಲ್ಲೂ ಪೂಜಾಪದ್ಧತಿಯಲ್ಲೂ ಉತ್ಸವಾದಿ ಉಪಚಾರಗಳಲ್ಲೂ ಮೂವರಿಗೂ ಸಮಾನಸ್ಥಾನವೇ. ಬಲಭದ್ರ–ಕೃಷ್ಣರೇನೋ ಸರಿ, ಸುಭದ್ರೆ ಎಲ್ಲಿಂದ ಬಂದಳು ? ಮಹಾಭಾರತದಲ್ಲಿ ಸುಭದ್ರೆ ಬಲರಾಮ–ಕೃಷ್ಣರ ತಂಗಿ, ಅರ್ಜುನನ ಹೆಂಡತಿ, ಅಭಿಮನ್ಯುವಿನ ತಾಯಿ. ಪುರಿ ದೇವಸ್ಥಾನದ ಒಂದು ಕಥೆಯೂ ಇದನ್ನೇ ಹೇಳಿ, ಪೂಜೆಗೊಳ್ಳುತ್ತಿರುವವರು ಅಣ್ಣ–ತಂಗಿಯ ರೆಂದು ವಿವರಿಸುತ್ತದೆ. ಆದರೆ ಪೂಜಾಪದ್ಧತಿಯೂ, ಅದಕ್ಕೆ ಸಂಬಂಧ ಪಟ್ಟ ಆಗಮಗಳೂ ಇಲ್ಲಿನ ಜಗನ್ನಾಥ ಕೃಷ್ಣನನ್ನು ಪುರುಷೋತ್ತಮ ನೆಂದೂ ಸುಭದ್ರೆಯನ್ನು ಮಹಾಲಕ್ಷ್ಮಿಯೆಂದೂ ಪರಿಗಣಿಸುತ್ತವೆ. ಪೂಜಾ ಕ್ರಮದಲ್ಲಿ ಆಕೆಯ ಪೂಜೆ ಭುವನೇಶ್ವರಿಯ ಮಂತ್ರದಿಂದ (ಹ್ರೀಂ)

ನಡೆಯುತ್ತದೆ ; ಶಾಕ್ತಸಂಪ್ರದಾಯದ ವಿವರಗಳುಂಟು. ಮೊದಲಿಗೆ ನರಸಿಂಹ (ಪುರುಷೋತ್ತಮ)–ಲಕ್ಷ್ಮಿಯರಿಬ್ಬರೇ ರತ್ನವೇದಿಕೆಯ ಮೇಲೆ ಇದ್ದ ಮೂರ್ತಿಗಳೆಂದೂ, ಕಾಲಕ್ರಮದಲ್ಲಿ ಬಲಭದ್ರನೂ ಅಲ್ಲಿಗೆ ಬಂದು ನಿಂತಮೇಲೆ, ಲಕ್ಷ್ಮಿಯೆನ್ನುವ ಬದಲು, ಕೃಷ್ಣ–ಬಲರಾಮರ ಸೋದರಿ ದುರ್ಗೆಯ ಅವತಾರವಾಗಿ ಸುಭದ್ರೆಯೆಂದೂ, ನರಸಿಂಹನ ಬದಲು ಕೃಷ್ಣನೆಂದೂ ಗುರುತಿಸತೊಡಗಿದರೆಂದೂ ಒಂದು ವಿವರಣೆಯಿದೆ.

ಅಲ್ಲಿ ಬಲಭದ್ರನಿಗೆ ವಿಶೇಷವಾದ ಗೌರವವೆಂದರೆ, ರಥಯಾತ್ರೆಯಂದು ಅವನ ರಥವೇ ಮೊದಲು ಗುಂಡೀಚದ ಕಡೆ ಹೊರಡುವುದು. ಮೂವರಲ್ಲಿ ಅವನೇ ಜ್ಯೇಷ್ಠನಷ್ಟೆ ? ಅದು ಮಾತ್ರವಲ್ಲ, ಇನ್ನೂ ಒಂದು ಸ್ವಾರಸ್ಯವಿದೆ. ಎರಡು ಪುರುಷಮೂರ್ತಿಗಳನ್ನು ಪೂಜೆಮಾಡುವಾಗ ಬಳಸುವ ಮಂತ್ರಗಳು, ಕೃಷ್ಣ–ಜಗನ್ನಾಥನಿಗೆ 'ಕ್ಲೀಂ ಕೃಷ್ಣಾಯ ಗೋವಿಂದಾಯ ಗೋಪೀಜನವಲ್ಲಭಾಯ ಸ್ವಾಹಾ' ಎಂಬ ಕೃಷ್ಣ ಅಷ್ಟಾದಶಾಕ್ಷರಿ ಮಂತ್ರ, ಬಲಭದ್ರನಿಗೆ 'ಓಂ ನಮೋ ಭಗವತೇ ವಾಸುದೇವಾಯ' ಎಂಬ ಪ್ರಸಿದ್ಧವಾದ ವಾಸುದೇವದ್ವಾದಶಾಕ್ಷರೀಮಂತ್ರ. ಇಲ್ಲಿ ಬಲಭದ್ರನನ್ನೇ ವಾಸುದೇವನೆಂದು ಪರಿಗಣಿಸಿರುವುದನ್ನು ಗಮನಿಸಬೇಕು ಮತ್ತು ಬಲಭದ್ರನ ಪೂಜೆಯಲ್ಲಿ ಶೈವಸಂಪ್ರದಾಯದ ಪ್ರಭಾವ ಕಾಣಿಸುತ್ತದೆ.

ಪುರಿಯ ಜಗನ್ನಾಥದೇವಾಲಯದಲ್ಲಿ ರತ್ನವೇದಿಕೆಯ ಮೇಲೆ ನಡುವೆ ಸುಭದ್ರೆಯೂ ಅವಳ ಎರಡೂ ಪಕ್ಕಗಳಲ್ಲಿ ಜಗನ್ನಾಥ–ಕೃಷ್ಣ ಮತ್ತು ಬಲಭದ್ರರು ಇರುವಂತೆ ವ್ಯವಸ್ಥೆಯಿದೆ. ವರಾಹಮಿಹಿರನ ಬೃಹತ್ಸಂಹಿತೆಯಲ್ಲಿ (50,37–39) ಏಕಾನಂಶೆಯೆಂಬ ದೇವಿಯ ಮೂರ್ತಿಯನ್ನು ಪೂಜಿಸುವಾಗ ಅವಳ ಒಂದು ಕಡೆ ಕೃಷ್ಣನೂ ಇನ್ನೊಂದು ಕಡೆ ಬಲದೇವನೂ ಇರಬೇಕೆಂಬ ವಿಧಿಯನ್ನು ಹೇಳಿದೆ. ಈ ಏಕಾನಂಶೆ ಯಾರು ? ವೃಷ್ಣಿವಂಶದವರು ಏಕಾನಂಶೆಯೆಂಬ ಶಕ್ತಿದೇವತೆಯನ್ನು ಪೂಜಿಸುತ್ತಿದ್ದರೆಂಬ ಪ್ರಸ್ತಾಪ ಬ್ರಹ್ಮಾಂಡಪುರಾಣ (3,71,220) ಮತ್ತು ವಾಯುಪುರಾಣ (2,34,203)ಗಳಲ್ಲಿ ಬಂದಿದೆ. ನಂದ–ಯಶೋದೆಯರ ಮಗಳೆಂದೂ ವಿಷ್ಣುವಿನ ಯೋಗನಿದ್ರೆಯ ಅಂಶಾವತಾರವೆಂದೂ ಕಂಸನು ಮಗುವಾದ ಅವಳನ್ನು ಕೊಲ್ಲಲೆತ್ತಿದಾಗ ಅವನ ಕೈಯಿಂದ ತಪ್ಪಿಸಿಕೊಂಡು ಮೇಲೆ ಹಾರಿ, ತನ್ನ ರೂಪವನ್ನೇ ತಳೆದು (ಎಂದರೆ ದುರ್ಗೆಯಾಗಿ) ಕೃಷ್ಣ ಅವನಿಗೆ ಮಾರಕನಾಗಿ ಬೇರೆಡೆ ಬೆಳೆಯುತ್ತಿರುವುದಾಗಿ ತಿಳಿಸಿ ಮರೆಯಾದಳೆಂದೂ ಹರಿವಂಶದಲ್ಲಿ (2,2,34) ಉಲ್ಲೇಖವಿದೆ. ಮತ್ತು ಕೃಷ್ಣನನ್ನು

ಕಾಪಾಡಿದವಳೆಂದು ಬಗೆದು ವೃಷ್ಣಿವಂಶದವರು ಅವಳನ್ನು ಪೂಜೆಮಾಡ ತೊಡಗಿದರೆಂದೂ ಅಲ್ಲಿಯೇ ಹೇಳಿದೆ (2,2,46). ಬೌದ್ಧವಾಙ್ಮಯದ ಘಟಜಾತಕದಲ್ಲಿ ಬಲದೇವ, ವಾಸುದೇವರು ಅಂಜನಾದೇವಿಯ ತಮ್ಮಂದಿ ರೆಂಬ ಪ್ರಸ್ತಾಪವಿದೆ ; ಅಂಜನಾದೇವಿ ಕೃಷ್ಣವರ್ಣದ ದೇವತೆಯೆಂಬ ವರ್ಣನೆಯೂ ಇದೆ. ಕರಿಯ ಬಣ್ಣದವಳಾದ್ದರಿಂದ ಅವಳು ಕೃಷ್ಣೆಯೇ. ಲಲಿತವಿಸ್ತರದಲ್ಲಿ (ಕ್ರಿಸ್ತಪೂರ್ವ ಮೊದಲನೆಯ ಶತಮಾನದಲ್ಲಿ ರಚಿತವಾದ ಸಂಸ್ಕೃತ ಕಾವ್ಯಗ್ರಂಥ ; ಬುದ್ಧನ ಬದುಕನ್ನು ಕುರಿತದ್ದು) ಏಕಾದಶಾ ಎಂಬ ದೇವತೆ ನಾಡಿನ ಪಶ್ಚಿಮಭಾಗದಲ್ಲಿ (ಎಂದರೆ ವೃಷ್ಣಿಗಳು ಇರುತ್ತಿದ್ದ ಮಥುರಾ, ದ್ವಾರಕೆ ಈ ಪ್ರಾಂತ್ಯದಲ್ಲೇ) ಪೂಜೆಗೊಳ್ಳುತ್ತಿದ್ದ ಉಲ್ಲೇಖ ವಿದೆ. ಆಕೆಯೊಂದಿಗೆ ಇತರ ಏಳು ದೇವತೆಗಳ ಹೆಸರುಗಳೂ ಬರುತ್ತವೆ. ಅವರಲ್ಲಿ ಕೃಷ್ಣೆಯೊಬ್ಬಳು, ದ್ರೌಪದಿ ಇನ್ನೊಬ್ಬಳು.

ಇದರಿಂದ ಒದಗುವ ಸೂಚನೆ ಬಲರಾಮ-ಕೃಷ್ಣರಿಗೆ, ತತ್ರಾಪಿ ಕೃಷ್ಣನಿಗೆ, ರಕ್ಷಕದೇವತೆ ದುರ್ಗೆ, ಶಕ್ತಿ (ಏಕಾನಂಶೆ, ಅಂಜನಾದೇವಿ). ವೃಷ್ಣಿವಂಶದವರು ಶಕ್ತಿಪೂಜಕರಾಗಿದ್ದು ಕೃಷ್ಣ-ಬಲರಾಮರ (ವಾಸು ದೇವ-ಸಂಕರ್ಷಣರ) ಪೂಜೆಯನ್ನು ಶಕ್ತಿಪೂಜೆಯ ಚೌಕಟ್ಟಿನಲ್ಲೇ ಅಳ ವಡಿಸಿಕೊಂಡಿರಬೇಕು. ನಡುವೆ ಸುಭದ್ರೆ (ಶಕ್ತಿದೇವತೆ, ಕಾತ್ಯಾಯನಿ), ಒಂದು ಕಡೆ ಕೃಷ್ಣ-ಜಗನ್ನಾಥ, ಇನ್ನೊಂದು ಕಡೆ ಬಲಭದ್ರ ಹೀಗೆ ಪುರಿ ದೇವಸ್ಥಾನದ ಗರ್ಭಗುಡಿಯಲ್ಲಿ ವ್ಯವಸ್ಥೆಯಿರುವುದು ಶಕ್ತಿಪೂಜೆಯೊಂದಿಗೆ ವೀರಪೂಜೆಯನ್ನು ಹೊಂದಿಸಿಕೊಂಡಿರುವುದರ ವ್ಯಕ್ತರೂಪವೋ ಎಂಬ ಸಂಶಯಬರುತ್ತದೆ.

ಇದೇ ಸಂದರ್ಭದಲ್ಲಿ ಭಾಗವತ ಹೇಳುವ ಕಾತ್ಯಾಯನೀ ಪೂಜೆ ಎಂಬ ವಿವರವನ್ನೂ ನೆನಪಿಗೆ ತಂದುಕೊಳ್ಳಬಹುದು. ನಂದವ್ರಜಕುಮಾರಿಕೆಯರು ಹೇಮಂತದ ಮೊದಲ ತಿಂಗಳಲ್ಲಿ ಎಂದರೆ ಮಾರ್ಗಶೀರ್ಷಮಾಸದ ಎಲ್ಲ ದಿನಗಳ ಮುಂಜಾನೆಯೆಂದು ಕಾಳಿಂದೀನದಿಯ ದಡದ ಮೇಲೆ ಮರಳಿನಿಂದ ಕಾತ್ಯಾಯನೀದೇವಿಯ ಗೊಂಬೆಯನ್ನು ಮಾಡಿ ಪೂಜೆಮಾಡುತ್ತಿದ್ದ ಒಕ್ಕಣೆ ಅಲ್ಲಿದೆ. ಅವರ ಉದ್ದೇಶ ಕೃಷ್ಣನು ತಮ್ಮೆಲ್ಲರ ಗಂಡನಾಗಬೇಕೆಂದು—

'ಕಾತ್ಯಾಯನಿ ಮಹಾಮಾಯೇ ಮಹಾಯೋಗಿನ್ಯಧೀಶ್ವರಿ ।
ನಂದಗೋಪಸುತಂ ದೇವಿ ಪತಿಂ ಮೇ ಕುರು ತೇ ನಮಃ ॥'

(ಭಾಗವತ, 10, 22,4)

ಇಲ್ಲಿ ಕೃಷ್ಣಚೇತಸರಾದ ಕುಮಾರಿಯರು ಪೂಜೆಮಾಡುತ್ತಿದ್ದ ದೇವಿಯನ್ನು

ಈಗಲೂ ನಾಡಿನ ಹಲವೆಡೆ ಹರಡಿಕೊಂಡಿರುವ ಜಾನಪದ ಗೀತೆಗಳಲ್ಲಿ ಕಥೆಗಳಲ್ಲಿ ಇಂಥ ವಿವರಗಳನ್ನು ಗುರುತಿಸಬಹುದು.

ಇಷ್ಟೆಲ್ಲ ವಿವರಗಳನ್ನು ಬಿತ್ತರಿಸಿರುವ ಉದ್ದೇಶವೆಂದರೆ, ಮೂಲ ಐತಿಹಾಸಿಕ ಸಂಗತಿಗಳ ಮೇಲೆ ಜಾನಪದ ಕಲ್ಪನೆಗಳ ಹಂದರ ಹಬ್ಬಿಕೊಂಡು, ಪುರಾಣಗಳ ಆಡಂಬರ, ಉತ್ಪ್ರೇಕ್ಷೆಗಳ ಓಲಾಟದಲ್ಲಿ ಸಿದ್ಧವಾದುದು ಈಗ ಬಳಕೆಯಲ್ಲಿರುವ ಕೃಷ್ಣಚರಿತ್ರೆ ಎಂಬುದನ್ನು ತೋರಿಸುವುದು. ಕೃಷ್ಣನು ಮೂಲದಲ್ಲಿ ಮನುಷ್ಯನೇ. ಆದರೆ ಲೋಕಹಿತೈಷಿ, ಧರ್ಮಸಂಸ್ಥಾಪಕ, ಯೋಗಿ, ಋಷಿಯಾಗಿದ್ದುದರಿಂದ, ನಾಡಿನ ದೊಡ್ಡ ಪ್ರಸಂಗವೊಂದರಲ್ಲಿ ಪ್ರಧಾನವಾದ ಪಾತ್ರ ವಹಿಸಿದುದರಿಂದ, ಅವನ ಆದರ್ಶ–ಉಪದೇಶಗಳು ನಾಡಿನಲ್ಲೆಲ್ಲ ಉಳಿದು ನಿಂತದ್ದರಿಂದ ಅವತಾರವೆನಿಸಿದ.

ಭಾವುಕರಿಗೆ ನೀರಸವಾದ ಇತಿಹಾಸದ ಒಕ್ಕಣೆ ರುಚಿಸದು ; ತತ್ತ್ವಪ್ರಿಯರಿಗೆ ಪುರಾಣದ ಅತಿರೇಕ ಹಿಡಿಸದು. ರಸಿಕರಿಗೆ ಕೇವಲ ಧರ್ಮಸಂಸ್ಥಾಪನೆಯೆಂದರೆ ಆಕರ್ಷಣೆಯಿರದು ; ಸಾಧಕರಿಗೆ ಸಾಂಕೇತಿಕವಾದ ತಾತ್ಪರ್ಯವಿದ್ದರೇ ಸೊಗಸು ; ಜನಸಮಾನ್ಯರಿಗೆ ಸಾಹಸದ ಬದುಕೆಂದರೆ ಆದರ ಹೆಚ್ಚು. ಕಾಣುವವರ ಪ್ರವೃತ್ತಿಯನ್ನು ಅವಲಂಬಿಸಿ ಕೃಷ್ಣ ಕಾಣಿಸಿಕೊಳ್ಳಬೇಕು ! ಗೀತೆಯಲ್ಲಿ ಕೃಷ್ಣ ಒಂದು ಭರವಸೆಯನ್ನೂ ನೀಡಿದ್ದಾನೆನ್ನಿ—

'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ।'

"ಯಾರು ಹೇಗೆ ನನ್ನ ಬಳಿಸಾರುವರೋ ಅವರಿಗೆ ಹಾಗೆಯೇ ತೋರಿಕೊಳ್ಳುತ್ತೇನೆ" ಎಂದು ಈ ಮಾತಿನ ಅರ್ಥ. ಇದೇ ಕೃಷ್ಣನ ವ್ಯಕ್ತಿತ್ವದ ಸೊಗಸು, ಕೃಷ್ಣನ ಕಲ್ಪನೆಯ ಸ್ವಾರಸ್ಯ.